ಇಲ್ಲಿ ಕುಳಿತಿರುವುದು ಬೇಡವೆ? ನನಗೆ ಅರ್ಥವಾಗುತ್ತಾ ಇಲ್ಲ. ಇವರು ಹನಿಮೂನ್‌ಗೆ ಏನಾದರೂ ಹೋಗಿದ್ದಾರೆಯೇ? ಹೊಸದಾಗಿ ಮಂತ್ರಿಗಳಾದ ಮೇಲೆ ಸುಂದರವಾದ ಕಾರ್ ಇತ್ಯಾದಿ ಸಿಕ್ಕಿದೆ ಎಂದು ಓಡಾಟಕ್ಕೆ ಹೋಗಿದ್ದಾರೋ? ಕೆಲವರಿಗೆ ಮನೆಗಳು ಸಿಕ್ಕಿಲ್ಲ ಎಂದು ದೊಡ್ಡ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ. ದೇಶಕ್ಕೆಲ್ಲಾ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಂತ್ರಿಗಳಿಗೆ ಮನೆ ಇಲ್ಲ ಎಂದು ಹೇಳುತ್ತಿದ್ದಾರೆ. ಕಾರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಇದೊಂದು ವಿಪರ್ಯಾಸ, ಇದು ಈ ಶತಮಾನದಲ್ಲಿ ಆಗಬಾರದಿತ್ತು.

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳ ಬೇಕು. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ಹಾಗೆ ವಂದನಾರ್ಪಣ ಪ್ರಸ್ತಾವನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

ಶ್ರೀ ಜಿ.ಎಸ್.ಆಚಾರ್:- ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದ ರಾಜ್ಯಪಾಲರು ಕರ್ನಾಟಕ ವಿಧಾನ ಸಭೆಯಲ್ಲಿ ಮಾಡಿದ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವವನ್ನು ಮಂಡಿಸುತ್ತೇನೆ. ಫೆಬ್ರವರಿ ೧೨, ೧೯೯೩ ರಂದು ಕರ್ನಾಟಕ ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರುಗಳಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು, ಸದನದ ಅಪ್ಪಣೆಯನ್ನು ಕೋರುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ಫೆಬ್ರವರಿ, ೧೨, ೧೯೯೩ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಮಾನ್ಯ ಜಿ.ಎಸ್. ಆಚಾರ್‌ರವರು ಕೋರಿದ ಅಪ್ಪಣೆಯನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾವನೆಯನ್ನು ಮಾಡಲು ಅನುಮತಿಯನ್ನು ನೀಡಲಾಗಿದೆ.

ಶ್ರೀ ಜಿ.ಎಸ್.ಆಚಾರ್:- (ಬೈಂದೂರು) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣ, ರಾಜ್ಯಾಂಗದ ವಿಧಿಯಂತೆ ಪೂರೈಸಬೇಕಾದ, ಸಂವಿಧಾನ ಬದ್ಧವಾದ ಅಗತ್ಯತೆಯಾಗಿದೆ. **Just to satisfy the constitutional obligation**, ಎಂದು ಹೇಳುವವರೂ ಇದ್ದಾರೆ. ಈ ವಂದನಾರ್ಪಣೆ ಹಾಗೆಯೇ ಒಂದು ಆಬ್ಲಿಗೇಶನ್, ಅದನ್ನು ಮಾಡಬೇಕಾದ ಒಂದು ಅವಕಾಶವು ನನಗೆ ಬಂದುದಕ್ಕಾಗಿ, ನಾನು ಸಂತೋಷವನ್ನು ವ್ಯಕ್ತಪಡಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ರಾಜ್ಯದ ಪ್ರಸ್ತುತ ಮುನ್ನೋಟ ಕುರಿತು, ರಾಜ್ಯದ ಸಮಸ್ಯೆಗಳನ್ನು ಕುರಿತು, ಸಾಮಾಜಿಕ ನ್ಯಾಯ ಕುರಿತು, ಜನಜೀವಾಳದ ಅಭಿವೃದ್ಧಿಯ ಚಿಂತನೆಯ ಕುರಿತು, ವರ್ಷಾರಂಭದಲ್ಲಿ ವೈಚಾರಿಕತೆಯ ರೂಪರೇಶೆಯನ್ನು ನೀಡುವುದು ಅಗತ್ಯ. ಅಂಥ ಅಗತ್ಯತೆಯನ್ನು ಪೂರೈಸಿದ್ದಕ್ಕಾಗಿ ನಮ್ಮ ಸನ್ಮಾನ್ಯ ರಾಜ್ಯಪಾಲರನ್ನು ನಾವು ಅಭಿನಂದಿಸಬೇಕಾಗಿದೆ. ನಮ್ಮನ್ನು ಆಯ್ಕೆ ಮಾಡಿದ ಜನರು, ನಮ್ಮಿಂದ, ಸರಕಾರದಿಂದ, ಅಪಾರವಾದ ನಿರೀಕ್ಷೆಯನ್ನು ಮಾಡುತ್ತಾ ಇದ್ದಾರೆ. ಆ ಒಂದು ಗುರಿಯತ್ತ ನಾವು ತಲುಪಬೇಕಾಗಿದೆ. ಜನಸಾಮಾನ್ಯರ ಹರಕೆಯ ಹಾರೈಕೆ, ಸದಾಶಯ, ಸದ್ಭಾವನೆ, ಶುಭಾಶೀರ್ವಾದಗಳನ್ನು ಹೊತ್ತು, ಜನಮನವನ್ನು ಸ್ಪಂದಿಸುವ ಮಹದಾಶಯದಿಂದ, ಅಧಿಕಾರವನ್ನು ಸ್ವೀಕರಿಸಿದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ವೀರಪ್ಪ ಮೊಯಿಲಿಯವರು

ಅಧಿಕಾರ ಸ್ವೀಕರಿಸಿದ ತರುಣದಲ್ಲಿಯೇ ಹೊಸ ಭರವಸೆಯನ್ನು ಮೂಡಿಸಿದ್ದಾರೆ, ಜನ ಮೆಚ್ಚದ ಕಾರ್ಯಕ್ರಮಗಳಿಗೆ ಮಂಗಳ ಹಾಡಿದ್ದಾರೆ, ಸಾಮಾಜಿಕ ಕಳಕಳಿಯ ಆಡಳಿತ ಯಂತ್ರವನ್ನು ರೂಪಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ.

೪.೫೫ ಪಿ.ಎಂ.

ನಾನು ಕಂಡುಕೊಂಡಹಾಗೆ ವಿಭಿನ್ನ ಆಡಳಿತ ಶೈಲಿ ಬಂದಿರುವುದರಿಂದ ಬೇರೆ ರೀತಿಯಲ್ಲಿ ಹೇಳಲು ಒಂದು ಅವಕಾಶ ಇದೆ. ವಿಭಿನ್ನ ಆಡಳಿತಶೈಲಿ ತಂದಿರುವ ವೀರಪ್ಪಮೊಯಿಲಿ ಸಾಗಲಿದೆ ಸರಾಗ ಮೈಲಿ ಮೈಲಿ ಹಾರೈಕೆ ಸರ್ವ ಜನಪದದ ಕೈಲಿ ಇಷ್ಟು ವಿಚಾರ ಹೇಳುತ್ತ, ಮಾನ್ಯ ರಾಜ್ಯಪಾಲರು ಪ್ರಾರಂಭದಲ್ಲಿ ಕೋಮುಘಟನೆ ಕುರಿತು ಉಲ್ಲೇಖ ಮಾಡಿದ್ದಾರೆ. ಸ್ವತಂತ್ರ್ಯ ಭಾರತದ ಇತಿಹಾಸದಲ್ಲೇ ಅತ್ಯಂತ ದುರಂತದ ಘಟನೆ ೧೯೯೨ರ ಡಿಸೆಂಬರ್ ೬ರಂದು ಸಂಭವಿಸಿದ್ದು ರಾಷ್ಟ್ರದ ಸರ್ವಧರ್ಮ ಸಮಭಾವ ಭದ್ರಬುನಾದಿಯೇ ಅಡಗಿಹೋಯಿತು, ಅಲುಗಾಡಿಹೋಯಿತು, ಗಲಭೆಯ ದಳ್ಳುರಿಯಿಂದಾಗಿ ಅನೇಕ ಪ್ರದೇಶಗಳಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗ, ಮಂಗಳೂರು ಹೊರವಲಯದಲ್ಲಿ ಕೋಮುಗಲಭೆಗಳು ಪ್ರಾರಂಭವಾದುವು ಎಂದು ಎತ್ತಿಹೇಳಿದ್ದಾರೆ. ಇದು ಹೇಳಬೇಕಾದ ವಿಚಾರ ಸ್ವತಂತ್ರಭಾರತದಲ್ಲಿ ಶತಮಾನಗಳಿಂದ ಇಡೀ ಜಗತ್ತಿಗೆ ಸಾಮರಸ್ಯ ಭಾವೈಕ್ಯದ ಸಂದೇಶ ಸಾರಿದ ಭಾರತದಲ್ಲಿ ಮಾನವೀಯಮೌಲ್ಯಗಳನ್ನು ಕೇವಲ ರಾಜಕೀಯ ಕಾರಣಗಳಿಗಾಗಿ ಧ್ವಂಸಗೊಳಿಸುವ ಹುನ್ನಾರ ನಡೆದಿವೆ ಎಂದು ಹೇಳಲು ಬಹಳ ದುಃಖವಾಗುತ್ತಿದೆ. ಭಾರತದಾದ್ಯಂತ ಈ ಘಟನೆ ನಡೆದ ನಂತರ ಕಣ್ಣಿದ್ದವರು ಮಾತು ಅರಿತವರು ಬರಹ ಬಲ್ಲವರು ಇದಕ್ಕೆ ನೀಡಿದ ಪ್ರತಿಕ್ರಿಯೆ ತೀರ ಸ್ಪಷ್ಟವಾಗಿದೆ. ಭಾರತದ ಭವ್ಯ ಆದರ್ಶ ಪರಂಪರೆಗೆ ತಕ್ಕುದಾಗಿತ್ತು. ಆದರೆ ಡಿಸೆಂಬರ್ ೬ರಂದು ಕಣ್ಣಿಲ್ಲದವರು ಬೆಳಕು ಬಣ್ಣ ಕಾಣಲಾಗದ ಕಣ್ಣಿಲ್ಲ, ಅಂಧಕವಿಗಳು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ನಡೆದ ಮಟ್ಟಸಮಾರಂಭದಲ್ಲಿ ಮಾನವೀಯಮೌಲ್ಯಗಳ ಹೊಂಗಿರಣ ಅರಸುತ್ತ ಕಣ್ಣಿರುವ ಕುರುಡರ ಕರ್ಮಕಾಂಡವನ್ನು, ಬಯಲಿಗೆಳೆದರು. ಈ ಕೆಲವು ಸಾಲುಗಳನ್ನು ನಾನು ಹೇಳಲುಬಯಸುತ್ತೇನೆ. ಸರ್ವ ಧರ್ಮ ಸಮನ್ವಯದ ಭೂಮಿಯಲ್ಲಿ ಮಂದಿರ ಮಸೀದಿ ಎಂದು ಕಚ್ಚಾಡುವಿರೇಕೆ? ಮುಗ್ಧಮನಸ್ಸುಗಳ ಚುಚ್ಚಿ ಕೊಲ್ಲುವಿರೇಕೆ? ಪುಣ್ಯಕ್ಷೇತ್ರವನ್ನು ಕುರುಕ್ಷೇತ್ರವಾಗಿ ಪರಿವರ್ತಿಸುವಿರೇಕೆ? ದೇವನೆಂದಾದರೂ ನಿಮ್ಮ ಬಳಿ ಬಂದು ನಾನು ಬಿಸಿಲಿನಲ್ಲಿ ಬೇಯುತ್ತಿರುವೆ ಚಳಿಯಲ್ಲಿ ನಡುಗುತ್ತಿರುವೆ ನನಗೆ ಮಂದಿರ ಬೇಕು ಮಸೀದಿ ಬೇಕು ಇಂಥ ಸ್ಥಳದಲ್ಲೇ ನನಗೆ ನೆರಳು ಬೇಕು ಎಂದು ಕೇಳಿದ್ದನೇನು? ಹೃದಯವಿಲ್ಲದೆ ಹಿಂಸಿಸುವ ಮತಾಂಧರನ್ನು ದೇವರು ಎಂದೂ ಒಪ್ಪುವುದಿಲ್ಲ. ಯಾವ ಧರ್ಮವೂ ಮೆಚ್ಚುವುದಿಲ್ಲ ಎಂದು ಅಂಧಕವಿಗಳು ಹೇಳಿದರು. ಈ ಗಲಭೆಯ ದಳ್ಳುರಿಗೆ ಸಿಕ್ಕಿ ಕರಕಲಾದ ಸುಟ್ಟಮನೆಗಳ ಮುಂದೆ ನಿಂತ ನಿರ್ಗತಿಕರಲ್ಲಿ ತಂದೆತಾಯಿಯರನ್ನು ಕಳೆದುಕೊಂಡ ಎಳೆಗೂಸುಗಳ ಮುಗ್ಧಮುಖಗಳಲ್ಲಿ ರಾಮರಹೀಮ ಸಿಗಲಿಲ್ಲ ರಾಮನೆಂದರೆ ರಹೀಮ, ರಹೀಮನೆಂದರೆ ರಾಮ, ರಾಮರಹೀಮ ದೇವರಲ್ಲ ಅದೊಂದು ದಿವ್ಯಪ್ರೇಮ, ಸಾಮರಸ್ಯದ ಭವ್ಯಪ್ರೇಮ ಎಂದು ಪ್ರೀತಿಪ್ರೇಮ ಮಾನವತೆ ಸಹಬಾಳ್ವೆಯ ದಿವ್ಯಸಂದೇಶವನ್ನು ಸಾರಿದರು. ನನ್ನವರು ಎಂಬ ಪ್ರಶ್ನೆ ಬಂದಾಗ ನಮ್ಮ ಮುಖ್ಯಮಂತ್ರಿ ಮಾತ್ರವಲ್ಲ ಕವಿಗಳೂ ಆದ ಎಂ. ವೀರಪ್ಪಮೊಯಿಲಿಯವರು ಮತ್ತೆನಡೆಯಿಲಿ ಸಮರ ಎಂಬ ಕವನ ಸಂಕಲನವನ್ನು ಬಹಳ ವರ್ಷಗಳ ಹಿಂದೆ ಹೊರತಂದಿದ್ದಾರೆ. ಇದು ಬಂದದ್ದು ಈ ಘಟನೆಯಾದ ಮೇಲಲ್ಲ ಅದರಲ್ಲಿ ಜ್ವಾಲೆ ಎಂಬ ಕವನ ಇದೆ, ನಾಲ್ಕು ಸಾಲು ಹೇಳಿದರೆ ಅಪ್ರಸ್ತುತ ಆಗುವುದಿಲ್ಲವೆಂದು ನನಗನ್ನಿಸುತ್ತದೆ. ಜೈನಬುದ್ಧರು, ಸಿಕ್ಕ, ಕ್ರಿಸ್ತ, ಹಿಂದುಗಳೆಲ್ಲ ಭಾರತೀಯರೆನ್ನುವರೇ ಈ ದೇಶದೊಳಗೆಲ್ಲ, ಪರರಲ್ಲ ಮುಸ್ಲಿಮರು ಸೋದರರು ನಮಗೆಲ್ಲ, ನಿನ್ನವರು ನನ್ನವರು ಎನ್ನುವವರಾರು ? ರಾಮ ಜನಿಸಿದಲ್ಲಿ ಕೃಷ್ಣ ಆಡಿದನಿಲ್ಲಿ, ಸಿದ್ಧಾರ್ಥಜಿನರಿಲ್ಲಿ ಶಾಂತಿಪ್ರತ

ಗೈದಿಹರು ಗುರುಪೂಜ್ಯ ನಾನಕರೇ ಗ್ರಂಥ ಬರೆದಿದರಿಲ್ಲಿ ನಿನ್ನವರು ನನ್ನವರು ಎನ್ನುವವರಾರು? ಧರ್ಮಸಾಂತ್ವನಕೆಂದು ತನುವನರ್ಪಿಸಲು ರಕ್ತತರ್ಪಣದಿಂದ ತಣೀಯದೀಜ್ವಾಲೆ, ಗಾಂಧಿತಾತನ ಬಲಿದಾನ ತ್ಯಾಗಸಾಲದೆಯೇ ? ನಿನ್ನವರು ನನ್ನವರು ಎನ್ನುವವರಾರು? ಹೀಗೆ ನನ್ನವರು ನಿನ್ನವರು ಎನ್ನುಹ ಬದಲಿಗೆ ಎಲ್ಲರು ನಮ್ಮವರು ಅನ್ನುವ ಒಂದು ಸುಂದರ ಕಲ್ಪನೆ ಮಾಡಿದರೆ ಮಾತ್ರ ನಮ್ಮದೇಶ ಉಳಿಯುತ್ತದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಈ ಸಂದರ್ಭದಲ್ಲಿ ಆರಕ್ಷಕ ಇಲಾಖೆಯ ಪಾತ್ರ ಕುರಿತು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಇದು ಉಲ್ಲೇಖನೀಯ ನಾವು ಕೂಡ ಮೆಚ್ಚತಕ್ಕಂಥದ್ದು ಮಾತ್ರವಲ್ಲ, ಎಲ್ಲಾ ಸರ್ಕಾರಿ ನೌಕರರು ಅತ್ಯಂತ ಸಂಯಮದಿಂದ ಸಾಕಷ್ಟು ಒಳ್ಳೆಯ ರೀತಿಯಿಂದ ಕೆಲಸವನ್ನು ಮಾಡಿದ್ದಾರೆ. ನೊಂದವರಿಗೆ ಸಾಕಷ್ಟು ಪರಿಹಾರವನ್ನು ಸರ್ಕಾರ ಕೊಟ್ಟಿದೆ ಮತ್ತು ಹೆಚ್ಚಿಸಿದೆ, ಇನ್ನು ಪರಿಹಾರವನ್ನು ಕೊಡಲಿಕ್ಕೆ ಬಾಕಿ ಇದೆ. ಈ ಸಂದರ್ಭದಲ್ಲಿ ಎಲ್ಲೆಲ್ಲಿ ಕೊಡಲಿಕ್ಕೆ ಬಾಕಿ ಇದೆ, ಅದನ್ನು ಆದಷ್ಟುಬೇಗ ಪಾವತಿ ಮಾಡಬೇಕು ಎನ್ನುವಂಥದ್ದನ್ನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ. ಈ ಕೋಮು ಗಲಭೆಗಳು ನಮಗೆ ಯಾವ ರೀತಿ ಬರುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಬಹಳ ವಿಚಿತ್ರವಾಗಿ ಕೆಲವೊಮ್ಮೆ ಬಂದುಬಿಡುತ್ತದೆ. ನನ್ನ ತಾಲ್ಲೂಕಿನಲ್ಲಿ ಕುಂದಾಪುರ, ಜನವರಿ ತಿಂಗಳ ಮಧ್ಯಭಾಗದಲ್ಲಿ ಒಂದು ಘಟನೆ ನಡೆದುಹೋಯಿತು. ಪತ್ರಿಕೆಗಳಲ್ಲಿ ಬಂದಿದ್ದನ್ನು ತಾವು ನೋಡಿರಬಹುದು. ಒಂದು ಮತಕ್ಕೆ ಸಂಬಂಧಿಸಿದ ಒಬ್ಬ ಹುಡುಗ ಇನ್ನೊಂದು ಮತಕ್ಕೆ ಸಂಬಂಧಿಸಿದ ಒಬ್ಬ ಹುಡುಗಿಯನ್ನು ಪ್ರೀತಿಸಿದ. ಈ ಪ್ರೀತಿ ಎನ್ನುವಂಥದ್ದು ಅವರವರ ಮಧ್ಯದೊಳಗಿನ ಒಂದು ಭಾವನಾತ್ಮಕವಾದ ಬಹಳ ಚಿಕ್ಕ ಪ್ರಕರಣ. ಇದಕ್ಕೆ ಇಡೀ ಸಮಾಜ ರೊಚ್ಚುಗೊಳ್ಳಬೇಕಾದ, ಸಮಾಜವನ್ನೇ ತೊಡಗಿಸಿಕೊಳ್ಳಬೇಕಾದ ಪ್ರಮೇಯ ಇರಲಿಲ್ಲ. ಆದರೆ ಈ ವೈಯಕ್ತಿಕ ಸಮಸ್ಯೆ ಕೋಮು ದ್ವೇಷದ ರೂಪು ಪಡೆಯಿತು. ಕೋಮು ದ್ವೇಷದ ರೂಪವನ್ನು ಬಲವಂತವಾಗಿ ಹಚ್ಚಲಿಕ್ಕೆ ಬಹಳ ಪ್ರಯತ್ನನಡೆಯಿತು. ಇದರ ಪರಿಣಾಮವಾಗಿ ನೂರಾರು ತೆಂಗಿನ ಮರಗಳು, ಅಡಿಕೆ ಮರಗಳು, ಸಹಸ್ರಾರು ಬಾಳೆಗಿಡಗಳು, ಅನೇಕ ಚರ, ಸ್ವತ್ತುಗಳು, ಸ್ಥಿರಸ್ವತ್ತುಗಳು ಹೀಗೆ ಲಕ್ಷಾಂತರ ರೂಪಾಯಿಗಳ ಆಸ್ತಿ ನಾಶವಾಗಿ ಹೋಯಿತು. ಈ ಪ್ರೇಮ ಎಂದಾಗ ನಾವು ಚಲನಚಿತ್ರಗಳಲ್ಲಿ ನೋಡಿದ್ದೇವೆ, ಮರ ಸುತ್ತುವಂಥದ್ದು, ಪ್ರೇಮ ಎಂದಲ್ಲಿ ಮರ ಸುತ್ತುವಂಥದ್ದು. ಹುಡುಗ ಹುಡುಗಿ ಸೇರಿ ಮರ ಸುತ್ತುವಂಥ ಹಾಡುತ್ತಾ ಏನೊ ಮಾಡುತ್ತಾ ಮರ ಸುತ್ತುವಂಥದ್ದನ್ನು ನಾವು ನೋಡಿದ್ದೇವೆ. ಈ ಮರ ಕತ್ತರಿಸಿದ್ದನ್ನು ನಾವು ನೋಡಲಿಲ್ಲ. ಈ ಪ್ರೇಮ ಉಲ್ಬಣವಾಗಿ ಮರ ಕತ್ತರಿಸಿದ ಪ್ರಸಂಗ ನಡೆದುಹೋಯಿತು. 'ವಿರಹ ನೂರು ನೂರು ತರಹ' ಎಂದು ಹೇಳಿ ಪ್ರೇಮದಲ್ಲಿ ಬರುತ್ತದೆ. ಇದು 'ವಿರಸ ನೂರು ನೂರು ತರಹ' ಒಂದು ಪ್ರೇಮದಿಂದ ನಮ್ಮ ಸಮಾಜದಲ್ಲಿ ಒಂದು ಸಮಾಜದ ಹುಡುಗ ಇನ್ನೊಂದು ಸಮಾಜದ ಹುಡುಗಿಯನ್ನು ಪ್ರೀತಿಸಿದಾಗ ವಿರಸ ನೂರು ನೂರು ತರಹ ಏತಕ್ಕೆ ಆಗಬೇಕು? ಈ ರೀತಿಯಾಗಿ ನಮ್ಮ ಸಮಾಜದಲ್ಲಿ ಬೆಂಕಿ ಹಚ್ಚುವಂಥ ಒಂದು ಪ್ರಸಂಗ ನಡೆಯುತ್ತದೆ. ಇದು ಆಗಬಾರದು. ಈ ದ್ವೇಷದ ಸಂಶಯದ ವಿಷಬೀಜಗಳನ್ನು ಮೊಳಕೆಯಲ್ಲೇ ಕಿತ್ತೊಗಿಯುವಂಥ ಒಂದು ಕೆಲಸವಾಗಬೇಕು. ನಿರಪರಾಧಿಗಳಿಗೆ ಇದನ್ನು ಹುಡುಕುವಂಥ ಸಂದರ್ಭದಲ್ಲಿ ಯಾವುದೇ ನಿರಪರಾಧಿಗಳಿಗೆ ತೊಂದರೆಯಾಗಬಾರದು.

ಶ್ರೀ ಆರ್.ವಿ. ದಯಾನಂದರಾವ್:- ಮಾನ್ಯ ಆಚಾರ್‌ರವರೇನಾದರೂ ಹಾಡುಗಾರರಾಗಿದ್ದರೇ ? ಕಾಲೇಜಲ್ಲಿ ಏನಾದರೂ ಹಾಡು ಗೀಡು ಹಾಡುತ್ತಿದ್ದರೇ ?

ಶ್ರೀ ಬಿ.ಹೆಚ್. ಬನ್ನಿಕೋಡ್:- ನೀವು ಬರೀ ಹಾಡು ಕೇಳುತ್ತೀರಿ. ಅವರು ಹೇಳುವುದನ್ನು ಕೇಳಿದರೆ ಬೇರೆ ಏನೋ ಕೇಳಬೇಕಾಗುತ್ತದೆ. ಅದನ್ನು ಬಿಟ್ಟು ಹಾಡು ಕೇಳುತ್ತೀರಿ.

ಶ್ರೀ ಜಿ.ಎಸ್. ಆಚಾರ್:- ಸೂಚನೆಗಾಗಿ ಧನ್ಯವಾದಗಳು. ಈ ವಿಚಾರದಲ್ಲಿ ನಾವು ಕುಂದಾಪುರ ತಾಲ್ಲೂಕಿನ ಇಬ್ಬರು ಶಾಸಕರು ವಿಚಾರಣೆ ನಡೆಸಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಈ ರೀತಿ ಪ್ರಚೋದನೆಗಳು ಮುಂದೆ ಆಗಬಾರದು. ನಿರಪರಾಧಿಗಳಿಗೆ ದಂಡವಾಗಬಾರದು ಎಂದು ಈಗಾಗಲೇ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಈ ಕುರಿತು ಸರ್ಕಾರ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂಥದ್ದು ಅಗತ್ಯವಾಗಿದೆ. ಸನ್ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದು ಹೋದರು. ಸನ್ಮಾನ್ಯ ಗೃಹರಾಜ್ಯಮಂತ್ರಿಗಳು ಆಮೇಲೆ ಸನ್ಮಾನ್ಯ ಸಗೀರ್ ಅಹಮದ್‌ರವರು ಬಂದು ಹೋದರು, ಅವರೆಲ್ಲಾ ಸಾಂತ್ವನವನ್ನು ಮಾಡಿ ಹೋಗಿದ್ದಾರೆ. ಅದನ್ನು ಕುರಿತು ಯಾರು ನೊಂದಿದ್ದಾರೆ, ಅವರಿಗೆ ಪರಿಹಾರ ಸಂಪೂರ್ಣವಾಗಿ ಬಂದಿಲ್ಲ. ಏನೊ ಸ್ವಲ್ಪ ಸ್ವಲ್ಪ ಬಂದಿದೆ. ಆ ಪರಿಹಾರವನ್ನು ಕೊಡಿಸಬೇಕು. ಈ ಪರಿಹಾರವೇ ಮುಖ್ಯವಲ್ಲ. ಆದರೆ ನೊಂದವರಿಗೆ ಪರಿಹಾರವೂ ಮುಖ್ಯವಾಗುತ್ತದೆ. ಅದನ್ನು ಕೊಡಿಸುವುದಕ್ಕೆ ಸಾಧ್ಯವಾಗದಿದ್ದರೆ ಬಹಳ ಕಷ್ಟವಾಗುತ್ತವೆ. ಅದನ್ನು ಆದಷ್ಟು ಬೇಗ ಕೊಡಿಸಬೇಕು ಎಂದು ನನ್ನ ಒಂದು ಅಪೇಕ್ಷೆ ಹಾಗೂ ಬೇಡಿಕೆಯಾಗಿದೆ. ಈ ಮಾನವ ಸರಪಳಿಯ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಬಹಳ ಚೆನ್ನಾಗಿ ರೂಪಿಸಲ್ಪಟ್ಟಿತು. ನಾನು ಇಲ್ಲ ಎಂದು ಹೇಳುವುದಿಲ್ಲ. ಸರ್ವಧರ್ಮದ ಸಮಾಭಾವದ ಪ್ರತೀಕವಾಗಿ ರೂಪಿಸಿದಂತಹ ಒಂದು ದಿನದ, ಒಂದು ಗಂಟೆಯ ಮಾನವ ಸರಪಣಿ ಎಲ್ಲಾ ಧರ್ಮಗಳ, ಬೋಧಕರ ಪ್ರಕಟಣೆ ಪತ್ರಿಕೆಗಳಲ್ಲಿ ಬಂದಿದೆ. ಎಲ್ಲಾ ವಿಚಾರವಾದಿಗಳ ಘೋಷಣೆ ಒಂದು ದಿವಸಕ್ಕೆ ಮುಕ್ತಾಯವಾಗಬಾರದು. ಇದು ಆರಂಭವೆಂದು ಭಾವಿಸಿ ಜನಾಂದೋಲದ ರೂಪ ಪಡೆಯಬೇಕಾದ ಅಗತ್ಯ ಇದೆ ಎಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಆ ರೀತಿ ಜನಾಂದೋಲದ ರೂಪವನ್ನು ಪಡೆದು ನಮ್ಮ ಸಮಾಜದಲ್ಲಿ, ನಮ್ಮ ರಾಜ್ಯದಲ್ಲಿ ನಮ್ಮ ರಾಷ್ಟ್ರದಲ್ಲಿ, ನಿರಂತರವಾಗಿ ಆಗಬೇಕಾದಂತಹ ಪ್ರಕ್ರಿಯೆ, ಪ್ರತಿಕ್ರಿಯೆ ಆಗಿ ರೂಪಗೊಳ್ಳಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಹಾಗೆಯೇ ಮಹಿಳೆಯರು ಶೋಷಣೆ ಮತ್ತು ತಾರತಮ್ಯಗಳಿಗೆ ಒಳಗಾಗವಂತೆ ವರದಕ್ಷಿಣೆ ಸಾವುಗಳು ಅಪಹರಣ ಮಹಿಳೆಯರಿಗೆ ನೀಡಲಾಗುವ ಕಿರುಕುಳ ಇತ್ಯಾದಿಗಳನ್ನು ನಿಲ್ಲಿಸುವ ಹಾಗೆ ಕಾರ್ಯಕ್ರಮವನ್ನು ಕೈಗೊಳ್ಳುವಂತಹದ್ದು. ಬೆಂಗಳೂರಿನಲ್ಲಿ ಮಹಿಳೆಯರದ್ದೆ ಒಂದು ಪೋಲೀಸ್ ಠಾಣೆಯನ್ನು ಮಾಡುವಂತಹದ್ದು ಸ್ತುತ್ಯಾರ್ಹವಾದ ವಿಚಾರವಾಗಿದೆ. ಮಹಿಳಾ ಪೋಲೀಸ್ ಠಾಣೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ಅಲ್ಲ, ಜಿಲ್ಲೆಗೊಂದು ಸಂಚಾರಿ ಪೋಲೀಸ್ ಠಾಣೆಯನ್ನು ರೂಪಿಸಿದರೆ ಇನ್ನು ಹೆಚ್ಚಿಗೆ ಮಹಿಳೆಯವರು ಧೈರ್ಯದಿಂದ ಇರುತ್ತಾರೆ. ಮಹಿಳೆಯವರು ಧೈರ್ಯದಿಂದ ಅನ್ಯಾಯವನ್ನು ಯಾರು ಎಸಗುತ್ತಾರೆ ಅವರನ್ನು ಕುರಿತು ಹೆಚ್ಚಿಗೆ ಮಾಹಿತಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸುತ್ತೇನೆ. ದಿವಂಗತ ಶ್ರೀಮತಿ ಇಂಧಿರಾಗಾಂಧಿಯವರ ಮಾರ್ಗದರ್ಶನದಲ್ಲಿ ಪ್ರಾರಂಭಿಸಲಾದ ಮತ್ತು ಮಾನ್ಯ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ಪಿ. ವಿ. ನರಸಿಂಹರಾವ್‌ರವರು ಮುಂದುವರಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮ ಅದಕ್ಕೆ ನಮ್ಮ ರಾಜ್ಯದಲ್ಲಿ ಒದಗಿಸಿದಂತಹ ಹಣ ವಕ್ಫ್ ಸಂಸ್ಥೆಗಳ ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತನ್ನು, ವಕ್ಫ್ ಪ್ರತಿಷ್ಠಾನವನ್ನು ಮಾಡುವಂತಹ ಕಾರ್ಯಕ್ರಮ ಇದೆಲ್ಲಾ ಸುತ್ಯಾರ್ಹವಾದುದು. ಇದು ಮಾತ್ರ ಅಲ್ಲ, ಬೀಡಿಯನ್ನು ಕಟ್ಟುವಂತಹ, ಅಗರಬತ್ತಿಯನ್ನು ಹೊಸೆಯುವಂತಹ ಇತ್ಯಾದಿಯಾಗಿ ಕಾಲಾಂತರದಲ್ಲಿ ವ್ಯಾಧಿಗೆ ತುತ್ತಾಗುವಂತಹ ಬಡ ಮಹಿಳೆಯರು ಇವತ್ತು ಅಲ್ಪಸಂಖ್ಯಾತ ವರ್ಗದಲ್ಲಿ ಬಹಳಷ್ಟು ಜನ ಇದ್ದಾರೆ. ಅವರಿಗೆ ಉತ್ತಮ ಆರೋಗ್ಯ ಪೂರ್ಣವಾದಂತಹ ವಾತಾವರಣದಲ್ಲಿ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಕಳೆದ ವರ್ಷದ ಅಂತ್ಯದಲ್ಲಿ ೧೯೯೨ರಲ್ಲಿ ನೆರೆಹಾವಳಿ ಪ್ರವಾಹ ಮತ್ತು ಚಂಡಮಾರುತ ಪ್ರವಾಹ ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ರಾಯಚೂರು, ಬಳ್ಳಾರಿ, ಧಾರವಾಡ, ದಕ್ಷಿಣ ಕನ್ನಡ ಮತ್ತು

ಮಲೆನಾಡಿನ ಕೆಲವು ಭಾಗಗಳಲ್ಲಿ ಪ್ರವಾಹ ಬಂದು ವಿಪರೀತ ಹಾನಿಯಾಗಿದೆ. ಪ್ರವಾಹದ ಕುರಿತು ನಾವು ಪ್ರತಿವರ್ಷ ಸರ್ವೇ ಮಾಡುತ್ತೇವೆ, ಈ ವರ್ಷವೂ ಮಾಡಿದ್ದೇವೆ, ಕೇಂದ್ರಕ್ಕೆ ಕಳುಹಿಸಿಕೊಡುತ್ತೇವೆ. ಎಷ್ಟು ಬರುತ್ತದೋ ಅಷ್ಟು ಬರುತ್ತದೆ. ಆಮೇಲೆ ಪುನಃ ಒತ್ತಾಯವನ್ನು ಮಾಡುವುದಿಲ್ಲ. ೯ನೇ ಹಣಕಾಸಿನ ತೀರ್ಪಿನ ಆಧಾರದಮೇಲೆ ಭಾರತ ಸರ್ಕಾರ ರಾಜ್ಯದ ವಿಪತ್ತು ಪರಿಹಾರ ನಿಧಿಗೆ ವಾರ್ಷಿಕ ೨೭ ಕೋಟಿ ರೂಪಾಯಿಗಳ ಅನುದಾನವನ್ನು ನಿಗಧಿಪಡಿಸಿದೆ. ಆದರೆ ಅದರ ೮-೧೦ ಪಾಲಿನಷ್ಟು ಈ ವರ್ಷದಲ್ಲಿ ಖರ್ಚಾಗುತ್ತಿದೆ. ಅಭಾವ ಮತ್ತು ಪ್ರವಾಹ ಕಾಮಗಾರಿಗಳಿಗಾಗಿ ಖರ್ಚಾಗುತ್ತಿದೆ. ೧೯೯೨ರ ಬಿರುಗಾಳಿ ಪ್ರವಾಹದ ಹಾವಳಿ ಬಗ್ಗೆ ಕೇಂದ್ರಕ್ಕೆ ಸಲ್ಲಿಸಿದ ವಿವರವಾದ ವರದಿಯ ಪ್ರಕಾರ ಅಲ್ಪಾವಧಿ ಪರಿಹಾರಕ್ಕೆ ರೂ.೧೧೨.೦೨ ಕೋಟಿ ರೂಪಾಯಿ, ದೀರ್ಘಾವಧಿ ಪರಿಹಾರಕ್ಕೆ ೨೨೦.೫೨ ಕೋಟಿ ರೂಪಾಯಿ ಒಟ್ಟು ೩೩೨.೫೪ ಕೋಟಿ ರೂಪಾಯಿಯ ನೆರವನ್ನು ಕೋರಲಾಗಿದೆ. ಇದರಲ್ಲಿ ೨೦೦ ಕೋಟಿ ರೂಪಾಯಿಯನ್ನು ಮಧ್ಯಂತರ ಪರಿಹಾರವಾಗಿ ಕೊಡಬೇಕೆಂದು ಕೇಂದ್ರಸರ್ಕಾರವನ್ನು ಕೇಳಿಕೊಳ್ಳಲಾಗಿದೆ. ಇದರಲ್ಲಿ ಎಷ್ಟು ಬಂದಿದೆ? ಡಿಸೆಂಬರ್ ಅಂತ್ಯದ ತನಕ ಸುಮಾರು ೮೦ ಕೋಟಿ ರೂಪಾಯಿ ನಮ್ಮ ರಾಜ್ಯದ ಬೊಕ್ಕಸದಿಂದ ಖರ್ಚಾಗಿದೆ. ಕೇಂದ್ರ ನೆರವು ಬಾರದೇ ಇದ್ದಲ್ಲಿ ಹಾನಿ ಹಾನಿಯಾಗಿಯೇ ಉಳಿಯುತ್ತದೆ. ಮತ್ತು ಮುಂಬರುವ ಋತುಗಳಲ್ಲಿ ಹೆಚ್ಚಿನ ಹಾನಿಗೆ ಇಂಬು ನೀಡುತ್ತದೆ. ಮಾಡಿದ ಖರ್ಚು ಅಲ್ಪಾವಧಿ ಹಾನಿಗೂ ಪೂರ್ತಿ ಸಾಕಾಗುವುದಿಲ್ಲ. ಹಾಗಾಗಿ ದೀರ್ಘಾವಧಿ ಪರಿಹಾರ ಎಲ್ಲಿಂದ ಮಾಡಲಿಕ್ಕೆ ಸಾಧ್ಯವಾಗುತ್ತದೆ? ದೀರ್ಘಾವಧಿ ಪರಿಹಾರವನ್ನು ಮಾಡಿಕೊಳ್ಳಲು ಕ್ರಮ ಕೈಗೊಳ್ಳದೇ ಇದ್ದರೆ ಹಾನಿ ಹಾನಿಯಾಗಿಯೇ ಉಳಿಯುತ್ತದೆ. ಆದ್ದರಿಂದ ಕೇಂದ್ರದ ಮೇಲೆ ವಿಶೇಷವಾದಂತಹ ಒತ್ತಡವನ್ನು ಮಾಡುವಂತಹ ಅಗತ್ಯ ಇದೆಯೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಆಡಳಿತವನ್ನು ಸ್ವಚ್ಛ ಮಾಡುವ ಬಗ್ಗೆ ಆಡಳಿತಾತ್ಮಕ ಸಂಸ್ಕೃತಿಯನ್ನು ರೂಪಿಸುವ ಬಗ್ಗೆ ಹಾಗೂ ಸಾರ್ವಜನಿಕರ ಕುಂದುಕೊರತೆಯ ಪರಿಹಾರಕ್ಕಾಗಿ ವಿಶೇಷವಾದಂತಹ ಒತ್ತು ಕೊಡಬೇಕು. ಈ ವಿಚಾರವನ್ನು ನಾನು ಸ್ವಲ್ಪ ಮುಂದಕ್ಕೆ ಹೇಳುತ್ತೇನೆ. ಹಾಗೆಯೇ ಕನ್ನಡವನ್ನು ಎಲ್ಲಾ ಹಂತಗಳಲ್ಲಿಯೂ ಬಳಕೆಗೆ ತರಲು ಸರ್ಕಾರ ಬದ್ಧವಾಗಿರುವುದು ಇವೆಲ್ಲವು ತೀರ ಮೆಚ್ಚತಕ್ಕಂಥ ವಿಚಾರವಾಗಿವೆ. ಗ್ರಾಮೀಣ ಮಹಳೆಯರು ಪಾಲ್ಗೊಳ್ಳುವ ಹಾಗೆ ಸಾಕ್ಷರತಾ ಆಂಧೋಲನವನ್ನು ರೂಪಿಸಿರುವಂತಹ ಕಾರ್ಯಕ್ರಮ ಕಳೆದ ೨-೩ ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿದೆ. ಸಾಕ್ಷರತಾ ಕಾರ್ಯಕ್ರಮ ಅನಂತರ ನಿರಂತರ ಕಲಿಕೆಯ ಕಾರ್ಯಕ್ರಮ. ಇದು ನಾಲ್ಕು ಗೋಡೆಗಳ ನಡುವಿನ ಶಿಕ್ಷಣ ಇಲ್ಲ. ಕ್ರಿಯಾಶೀಲವಾಗಿ ಅನಕ್ಷರಸ್ಥರಾದ ಜನ ಭಾಗವಹಿಸುವ ಮೂಲಕ ಹೆಚ್ಚಿನ ಅರಿವನ್ನು ಉಂಟುಮಾಡಿಕೊಳ್ಳುವಂತಹ ಒಂದು ಕಾರ್ಯಕ್ರಮ ಆಗಿದೆ. ಗ್ರಾಮೀಣ ಪರಿಸರದಲ್ಲಿ ನವನಿರ್ಮಾಣ ಕಾರ್ಯಕ್ರಮದಲ್ಲಿ ನವ ಸಾಕ್ಷರತೆಯ ಸಂಪೂರ್ಣ ಸಹಕಾರವನ್ನು ಪಡೆಯುವಂತಹ ಕಾರ್ಯಕ್ರಮ ಆಗಿದೆ. ಇದನ್ನು ಇನ್ನು ಹೆಚ್ಚಿನ ಒಳ್ಳೆಯ ರೀತಿಯಲ್ಲಿ ರೂಪಿಸಬೇಕಾದಂಥ ಅಗತ್ಯವಿದೆ. ನಮ್ಮ ಪ್ರಾಥಮಿಕ ಶಿಕ್ಷಣ, ಹೈಸ್ಕೂಲು-ಕಾಲೇಜುಗಳ ಶಿಕ್ಷಣ ಕುರಿತು ನಾವು ಹೇಳುವಾಗ ರಾಜ್ಯದ ೪೦,೦೦೦ ಪ್ರಾಥಮಿಕ ಶಾಲೆಗಳಲ್ಲಿ ೬೦ ಲಕ್ಷ ಮಕ್ಕಳು ೫,೦೦೦ ಹೈಸ್ಕೂಲುಗಳಲ್ಲಿ ೧೫ ಲಕ್ಷ ವಿದ್ಯಾರ್ಥಿಗಳು ೪೦೦ ಕಾಲೇಜುಗಳಲ್ಲಿ ೨ ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ನೂರಕ್ಕೂ ಹೆಚ್ಚಿನ ತಾಂತ್ರಿಕ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ೭೫,೦೦೦ ವಿದ್ಯಾರ್ಥಿಗಳಿದ್ದಾರೆ. ಈ ಸಾರ್ವತ್ರಿಕ ಗುರಿ ಸಾಧಿಸಲು ಎಲ್ಲಾ ಶಾಲೆಗಳಲ್ಲಿಯೂ ಶಿಕ್ಷಕರ ನೇಮಕವಾಗಬೇಕು. ಇವೊತ್ತು ಸದನದ ಎರಡು ಕಡೆಯಿಂದ ಇದರ ಬಗ್ಗೆ ಬಹಳಷ್ಟು ಒತ್ತಾಯ ಮತ್ತು ವಿಚಾರಪೂರ್ಣವಾದ ಮಾತುಗಳು ಬಂದಿವೆ.ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಾಕಷ್ಟು ಅಧ್ಯಾಪಕರ ನೇಮಕವಾಗದಿದ್ದರೆ, ಶಾಲಾ ಕಟ್ಟಡ ನಿರ್ಮಾಣವಾಗದಿದ್ದರೆ, ಪೀಠೋಪಕರಣಗಳು ಮತ್ತು ಬೋಧನೋಪಕರಣಗಳು ಆಗದೇ ಇದ್ದರೆ ಇದು ಎಂತಹ ಶಿಕ್ಷಣವಾಗುತ್ತದೆ? ಮುಂದಿನ ತಲೆಮಾರಿನ ಜನರು ನಮ್ಮನ್ನು

ಶಾಪ ಹಾಕುವಂಥ ಪರಿಸ್ಥಿತಿ ಬರುತ್ತದೆ. ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕಾದ ಅಗತ್ಯವಿದೆ. ಪದವಿಪೂರ್ವ ಮಟ್ಟದಲ್ಲಿ ಕಲಿಕೆ ಮತ್ತು ಉದ್ಯೋಗದ ಒಂದು ಅವಕಾಶ ಮಾಡಿಕೊಟ್ಟು ಪಿಯುಸಿ ಪಾಸಾದ ನಂತರ ಸ್ವತಃ ಬರೀ ಪದವಿ ಗಳಿಸುವ ಬದಲು ತನ್ನ ಕಾಲಿನ ಮೇಲೆ ನಿಲ್ಲತಕ್ಕಂಥ ಉದ್ಯೋಗ ಗಳಿಸುವಂಥ ಒಂದು ಕಾರ್ಯಕ್ರಮ ಹಾಕಿಕೊಳ್ಳುವಂಥದ್ದು ಅತ್ಯಂತ ಶ್ಲಾಘನೀಯವಾದುದು. ವೃತ್ತಿಶಿಕ್ಷಣ ಕ್ಷೇತ್ರದಲ್ಲಿಯೂ ಪ್ರವೇಶಾವಕಾಶ ಮತ್ತು ತರಬೇಕಾದ ಶುಲ್ಕಗಳಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗನುಗುಣವಾಗಿ ನಿಯಮಗಳನ್ನು ರೂಪಿಸಲು ಸರ್ಕಾರ ಉದ್ದೇಶಿಸಿದೆ ಎನ್ನುವಂಥ ಮಾತನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆಡಿದ್ದಾರೆ. ಇದು ಆದಷ್ಟು ಬೇಗ ಕಾರ್ಯಗತವಾಗಬೇಕು. ಉದ್ದೇಶ ಒಳ್ಳೆಯದಾಗಿರುತ್ತದೆ. ಅನೇಕ ವರ್ಷಗಳಿಂದ ಆಗಾಗ್ಗೆ ಅಧಿಕಾರದಲ್ಲಿದ್ದಂಥ ಸರ್ಕಾರಗಳು 'ಇದರ ಬಗ್ಗೆ ಕಟ್ಟುನಿಟ್ಟಾದ ನಿಯಮವನ್ನು ಮಾಡುತ್ತೇವೆ, ಎಂದು ಹೇಳಿದ್ದುಂಟು. ಆದರೆ, ಶಿಕ್ಷಣ ಶುಲ್ಕದ ಬದಲು ದಾನ ಶುಲ್ಕ ಒಂದು ರೀತಿಯಾಗಿ ಬದಲು ಮಾಡುವಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅನಗತ್ಯವಾಗಿ ಹಣ ತೆಗೆದುಕೊಳ್ಳುವ ಬದಲಾಗಿ ಆಸ್ಪತ್ರೆಯ ಒಂದು ಕೋಣೆ ಕಟ್ಟಿಸಿಕೊಡುವುದು, ಯಾವುದೋ ಒಂದು ಟ್ರಸ್ಟಿಗೆ ವಂತಿಗೆ ಕೊಡುವಂಥದ್ದು, ಈ ರೀತಿಯ ಕಣ್ಣಿಗೆ ಕಾಣದಂಥ ಯಾರೂ ಸಹ ಕಂಡುಹಿಡಿಯುವುದಕ್ಕೆ ಸಾಧ್ಯವಾಗದಂಥ ಶುಲ್ಕಗಳು ಬರುತ್ತವೆ. ಈ ಶುಲ್ಕಗಳು ಬಂದಾಗ ಅದು ಸುಪ್ರೀಂ ಕೋರ್ಟಿನ ಆಜ್ಞೆ ಯಾವುದಿದೆ, ಆ ಆಜ್ಞೆಗೆ ಕಣ್ಣೊರೆಸುವ ಒಂದು ತಂತ್ರವಾಗುತ್ತದಷ್ಟೆ. ಕರ್ನಾಟಕದಲ್ಲಿ ಇಷ್ಟೆಲ್ಲಾ ಸಂಸ್ಥೆಗಳಿದ್ದು ಹೊರಗಿನ ರಾಜ್ಯಗಳವರ ಅಭಿಪ್ರಾಯದಲ್ಲಿ ಇದು ಬರೀ ಡಿಗ್ರಿಗಳನ್ನು ಮಾರುವಂಥ ಒಂದು ರಾಜ್ಯವಾಗಿದೆ ಎನ್ನುವ ಅಪವಾದ ಕೂಡ ಬಂದಿದೆ. ಅದರ ಬದಲು ಶುದ್ಧವಾದ ವೃತ್ತಿಶಿಕ್ಷಣಕ್ಕೆ ಪ್ರವೇಶಾವಕಾಶವಿರುವಂತೆ ಯೋಗ್ಯತೆ ಅಥವಾ ರೋಸ್ಟರ್ ಆಧಾರದ ಮೇಲಿರುವಂಥ ಒಂದು ವ್ಯವಸ್ಥೆ ಇಲ್ಲಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುವುದಕ್ಕೆ ಅಪೇಕ್ಷಿಸುತ್ತೇನೆ. ರಾಜ್ಯದ ಮತ್ತು ಹೊರಗಿನ ಖಾಸಗಿ ಉದ್ಯಮಗಳಿಗೆ ನಮ್ಮ ರಾಜ್ಯದಲ್ಲಿ ಹೊಸ ಹೊಸ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಕರೆ ಎನ್ನುವಂಥ ಮಾತು ಅನೇಕ ವರ್ಷಗಳಿಂದ ಕೇಳಿಬರುತ್ತಿದೆ. ಎಷ್ಟು ಜನ ಉದ್ಯಮಿಗಳು ಬಂದಿದ್ದಾರೋ ಎಷ್ಟು ಉದ್ಯಮಗಳನ್ನು ಇಲ್ಲಿ ಸ್ಥಾಪಿಸಿದ್ದಾರೋ ನಮಗಂತೂ ಅರ್ಥವಾಗುವುದಿಲ್ಲಾ, ಗಮನಾರ್ಹವಾದ ಕೆಲಸವಾಗಿದೆಯೆಂದು ನಾನು ಭಾವಿಸುವುದಿಲ್ಲ. ಈಗ 'ಏಕ ಕಿಂಡಿ' ತತ್ವದ ಮೇಲೆ ಸೌಲಭ್ಯಗಳನ್ನು ಒದಗಿಸುವುದಿದೆ. ಆ ತತ್ವದ ಪ್ರಕಾರ ಭೂಮಿ ಕೊಡುವಂತಾದ್ದು, ವಿದ್ಯುತ್ ಲೈಸೆನ್ಸ್ ಕೊಡುವಂತಾದ್ದು, ರಸ್ತೆ, ಚರಂಡಿ, ನೀರಿನ ಸೌಕರ್ಯ ಕೊಡುವಂತಾದ್ದು. ಇದನ್ನೆಲ್ಲಾ ಆದಷ್ಟು ಬೇಗ ಒದಗಿಸಬೇಕೆನ್ನುವ ಮಾತು ಕೂಡ ಬರುತ್ತಿದೆ. ಆದರೆ, ಈ ವ್ಯವಸ್ಥೆ ಬಂದಿಲ್ಲ, ಇನ್ನೂ ಆಗಿಲ್ಲ. ಇವೊತ್ತು ಯಾರೋ ಉದ್ಯಮಗಳನ್ನು ಸ್ಥಾಪಿಸುತ್ತೇವೆಂದು ಹೇಳುತ್ತಾರೆ, ಅತ್ಯಂತ ವಿಳಂಬವಾಗುತ್ತಿದೆ. ರಾಜ್ಯಪಾಲರ ಭಾಷಣದಲ್ಲಿ ಅನುಚಿತ ವಿಳಂಬ ಮಾಡದೆ ಈ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆನ್ನತಕ್ಕಂಥ ಮಾತೂ ಸಹ ಇದೆ. ಅನುಚಿತ ವಿಳಂಬವೂ ಅಲ್ಲ, ಉಚಿತ ವಿಳಂಬವೂ ಅಲ್ಲ, ಯಾವುದೇ ರೀತಿಯ ವಿಳಂಬವಾಗಬಾರದು. ವಿಳಂಬವಾಗದೆ ಉದ್ಯಮಗಳನ್ನು ಸ್ಥಾಪಿಸುವಂಥವರಿಗೆ ಬೇಕಾದಂಥ ವ್ಯವಸ್ಥೆ ಮಾಡುವಂಥ ಕ್ರಮ ಕೈಗೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ಒಂದು ವಿಚಾರವನ್ನು ನಾನು ವೈಯಕ್ತಿಕವಾಗಿ ಕಂಡುಕೊಂಡಿದ್ದನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನನಗನ್ನಿಸುತ್ತದೆ. ನನ್ನ ಮಿತ್ರರೊಬ್ಬರು ಬೆಂಗಳೂರಿನ ಹೊರವಲಯದ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಒಂದು ಕೈಗಾರಿಕೆ ಸ್ಥಾಪಿಸಲು ಅರ್ಜಿ ಹಾಕಿದರು, ಅದಕ್ಕೆ ಅನುಮತಿ ಸಿಕ್ಕಿತು, ಬೇಕಾದ ಭೂಮಿ ದೊರಕಿತು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ದೊರಕಿತು, ಒಳಚರಂಡಿ ಮಂಡಳಿಗೆ ಅರ್ಜಿ ಹಾಕಿದರು ಯಾವ ತೊಂದರೆ ಇಲ್ಲವೆಂದು ಎಲ್ಲಾ ಅಧಿಕಾರಿಗಳು ಕೈಗಾರಿಕೆಯನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದ್ದಾರೆ. ಯಾವುದೋ ಒಂದು ಕೇಸಿನಲ್ಲಿ ಈ ರೀತಿ ವಿಳಂಬವಾಯಿತು ಎನ್ನತಕ್ಕ ವಿಚಾರವನ್ನು ಏನೋ ಸಂಬಂಧಪಟ್ಟ ಪರಿಷ್ಕರು

ಏನೋ ಸ್ವಲ್ಪ ಖಾರವಾಗಿ ಹೇಳಿದರು ಎಂದು ಅದನ್ನು ತಿರಸ್ಕಾರ ಮಾಡಲಾಯಿತು. ಯಾರೋ ಬಂದು ಕೈಗಾರಿಕೆಯನ್ನು ಮಾಡುತ್ತಾರೆ, ಅದನ್ನು ತಿರಸ್ಕಾರ ಮಾಡಿದ್ದಾರೆ, ಯಾವ ಕಾರಣವು ಇಲ್ಲದೆ ತಿರಸ್ಕಾರ ಮಾಡಿದ್ದಾರೆ. ಯಾವ ಕಾರಣವು ಇಲ್ಲದೆ ತಿರಸ್ಕಾರ ಮಾಡುತ್ತಾರೆಂದು ಹೇಳಿದರೆ ಇನ್ನು ನಮ್ಮ ರಾಜ್ಯದಲ್ಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಯಾರು ತಾನೆ ಮುಂದೆ ಬರುತ್ತಾರೆ? ಆದ್ದರಿಂದ ಏಕ ಕಿಂಡಿಯ ಸೌಲಭ್ಯ ಎಂದು ಏನು ಹೇಳುತ್ತೇವೆ ಇದು, ಯಾವ ಸೌಲಭ್ಯವು ಇಲ್ಲದಂಥ ಒಂದು ವ್ಯವಸ್ಥೆಯಾಗುತ್ತದೆ. ಈ ರೀತಿ ಆಗದಂತೆ ನೋಡಿಕೊಂಡು ಹೋಗಬೇಕು. ನಮ್ಮ ರಾಜ್ಯದಲ್ಲಿ ೨೦,೯೯,೦೦,೦೦೦ ಟನ್ ಖನಿಜಗಳು ವಾರ್ಷಿಕವಾಗಿ ಉತ್ಪಾದನೆಯಾಗುತ್ತಿರತಕ್ಕ ಸಂದರ್ಭದಲ್ಲಿ ಬೇರೆ ಬೇರೆ ಉದ್ದಿಮೆಗಳನ್ನು ಮಾಡತಕ್ಕ ಅವಕಾಶವಿದೆ, ಬರೀ ರಫ್ತು ಮಾಡುವುದು ನಮ್ಮ ದಂಧೆಯಾಗಬಾರದು. ನಾವು ಇಡೀ ವರ್ಷ ದಲ್ಲಿ ಅನೇಕ ವಸ್ತುಗಳನ್ನು ರಫ್ತು ಮಾಡುತ್ತೇವೆ, ಅದರ ಬದಲು ನಮ್ಮ ರಾಜ್ಯದಲ್ಲಿಯೇ ಉದ್ದಿಮೆಗಳನ್ನು ಸ್ಥಾಪಿಸಲು ಬೇಕಾದಂಥ ಅವಕಾಶಗಳು ಆಗಬೇಕು. ನಮ್ಮ ರಾಜ್ಯದಲ್ಲಿ ಸುಮಾರು ಹದಿನಾಲ್ಕೂವರೆ ಲಕ್ಷ ವಾಹನಗಳು, ಒಂದು ಲಕ್ಷದ ೩೦ ಸಾವಿರ ಕಿ.ಮೀ. ರಸ್ತೆಯ ಮೇಲೆ ಓಡಾಡುತ್ತಿವೆ, ನಮ್ಮ ರಾಜ್ಯದ ತೆರಿಗೆಯು ಬೇರೆ ರಾಜ್ಯಗಳ ತೆರಿಗೆಗಳಿಗಿಂತ ಜಾಸ್ತಿ, ಈರೀತಿ ಹೆಚ್ಚು ತೆರಿಗೆ ಕೊಟ್ಟರೂ ಕೂಡ ಅರ್ಧ ಭಾಗದಷ್ಟು ರಸ್ತೆಗಳು ಕಚ್ಚಾರಸ್ತೆಗಳು, ಇದರ ಕಡೆಗೆ ಗಮನ ಕೊಡಬೇಕಾಗಿರುವುದರಿಂದ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕು, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕುರಿತು ನಿನ್ನೆ ಸಾಕಷ್ಟು ಚರ್ಚೆ ನಡೆದಿದೆ, ಅದರ ಅಭಿವೃದ್ಧಿ ಆಗುವ ಹಾಗೆ ಅದರ ತೊಂದರೆಯ ನಿವಾರಣೆ ಮತ್ತು ಸೋರುವಿಕೆಯನ್ನು ನಿಲ್ಲುವ ಹಾಗೆ, ಅಂದರೆ ತಮಿಳುನಾಡಿನಲ್ಲಿ ಯಶಸ್ವಿಯಾದಂತೆ ನಮ್ಮಲ್ಲಿಯೂ ಏಕೆ ಆಗಬಾರದು? ಆ ರೀತಿಯಲ್ಲಿ ಒಂದು ದೃಢ ನಿರ್ಧಾರ ಕೈಗೊಂಡು ಕೆಲಸವನ್ನು ಮಾಡತಕ್ಕ ವ್ಯವಸ್ಥೆಯಾಗಬೇಕು. ರಾಜ್ಯಪಾಲರ ಭಾಷಣದಲ್ಲಿ ಬೆಂಗಳೂರಿನ ಸುಯೋಜಿತ ಬೆಳವಣಿಗೆಯ ಬಗ್ಗೆ ಕೂಡ ಉಲ್ಲೇಖವಿದೆ. ಬೆಂಗಳೂರಿನ ಬೆಳವಣಿಗೆಯಾಗಬೇಕು, ಹಸಿರುಪಟ್ಟಿ, ವೃತ್ತರೈಲು, ಕುಡಿಯುವನೀರು ಇವೆಲ್ಲವುಗಳನ್ನು ಅನೇಕ ಕಾಲಗಳಿಂದ ನಾವು ಹೇಳಿರತಕ್ಕದ್ದು ಅದು ಸಮರ್ಪಕವಾಗಿ ಆಗಬೇಕು, ಅದು ಮಾತ್ರವಲ್ಲದೆ ಇತರೇ ನಗರಗಳ ಅಭಿವೃದ್ಧಿ ಸಹ ಆಗಬೇಕು, ನಗರ ಪ್ರದೇಶಗಳಲ್ಲಿ ಸಂಘಟನೆಯ ವ್ಯವಸ್ಥೆ ಇದೆ, ಜಿಲ್ಲೆಯ ಅಭಿವೃದ್ಧಿ, ನಾಗರೀಕರ ಕೂಗು ಬೇಗನೆ ಆಡಳಿತ ವರ್ಗಕ್ಕೆ ಕೇಳುತ್ತದೆ, ಆದರೆ ಗ್ರಾಮಾಂತರ ಪ್ರದೇಶದಲ್ಲಿಯೂ ಸಹ ಇಂಥ ನಗರಗಳ ಸೌಕರ್ಯಗಳು ಸಿಗುವಂಥ ವ್ಯವಸ್ಥೆಯಾಗಬೇಕು. ರಸ್ತೆಗೆ ಟಾರು, ಚರಂಡಿ, ಕುಡಿಯುವ ನೀರು, ಚಿಕ್ಕ ನೀರಾವರಿ, ಸೇತುವೆಗಳು, ಕೊಳವೆ ಬಾವಿಗಳು, ಶೌಚಾಲಯಗಳು, ಗ್ರಾಮದ ಪುನರುಜ್ಜೀವನಕ್ಕೆ ಆದ್ಯತೆಕೊಡತಕ್ಕ ವ್ಯವಸ್ಥೆ ಇವತ್ತು ಆಗಬೇಕಾಗಿದೆ. ಬೆಂಗಳೂರು ನಗರದಲ್ಲಿ ಬಿ.ಡಿ.ಎ.ನವರು ಸೈಟುಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಆದರೆ ಅದು ಅನೇಕ ವರ್ಷಗಳಿಂದ ನಿಂತು ಹೋಗಿದೆ. ೭-೮ ಭಾರಿ ಅರ್ಜಿ ಹಾಕಿದವರಿಗೂ ಕೂಡ ಸೈಟುಗಳು ಸಿಕ್ಕುತ್ತಿಲ್ಲ. ಇದಕ್ಕೆ ಒಂದು ಸೂಕ್ತ ವ್ಯವಸ್ಥೆಯಾಗಬೇಕು. ಇನ್ನೊಂದೆಡೆ ಇಡೀ ಬೆಂಗಳೂರಿನ ಗೃಹ ನಿರ್ಮಾಣ ಸಹಕಾರ ಸಂಘದವರು, ಅಂದರೆ ಜಿ.ವಿ.ಕೆ. ರಾವ್ ರವರ ರಿಪೋರ್ಟ್ ಬಂದನಂತರ ಹಿಂದಿನ ಸರ್ಕಾರದವರು ಯಾರೋ ಒಬ್ಬರು ಮಾಡಿರತಕ್ಕಂಥ ತಪ್ಪಿಗೆ, ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ವೈಯಕ್ತಿಕವಾದ ಲಾಭಕ್ಕಾಗಿ ಮಾರುತ್ತಾರೆ ಎನ್ನತಕ್ಕ ಆರೋಪದ ಫಲವಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದ ಗೃಹ ನಿರ್ಮಾಣ ಸಹಕಾರಿ ಸಂಘಗಳಿಗೆ ತೊಂದರೆಯಾಗಿದೆ, ಕಾರ್ಮಿಕವರ್ಗದವರದ್ದೇ ಆದ ಅನೇಕ ಸಹಕಾರಿ ಸಂಘಗಳು ಇವೆ. ಈ ರೀತಿ ಇರತಕ್ಕ ಸಂಘಸಂಸ್ಥೆಗಳಿಗೆ, ಮಧ್ಯಮ ವರ್ಗದಲ್ಲಿರತಕ್ಕ ಸಂಘ ಸಂಸ್ಥೆಗಳಿಗೆ ತೊಂದರೆಯಾಗಿದೆ. ಬಿ.ಡಿ.ಎ.ನವರು ಕೊಡುವ ದರಕ್ಕಿಂತ ಕಡಿಮೆ ದರದಲ್ಲಿ ಸೈಟುಗಳು ಸಿಗುತ್ತವೆ ಎನ್ನತಕ್ಕ ಆಧಾರದಲ್ಲಿ ತಮ್ಮ ಹತ್ತಿರ ಇದ್ದಬದ್ದ ಹಣವನ್ನೆಲ್ಲಾ ಕೊಟ್ಟು ರೆವಿನ್ಯೂ ಸೈಟನ್ನು ಪಡೆಯಲು ಪ್ರಾರಂಭ ಮಾಡಿದ್ದಾರೆ. ಅದು ಈಗ ನಿಂತಿದೆ. ಅಂದರೆ ಸಹಕಾರಿ ಸಂಘಗಳ ಸೈಟುಗಳಿಗೂ

ಸಹ ಬಿ.ಡಿ.ಎ.ನಿಂದ ನಿಯಂತ್ರಣವಾಗಿದೆ lay-out plan or release of sites. ಬೇರೆ ಸೈಟ್ ಇಲ್ಲವೆನ್ನತಕ್ಕ ಪ್ರಮಾಣ ಪತ್ರವನ್ನುಕೊಡುವ ಸಲುವಾಗಿ,ಕಂದಾಯಬಂದಾಗ ಪ್ಲಾನ್ ಅಪ್ರೂವ್ ಮಾಡಬೇಕಾದಾಗ, ರಸ್ತೆಯನ್ನು ನಿರ್ಮಾಣ ಮಾಡುವ ಬಗ್ಗೆ, ಹತ್ತು ವರ್ಷದ ಲೀಸ್‌ಬಗ್ಗೆ, ಬಿ.ಡಿ.ಎ. ಹೇಳುತ್ತಿದ್ದಾರೆ. ಆದುದರಿಂದ ಇದರಲ್ಲಿ ತೊಂದರೆಯಾಗಿದ್ದರೆ ಮೋಸವಾಗಿದ್ದರೆ ಅಂಥದನ್ನು ಬಿಟ್ಟು ಸಾಚಾ ಸಂಸ್ಥೆಯನ್ನು, ಸದಸ್ಯರನ್ನು ಗುರುತಿಸಿ. ಅದನ್ನು ಬಿಟ್ಟು ಗೃಹ ನಿರ್ಮಾಣ ಕೋ-ಆಪರೇಟೀವ್ ಸೆಕ್ಟಾರನ್ನು ಕೊಲ್ಲುವಂಥ ವ್ಯವಸ್ಥೆ ಆಗಬಾರದು. ಕೋ-ಆಪರೇಟೀವ್ ಸೊಸೈಟಿಗಳು ಸರಿಯಾಗಿ ನಡೆಯಲಿಲ್ಲವೆಂದರೆ, ಏನಾದರೂ ಮೋಸವನ್ನು ಮಾಡಿದ್ದರೆ, ಅಂಥವುಗಳನ್ನು ಮುಚ್ಚಿಬಿಡಿ. ಆದರೆ, ಒಳ್ಳೆಯ ಸಹಕಾರಿ ಸಂಘಗಳನ್ನು ಮುಚ್ಚತಕ್ಕ ಮತ್ತು ಆಡಳಿತಾಧಿಕಾರಿಗಳನ್ನು ಹಾಕತಕ್ಕಂಥ ವ್ಯವಸ್ಥೆ ಸರಿಯಾಗುವುದಿಲ್ಲ. ಇದು ಒಳ್ಳೆಯ ಹೆಸರು ತರತಕ್ಕಂಥ ವ್ಯವಸ್ಥೆಯಲ್ಲವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಕೃಷಿ ಮತ್ತು ನೀರಾವರಿಯ ಬಗ್ಗೆ ಹೇಳುವುದಾದರೆ: ನಮ್ಮಲ್ಲಿ ಬಚಾವತ್ ತೀರ್ಮಾನದ ಪ್ರಕಾರ ಕ್ರಿ.ಶ. ಎರಡು ಸಾವಿರ ವರ್ಷದೊಳಗೆ ಸಂಪೂರ್ಣವಾಗಿ ನಾವು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಹೆಚ್ಚು ಪ್ರಕ್ರಿಯೆಯನ್ನು ಆರಂಭಿಸುತ್ತದೆ ಎನ್ನತಕ್ಕ ಮಾತನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾವು ಅನೇಕ ವರುಷಗಳಿಂದ ಕೃಷ್ಣ ಕಾವೇರಿ ವಿಚಾರಗಳನ್ನು ಹೇಳುತ್ತಿದ್ದೇವೆ. ಅದಕ್ಕೆ ಹಣವನ್ನು ಇಡಬೇಕು. ಕೆಲಸವಾಗಿಲ್ಲವೆನ್ನುವ ಮಾತು ಬರುತ್ತಿದೆ. ಎಸ್.ಎಂ. ಕೃಷ್ಣ ಅವರೇ ಅಧಿಕಾರವನ್ನು ಈಗ ಹಿಡಿದುಕೊಂಡಿದ್ದಾರೆ. ಅನೇಕ ವರ್ಷಗಳಿಂದ ಕೃಷ್ಣ ಕಾವೇರಿ ಹಾಗೆಯೇ ಉಳಿದಿದೆ. ಓ ಕೃಷ್ಣ ಅವರೇ ಈ ಕಾವೇರಿಯ ಪ್ರಶ್ನೆಗೆ ನೀವೇ ಪರಿಹಾರ ಕೊಡಬೇಕು ಎನ್ನುವ ಮೊರೆಯನ್ನು ಕರ್ನಾಟಕದ ಜನ ಮಾಡುತ್ತಿದ್ದಾರೆ. ಇವರ ಕಾಲದಲ್ಲಿ ಈ ಸಮಸ್ಯೆ ತೀರ್ಮಾನ ವಾಗುತ್ತದೆಂದು ನಾನು ಭಾವಿಸಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರಾಹಿ ಯೋಜನೆ ಇದೆ. ಅನೇಕ ವರುಷಗಳ ಹಿಂದೆ ಅಂದಿನ ಮುಖ್ಯ ಮಂತ್ರಿಗಳಾದ ಗುಂಡೂರಾಯರಿಂದ ಇದರ ಶಿಲಾನ್ಯಾಸ ಮಾಡಲ್ಪಟ್ಟಿದ್ದು ಇಂದೂ ನೆನೆಗುದಿಗೆ ಬಿದ್ದಂತಹ ಒಂದು ಯೋಜನೆಯಾಗಿದೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಇತ್ತೀಚೆಗೆ ಅಲ್ಲಿ ಸಂದರ್ಶನದಲ್ಲಿ ಸಾಕಷ್ಟು ವಿಪುಲವಾದ ಅವಕಾಶ ಇದೆ ಎನ್ನುವುದನ್ನು ಕಂಡು ಕೊಂಡು ಕಾರ್ಯಾರಂಭ ಮಾಡಲಿಕ್ಕೆ ಅನುಮತಿ ಕೊಟ್ಟಿದ್ದಾರೆ. ಈ ಕೆಲಸ ಪ್ರಾರಂಭವಾಗಬೇಕು. ೯೦-೯೧ರ ಅಂಕಿ ಅಂಶದ ಪ್ರಕಾರ ರಾಜ್ಯದಲ್ಲಿ ೧ ಕೋಟಿ ೯೦ ಲಕ್ಷದ ೫೦,೦೦೦ ಸಾವಿರ ಹೆಕ್ಟೇರ್ ಭೂಮಿ. ಇದೆ ಅದರಲ್ಲಿ ೧,೧೮,೭೯,೦೦೦ ಕೃಷಿ ಭೂಮಿ ಇದ್ದು ಅದರಲ್ಲಿ ೨೦,೯೪,೩೦೦ ಹೆಕ್ಟೇರ್ ನೀರಾವರಿ ಭೂಮಿಯಾಗುತ್ತದೆ. ಒಟ್ಟು ಕೃಷಿ ಭೂಮಿಯಲ್ಲಿ ೧೮ ಪರ್ಸೆಂಟ್ ಮಾತ್ರ ನೀರಾವರಿಗೆ ಒಳಗೊಂಡಿದೆ. ಆದ್ದರಿಂದ ಚಿಕ್ಕ ನೀರಾವರಿ ಕೆಲಸಗಳು ೪೦-೫೦ ಸಾವಿರ ಕೆರೆಗಳು ಇವೆ, ಇವುಗಳ ದುರಸ್ತಿಯಾಗಬೇಕಾಗಿದೆ. ಕಿಂಡಿ ಅಣೆಕಟ್ಟುಗಳ ನಿರ್ಮಾಣ ಹಾಗೂ ದುರಸ್ತಿ ಉಪ್ಪು ನೀರನ್ನು ತಡೆಗಟ್ಟು ನಿರ್ಮಾಣ ಹಾಗೂ ದುರಸ್ತಿ ಇದೆಲ್ಲಾ ಆಗಬೇಕಾದ ಅವಶ್ಯಕತೆ ಇದೆ. ಖುಷ್ಕಿ ಭೂಮಿ ಅಭಿವೃದ್ಧಿ ಯೋಜನೆ ಪ್ರಾರಂಭಿಕವಾಗಿ ಆಗಿ ಕೆಲವೊಂದು ಫಲವನ್ನು ಪಡೆದಿದ್ದರೂ ಸಹ ನಾವು ಬೇರೆ ಬೇರೆ ಸಮಿತಿಗಳ ಮೂಲಕ ಹೊರ ರಾಜ್ಯಕ್ಕೆ ಹೋದಾಗ ಖುಷ್ಕಿ ಭೂಮಿ ಅಭಿವೃದ್ಧಿಯ ಕಾರ್ಯಕ್ರಮ ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ. ನೀರನ್ನು ಉಪಯೋಗಿಸಿಕೊಳ್ಳುವ ವಿಧಾನ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಒಳ್ಳೆಯ ಪ್ರಮಾಣದಲ್ಲಿ ಅಲ್ಲಿ ಆಗುತ್ತಿರುವುದನ್ನು ನಾವು ನೋಡಿದ್ದೇವೆ. ಅದೇರೀತಿ ಕರ್ನಾಟಕದಲ್ಲೂ ಅದನ್ನು ಮಾಡಬೇಕಾದದ್ದು ಅಗತ್ಯ ಇದೆ. ಲ್ಯಾಂಡ್ ಡೆವಲಪ್‌ಮೆಂಟ್, ವಾಟರ್ ಮ್ಯಾನೇಜ್‌ಮೆಂಟ್, ರೂರಲ್ ಎಂಪ್ಲಾಯ್‌ಮೆಂಟ್ ಈ ತಳಹದಿಯ ಯೋಜನೆಗಳು ಆಗಬೇಕು. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ, ಆರ್ಥಿಕತೆಯ ಅಭಿವೃದ್ಧಿಗೆ ನಾವು ಯೋಜನೆಯನ್ನು ರೂಪಿಸದಿದ್ದರೆ, ತಾತ್ಕಾಲಿಕವಾಗಿ ಯಾವುದಾದರೂ ಆಮಿಷವನ್ನು ಕೊಡತಕ್ಕಂತಹ ಚುನಾವಣೆ ದೃಷ್ಟಿಯಿಂದ ಕೊಡತಕ್ಕ ಯೋಜನೆಗಳನ್ನು ಒನ್ಸ್ ಫಾರ್ ಆಲ್ ಬಿಡತಕ್ಕಂತಹ ಕಾಲ

ಬರುತ್ತದೆಂದು ಭಾವಿಸುತ್ತೇನೆ. ಆ ದೃಷ್ಟಿಯಲ್ಲಿ ವಾಟರ್ ಮ್ಯಾನೇಜ್‌ಮೆಂಟ್ ರೂರಲ್ ಎಂಪ್ಲಾಯ್‌ಮೆಂಟ್ ಬಗ್ಗೆ, ಹೇಳುವುದಾದರೆ, ಮಾನ್ಯ ನಂಜುಂಡಸ್ವಾಮಿಯವರು ಇವತ್ತು ಇಲ್ಲಿ ಇಲ್ಲ, ಅವರು ಯಾವಾಗಲೂ ದೇಶೀಯ ನೀರಾವರಿ ಯೋಜನೆ ಅಭಿವೃದ್ಧಿ ಪದ್ಧತಿಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿರುತ್ತಾರೆ. ವಾಟರ್ ಮ್ಯಾನೇಜ್‌ಮೆಂಟ್ ಟೆಕ್ನಿಕ್‌ನ್ನು ಅಧ್ಯಯನ ಮಾಡಿ ನಮ್ಮ ರಾಜ್ಯದಲ್ಲಿ ಜಾರಿಗೆ ತನ್ನಿ ಎಂದು ಹೇಳುತ್ತಿರುತ್ತಾರೆ. ಆ ದೃಷ್ಟಿಯಲ್ಲಿ ನಮ್ಮ ರಾಜ್ಯದಲ್ಲಿ ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ಸೂಚನೆ ಮಾಡುತ್ತೇನೆ. ಈ ವಿದ್ಯುಚ್ಛಕ್ತಿ ವಲಯಕ್ಕೆ ಸಾಕಷ್ಟು ಪ್ರಾಧಾನ್ಯತೆ ಇದೆ. ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳಿಗೆ ಹಣ ಒದಗಿಸುವುದಲ್ಲದೆ ಶಾಖೋತ್ಪನ್ನ ವಿದ್ಯುಚ್ಛಕ್ತಿ ಸ್ಥಾವರ ಖಾಸಗಿ ವಲಯ ಒಳಗೊಳ್ಳುವ ಹಾಗೆ ಮಾಡುತ್ತೇವೆಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ನಮ್ಮ ಪಶ್ಚಿಮ ಘಟ್ಟ ಮತ್ತು ಇನ್ನಿತರ ಘಟ್ಟಗಳ ಪ್ರದೇಶದಲ್ಲಿ ಅನೇಕ ಜಲಪಾತಗಳು ಇದ್ದು ಅಲ್ಲಿ ಏನಾದರೂ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಬಹುದು. ಶಾಖೋತ್ಪನ್ನ ವಿದ್ಯುತ್ ಸ್ಥಾವರವನ್ನು ಸ್ಥಾಪನೆ ಮಾಡಿ ಅದನ್ನು ನಿರ್ವಹಣೆ ಮಾಡಲಿಕ್ಕೆ ಖಾಸಗಿ ವಲಯಕ್ಕೆ ಕೊಡುವುದರ ಜೊತೆಗೆ ವಿದ್ಯುತ್ ನೀರಾವರಿ, ರಸ್ತೆ ಸೇತುವೆ ಬಂದರು, ಸಾರಿಗೆ ಇತ್ಯಾದಿಗಳಲ್ಲಿ ಕೂಡ ಖಾಸಗೀಕರಣ ಕುರಿತು ಚಿಂತನೆ ಮಾಡುವ ಕಾಲ ಬಂದಿದೆ ಎಂದು ನಾನು ಭಾವಿಸುತ್ತೇನೆ. ಸಾಕಷ್ಟು ಸಂಪನ್ಮೂಲವನ್ನು ಪಡೆಯುವ ದೃಷ್ಟಿ ಇದರ ಕುರಿತು ಜಾಯಿಂಟ್ ಸೆಕ್ಟಾರ್ ಯೋಜನೆ ಇವತ್ತಿನ ಕಾಲದಲ್ಲಿ ಪ್ರಚಲಿತವಾಗುತ್ತಿದೆ. ಈ ರೀತಿಯಾಗಿ ಮಾಡುವುದು ಬಹಳ ಒಳ್ಳೆಯದಿದೆ. ಕೆ.ಇ.ಬಿ. ಮೂಲಕ ವಿದ್ಯುತ್ ತೊಂದರೆ ಎನ್ನುವುದು ರಾಜ್ಯದಲ್ಲಿ ವ್ಯಾಪಕವಾಗಿದೆ. ಅನೇಕ ವರ್ಷಗಳ ಹಿಂದೆ ನನ್ನ ಕ್ಷೇತ್ರದ ಬೈಂದೂರು ಎಂಬಲ್ಲಿ ಒಂದು ಸಬ್ ಸ್ಟೇಷನ್ ಮಂಜೂರಾಯಿತು. ಮಾನ್ಯ ಮುಖ್ಯಮಂತ್ರಿಗಳು ಬಂದು ಫೌಂಡೇಷನ್ ಸ್ಟೋನ್ ಹಾಕಿದರು. ಕೆಲಸ ಪ್ರಾರಂಭವಾಯಿತು ನಂತರ ಆ ಸೈಟ್ ಬೇಡವೆಂದು ಇನ್ನೊಂದು ಕಡೆಗೆ ಹೋಯಿತು. ಬೇರೆ ಬೇರೆ ತಾಂತ್ರಿಕ ದೋಷಗಳಿಂದ, ಒಂದು ಕೆಲಸವಾಗಬೇಕಾದರೆ ಎಷ್ಟು ವಿಳಂಬವಾಗುತ್ತದೆ. ಇದರ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳ ಹತ್ತಿರ ಖಾಸಗಿಯಾಗಿ ಮಾತನಾಡುತ್ತೇನೆ.

೫.೨೫. ಪಿ.ಎಂ.

ಈ ರೀತಿ ತೊಂದರೆಗಳಾದಾಗ ೫ ಕಂಬಗಳಿಗಿಂತ ಹೆಚ್ಚಿಗೆ ಇದ್ದರೆ ಆ ಕೆಲಸವನ್ನು ತೆಗೆದುಕೊಳ್ಳಬಾರದೆಂದು ಒಂದು ಆರ್ಡರ್ ಇದೆ. ೧೯೮೧ರ ಸೆನ್ಸಸ್ ಪ್ರಕಾರ ಇಡೀ ರಾಜ್ಯದಲ್ಲಿ ೨೭,೦೨೪ ಗ್ರಾಮಗಳಿವೆ. ಅವುಗಳಲ್ಲಿ ೪೩೪ ಗ್ರಾಮಗಳಲ್ಲಿ ಜನವಸತಿ ಇಲ್ಲ, ೯೬ ಗ್ರಾಮಗಳು ಮುಳುಗಡೆಯಾಗಿವೆ, ೧೧ ಗ್ರಾಮಗಳು ಅರಣ್ಯ ಇರತಕ್ಕ ಜಾಗ. ಹೀಗಾಗಿ ೧೦೦ ಪರ್ಸೆಂಟ್ ವಿದ್ಯುದ್ದೀಕರಣ ಎಂದು ಘೋಷಣೆ ಆಗಿಹೋಗಿದೆ. ಇದು ಎಲ್ಲಾ ಮಾನ್ಯ ಸದಸ್ಯರಿಗೂ ಮತ್ತು ಮಂತ್ರಿಗಳಿಗೂ ಗೊತ್ತಿರಬಹುದು. ಅನೇಕ ಗ್ರಾಮಗಳಲ್ಲಿ ಒಂದು ಕನೆಕ್ಷನ್ ಆಗಿದೆ. ಆದರೆ ಅದು ಇಡೀ ಗ್ರಾಮ ವಿದ್ಯುದ್ದೀಕರಣ ಎಂದು ಅಲ್ಲ. ನನ್ನ ಕ್ಷೇತ್ರದಲ್ಲಿ ಮುದೂರು ಎಂದು ಒಂದು ಗ್ರಾಮ ಇದೆ. ಇ ಏ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನೆನಪು ಬರಬಹುದೆಂದು ಹೇಳುತ್ತಿದ್ದೇನೆ. ಈ ಗ್ರಾಮಕ್ಕೆ ಒಂದು ಕನೆಕ್ಷನ್ ಬಂದಿದೆ ಇನ್ನು ಉಳಿದವುಗಳಿಗೆ ೫ ಕಂಬಗಳಿಗಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಸರ್ಕಾರದ ನೀತಿ ಏನೇ ಇರಲಿ, ಇವತ್ತು ವಿದ್ಯುತ್ ಬೇಡಿಕೆಯ ಒತ್ತಡ ಇರಬಹುದು, ಹೆಚ್ಚಿಗೆ ಕನೆಕ್ಷನ್ ಕೊಡುವುದಕ್ಕೆ ಕಷ್ಟವಾಗಬಹುದು, ಆದರೆ ಒಂದು-ಎರಡು ಕನೆಕ್ಷನ್ಸ್ ಇರುವಂಥ ಜಾಗದಲ್ಲಿ ಈ ನಿಯಮವನ್ನು ಸಡಿಲಿಸಬೇಕು. ಎಲ್ಲಿ ವಿದ್ಯುತ್ತನ್ನು ವಿಫುಲವಾಗಿ ಒದಗಿಸಿದ್ದಾರೆ ಅಲ್ಲಿಯ ಸಬ್ ಸ್ಟೇಷನ್‌ನಲ್ಲಿ ಹೆಚ್ಚಿಗೆ ಕನೆಕ್ಷನ್ಸ್ ಕೊಡುವುದಕ್ಕೆ ಅವಕಾಶ ಇಲ್ಲ, ಅಂಥ ಕಡೆಯಲ್ಲಿ ಇದನ್ನು ಒಪ್ಪಬಹುದು.

ಇನ್ನು ನಮ್ಮಲ್ಲಿ ಭೂ ಅತಿಕ್ರಮಣವನ್ನು ಸಕ್ರಮಣಗೊಳಿಸುವ ಬಗ್ಗೆ ಕಳೆದ ವರ್ಷ ಒಂದು ಕಾನೂನು ಆಗಿದೆ, ಇದರ ಬಗ್ಗೆ ಸರ್ವೆ ಕಾರ್ಯ ನಡೆಯುತ್ತಿದೆ. ವಿಚಾರಣಾಕಾರ್ಯ ಪ್ರಾರಂಭ

ಆಗಿದೆ. ಈ ವಿಚಾರಣೆ ಕಾರ್ಯ ಬಹಿರಂಗವಾಗಿ ಆಗಬೇಕು, ಸಾರ್ವಜನಿಕವಾಗಿ ಆಗಬೇಕು, ಗುಪ್ತವಾಗಿ ಆಗಬಾರದೆಂದು ನಾನು ಹೇಳಬಯಸುತ್ತೇನೆ. ಸರ್ಕಾರ ಆ ರೀತಿ ಆದೇಶವನ್ನು ಕೊಡಬೇಕು ಒತ್ತುವರಿ ಮಾಡಿದಂಥ ಸಿ ಅಂಡ್ ಡಿ ಜಮೀನು ಏನಿದೆ ಅದನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಗೆ ಕೊಟ್ಟಿದ್ದಾಗಿದೆ. ಅದನ್ನು ಕನ್ಸಿಡರ್ ಮಾಡಲೇಬಾರದೆಂದು ಸರ್ಕಾರ ಆದೇಶ ನೀಡಿದೆ. ಸರ್ಕಾರದ ನೀತಿ ಏನಿದೆ ಎಂದರೆ, ಜಮೀನು ಅರಣ್ಯ ಇಲಾಖೆಗೆ ಹೋಗಿದ್ದರೆ ಅದನ್ನು ಬಡವರಿಗೆ ಕೊಡುವುದಕ್ಕೆ, ಒತ್ತುವರಿಗಾರರಿಗೆ ಕೊಡುವುದಕ್ಕೆ ವಾಪಸು ತೆಗೆದುಕೊಳ್ಳಬೇಕೆಂದು ಇದೆ. ಆದರೆ ಸರ್ಕಾರದ ಅಧಿಕಾರಿಗಳಿಂದ ಈ ಜಮೀನನ್ನು ಕೊಡುವುದಕ್ಕಾಗುವುದಿಲ್ಲವೆಂದು ಆದೇಶ ಬಂದಿದೆ. ಇದರ ಬಗ್ಗೆ ಸರ್ಕಾರ ಪುನರ್ ವಿಮರ್ಶೆ ಮಾಡಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂಕಿ ಭೂಮಿ ಎಂದು ಇದೆ. ಹಿಂದಿನ ಬ್ರಿಟಿಷರ ಕಾಲದಲ್ಲಿ ಯಾರು ಬಡ ಕೃಷಿಕರು, ಸಾಗುವಳಿದಾರರು ಇದ್ದರು ಅವರಿಗೆ ಹೊಂದಿಕೊಂಡಿದ್ದ ಜಮೀನು ಎಂದರೆ ಅದು ಕುಂಕಿ ಜಮೀನು. ಕುಂಕಿ ಎಂದರೆ ಕೃಷಿಗಾಗಿಕುಮ್ಮುಕ್ಕು ಕೊಡಲಿಕ್ಕೆ ಕೊಟ್ಟಂಥ ತೀರ್ವೆ ಇಲ್ಲದೆ ಕೊಟ್ಟಂಥ ಒಂದು ಸವಲತ್ತು. ಹಸಿರು ಎಲೆ ಮತ್ತು ಒಣ ಎಲೆಗಳನ್ನು ತೆಗೆದು ಸಾಗುವಳಿ ಮಾಡುವುದಕ್ಕೆ. ಇತ್ತೀಚೆಗೆ ಭೂಸುಧಾರಣಾ ಕಾನೂನು ಜಾರಿಗೆ ಬಂದಮೇಲೆ ಈ ಸವಲತ್ತು ಯಾರಿಗೆ, ಯಾವ ಒಕ್ಕಲುಗಳಿಗೆ ಹಕ್ಕು ಸಿಕ್ಕಿದೆ ಎಂದರೆ ಅವರಿಗೆ ಕುಂಕಿ ಹಕ್ಕೇ ಇಲ್ಲ. ಕುಂಕಿಯಲ್ಲಿ ಆಕ್ರಮಣ ಮಾಡಿದವರಿಗೆ ಅಧಿಕಾರ ಇಲ್ಲ ಎನ್ನತಕ್ಕ ಮಾತು ನಮ್ಮ ಅಧಿಕಾರೀ ವಲಯದಿಂದ ಬಂದಿದೆ. ಆ ರೀತಿಯ ಸ್ಪಷ್ಟೀಕರಣವನ್ನು ಅವರು ಕೊಟ್ಟಿದ್ದಾರೆ. ಇದು ಬೋರ್ಡ್ ಸ್ಟ್ಯಾಂಡಿಂಗ್ ಆರ್ಡರ್ ಎಂದು ಮದ್ರಾಸ್ ಸರ್ಕಾರದ ಒಂದು ಆಜ್ಞೆಯ ಪ್ರಕಾರ ಕೊಟ್ಟಂಥ ಒಂದು ಹಕ್ಕು, ಒಂದು ಸವಲತ್ತು. ಇದರಲ್ಲಿ ಏನು ಹೇಳುತ್ತಾರೆ ಎಂದರೆ ಪಟ್ಟಾದಾರರಿಗೆ ಕೊಟ್ಟಂಥ, ಸವಲತ್ತು ಅಲ್ಲ. ಅದು ಆ ಭೂಮಿಗೆ ಕೊಟ್ಟಂಥ ಸವಲತ್ತು ಎಂದು. ಆ ಭೂಮಿಗೆ ಕೊಟ್ಟಂಥ ಸವಲತ್ತನ್ನು ತೆಗೆಯಲಿಕ್ಕೆ ಬರುವುದಿಲ್ಲ. ವೈಯಕ್ತಿಕವಾಗಿ, ಒಬ್ಬ ವ್ಯಕ್ತಿಗೆ ಕೊಟ್ಟಂಥ ಸವಲತ್ತನ್ನು ತೆಗೆದುಹಾಕಬಹುದು. ಆದರೆ ಆ ಭೂಮಿ ಭೂಮಿಯಾಗಿಯೇ ಉಳಿಯುತ್ತದೆ. ಅದಕ್ಕೆ ಕೊಟ್ಟಂಥ ಕುಂಕಿ ಫೆಸಿಲಿಟಿ ಎನ್ನತಕ್ಕದು ಮುಂದುವರಿಯಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಪುನರ್ ವಿಮರ್ಶೆ ಮಾಡತಕ್ಕದ್ದು ಅವಶ್ಯಕತೆ ಇದೆ ಎಂದು ನಾನು ಹೇಳಬಯಸುತ್ತೇನೆ.

ಇದೇ ರೀತಿ ಭೂಸುಧಾರಣಾ ಕಾಯಿದೆಯಲ್ಲಿ ಪರಿಹಾರ ಎನ್ನತಕ್ಕದ್ದು ಮಾಡಿದೆ. ೧೦ ಎಕರೆ ಬಿ ಕ್ಲಾಸ್ ಭೂಮಿ ಇರುವವರಿಗೆ ಈ ಸವಲತ್ತು ಸಿಕ್ಕುತ್ತದೆ. ಆದರೆ ಇದು ಯಾರಿಗೆ ಸಿಕ್ಕಿತು ಎಂದರೆ ೧೯೮೮ರ ಸೆಪ್ಟೆಂಬರ್ ವರಗೆ ಬಾಕಿ ಉಳಿದವರಿಗೆ ಮಾತ್ರ. ೮೮ರ ಸೆಪ್ಟೆಂಬರ್‌ಗೆ ಮೊದಲು ಅನೇಕ ಜನರಿಗೆ ಅಂದಿನ ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳೂ ಸೇರಿ ರೈತರಿಗೆ ಒತ್ತಾಯಮಾಡಿ ಪಿ.ಎಲ್.ಡಿ. ಬ್ಯಾಂಕ್‌ನಿಂದ ಸಾಲವನ್ನು ಪಡೆದು ಈ ಲೋನನ್ನು ಕ್ಲಿಯರ್ ಮಾಡಿಸಿದ್ದಾರೆ. ಇವತ್ತು ಅವನು ಸಾಲಗಾರನಾಗಿದ್ದಾನೆ. ಅನೇಕ ಜನರು ಇನ್ನೂ ಆ ಸಾಲವನ್ನು ತೀರಿಸುವುದಕ್ಕೇ ಆಗಿಲ್ಲ. ಆ ಸಾಲ ಕೂಡ ಸರ್ಕಾರದಿಂದ ಕೊಡಬೇಕಾದ ರಿಯಾಯಿತಿಗೆ ಒಳಪಡಬೇಕೆಂದು ನಾನು ಹೇಳಬಯಸುಯತ್ತೇನೆ. ಈ ರಾಜ್ಯದಲ್ಲಿ ಸಹಕಾರಿ ಕ್ಷೇತ್ರಕ್ಕೆ ಕಾಯಕಲ್ಪ ಆಗಬೇಕಾಗಿದೆ. ಸಹಕಾರಿ ಮಾರ್ಕೆಟಿಂಗ್ ವ್ಯವಸ್ಥೆ ಕೆಳಮಟ್ಟದಲ್ಲಿ ಶಿಥಿಲವಾಗಿ ಹೋಗಿದೆ. ಹಲವಾರು ಪರಿಷ್ಕರಣ ಘಟಕಗಳು ಅನಾಹುತವಾಗಿ ಹೋಗಿದೆ. ೪೮೩೩ ವ್ಯವಸಾಯ ಸೇವಾ ಸಹಕಾರಿ ಸಂಘಗಳು ಬರೀ ೧೮೦ ಕೋಟಿ ರೂಪಾಯಿ ಸಾಲ ನೀಡಲು ಶಕ್ತವಾಗಿವೆ. ಬಡ್ಡಿ ರೀಯಾಯಿತಿಗೂ ಆಕ್ಷೇಪ ಬರುತ್ತಿದೆ. ಉತ್ಪಾದನಾ ನೆರವಿಗೆ ಪ್ರೊಡಕ್ಷನ್ ಇನ್‌ಸೆಂಟೀವ್ ಅದಕ್ಕೂ ಆರ್.ಬಿ.ಐ. ಅಥವಾ ನಬಾರ್ಡಿನ ಆಕ್ಷೇಪ ಇದೆಯೆಂದು ನಾವು ಕೇಳಿದ್ದೇವೆ. ಕೊಡುವ ಅಲ್ಪ ಸಾಲಕ್ಕೂ ವಿಪರೀತ ಬಡ್ಡಿದರವನ್ನು ಆರ್.ಬಿ.ಐ. ವಿಧಿಸುತ್ತಿದೆ. ಇದು ೧೦ ರಿಂದ ೧೫ ಪರ್ಸೆಂಟ್ ವರೆಗೆ ಹೋಗಿದೆ. ರೈತನ ಉತ್ಪತ್ತಿಯನ್ನು ಸೊಸೈಟಿಯಲ್ಲಿಟ್ಟು ತೆಗೆದಂಥ ಉತ್ಪತ್ತಿಯ ಸಾಲಕ್ಕೆ ೨೩ ಪರ್ಸೆಂಟ್ ಇಂಟರೆಸ್ಟ್ ಬೀಳುತ್ತಿದೆ. ಹಾಗಾಗಿ ಈ ಪ್ರೊಡಕ್ಷನ್ ಇನ್‌ಸೆಂಟೀವ್‌ವನ್ನು

ಸರ್ಕಾರ ಘೋಷಣೆ ಮಾಡಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅದು ಜನರಿಗೆ ಅಭ್ಯಾಸವಾಗಿ ಹೋಗಿದೆ. ಕಡಿಮೆ ಬಡ್ಡಿಯಲ್ಲಿ ಕೊಟ್ಟಂಥ ಆರ್.ಬಿ.ಐ. ಅಥವಾ ನಬಾರ್ಡಿನ ಸಾಲ ರೈತರಿಗೆ ಕಡಿಮೆ ದರದಲ್ಲಿ ಸಿಗುವಂಥ ವ್ಯವಸ್ಥೆ ಆಗಲೇಬೇಕಾಗಿದೆ. ಅಲ್ಪಾವಧಿ ಮತ್ತು ದೀರ್ಘಾವಧಿ ಎರಡು ಸಾಲಗಳಿಗೆ ಎರಡೆರಡು ವ್ಯವಸ್ಥೆಗಳು ಇರಬೇಕಾದದ್ದು ಇಲ್ಲ. ಆಂಧ್ರ ಪ್ರದೇಶದಲ್ಲಿ ಈ ಎಕ್ಸ್‌ಪಿರಿಮೆಂಟ್ ಆಗಿದೆ. ಸನ್ಮಾನ್ಯ ಏಕಾಂತಯ್ಯನವರು ಸಹಕಾರಿ ಮಂತ್ರಿಗಳಾಗಿದ್ದಾಗ ಇದಕ್ಕೆ ಪರಿಶೀಲನೆಗೆ ಪ್ರಾರಂಭ ಮಾಡಿದ್ದರು. ಅದೇರೀತಿ ಇದರ ಕುರಿತು ಪರಿಶೀಲನೆಯಾಗಬೇಕು. ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎನ್ನುವಂಥ ಎರಡೆರಡು ಸಂಸ್ಥೆಗಳು ಇರಬೇಕಾದ ಅಗತ್ಯವಿಲ್ಲವೆಂದು ನನಗನ್ನಿಸುತ್ತದೆ. ಶ್ರೀಮಾನ್ ದೇಶಪಾಂಡೆಯಯವರು ಇದರ ಬಗ್ಗೆ ಸಹಕಾರಿ ರಂಗದಲ್ಲಿ ಬಹಳ ಕೆಲಸ ಮಾಡಿದವರು. ಆದ್ದರಿಂದ ಈ ವ್ಯವಸ್ಥೆಯನ್ನು ಕುರಿತು ನಮ್ಮ ರಾಜ್ಯದಲ್ಲಿ ಒಂದು ಚಿಂತನೆ, ಒಂದು ಕ್ರಮ ಪ್ರಾರಂಭವಾಗಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಕ್ರೆಡಿಟ್ ಕಾರ್ಡ್, ಕ್ರೆಡಿಟ್‌ಕಾರ್ಡ್ ಎಂದು ಪ್ರತಿವರ್ಷ ಸಹಕಾರಿ ಸಚಿವರು ಹೇಳುತ್ತಿರುತ್ತಾರೆ. ಇದು ಒಂದು ಕಲ್ಪನೆಯ ಕೂಸಾಗಿರುತ್ತದೆ. ಅದಕ್ಕಿಂತ ಮುಂದು ಹೋಗುವುದಿಲ್ಲ. ಅದು ಇದ್ದರೆ ಅದನ್ನು ಮಾಡಬೇಕು ಇಲ್ಲದಿದ್ದರೆ ಅದನ್ನು ಹೇಳುವುದನ್ನಾದರೂ ಬಿಡಬೇಕು. ಎರಡರಲ್ಲಿ ಒಂದು ವ್ಯವಸ್ಥೆಯಾಗಬೇಕೆಂದು ನನ್ನ ಅನಿಸಿಕೆ. ಸಹಕಾರಿ ಕಾನೂನಿಗೆ ತಿದ್ದುಪಡಿ ಮಾಡುವ ವಿಚಾರ ಬಹಳಷ್ಟು ವರ್ಷಗಳಿಂದ ನಾವು ಕೇಳುತ್ತಿರುವಂಥ ಮಾತಾಗಿದೆ. ಸನ್ಮಾನ್ಯ ಕೆ.ಹೆಚ್. ಪಾಟೀಲ್‌ರವರು ಸಹಕಾರಿ ರಂಗದಲ್ಲಿ ವಿಶಿಷ್ಟವಾದ ಸೇವೆಯನ್ನು ಸಲ್ಲಿಸಿದವರು. ಈ ಸದನದ ಎಲ್ಲಾ ಭಾಗದ ಸದಸ್ಯರೊಡನೆ ಸಮಾಲೋಚನೆ ಮಾಡಿ ಸಾಧಾರಣ ಒಂದು ತಿದ್ದುಪಡಿಯನ್ನು ರೂಪಿಸಲಿಕ್ಕೆ ವ್ಯವಸ್ಥೆಯನ್ನು ಮಾಡಿ. ಆದಾಗಿ ಎರಡು ವರ್ಷಗಳಾಯಿತು. ದುರಾದೃಷ್ಟವಶಾತ್ ಆ ತಿದ್ದುಪಡಿಯ ಕಾನೂನು ಮುಂದೆಬರಲಿಲ್ಲ. ಅದು ಈಗಲಾದರೂ ಬರಬೇಕು. ಈಗ ಎರಡು ವರ್ಷಗಳಾದುದರಿಂದ ಹೊಸ ಚಿಂತನೆ ಅವಶ್ಯವಾಗಿ ಆಗಬೇಕು. ಅದರ ಕುರಿತು ಚಿಂತನೆ ಮಾಡಿ ಇದನ್ನು ತರಬೇಕು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಪಶುಸಂಗೋಪನಾ ವಿಚಾರದಲ್ಲಿ ನಮ್ಮ ಚಿಕಿತ್ಸಾ ವ್ಯವಸ್ಥೆಗಳು ಬಹಳ ಕಡಿಮೆಯಿರುತ್ತವೆ. ಜಾನುವಾರು, ಕುರಿ ಕೋಳಿಗಳು ಇತ್ಯಾದಿ ಎಲ್ಲಾ ಒಟ್ಟಿಗೆ ನಮ್ಮ ಸೆನ್ಸಸ್ ಫಿಗರ್ ಪ್ರಕಾರ ೪ ಕೋಟಿಯಾಗುತ್ತವೆ. ನಮ್ಮ ರಾಜ್ಯದಲ್ಲಿ ೧೭೪೫ ಪಶುಚಿಕಿತ್ಸಾಲಯಗಳು ವಿವಿಧ ಹಂತದಲ್ಲಿವೆ. ಆದ್ದರಿಂದ ಚಿಕಿತ್ಸಾ ವ್ಯವಸ್ಥೆ ಹೆಚ್ಚಿಗೆಯಾಗಬೇಕು. ಅಮುಲ್ ಮಾದರಿಯ ಡೈರಿಯ ಅಭಿವೃದ್ಧಿಗೆ ನಮ್ಮಲ್ಲಿ ಒಳ್ಳೆಯ ಅವಕಾಶವಿರುತ್ತದೆ. ಈ ಕ್ರಮವನ್ನು ಕೈಗೊಳ್ಳಲಿಕ್ಕೆ ಯೋಗ್ಯ ಚಿಂತನೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಮೀನುಗಾರಿಕೆ ವ್ಯವಸ್ಥೆಯಲ್ಲಿ ಉಪ್ಪುನೀರಿನ ಕೃಷಿಗೆ ಉತ್ತೇಜನ ನೀಡಲಿಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಸಿಗಡಿ ಮೀನಿನ ಕೃಷಿಯನ್ನು ಮಾಡಲಿಕ್ಕೆ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅರ್ಜಿಗಳನ್ನು ಕರೆದರು. ಸ್ಥಳೀಯ ಕೃಷಿಕರನ್ನು ಆಯ್ಕೆ ಮಾಡುವುದನ್ನು ಬಿಟ್ಟು, ಯಾವುಯಾವುದೋ ಊರಿನವರನ್ನು ಆಯ್ಕೆ ಮಾಡಲಾಗಿದೆ. ಅವರು ಇವತ್ತು ಬರುತ್ತಿಲ್ಲ, ಅದು ಏತಕ್ಕೆ ಈ ರೀತಿ ಆಯ್ಕೆಯಾಯಿತೋ ನನಗೆ ಗೊತ್ತಿಲ್ಲ. ಸರ್ಕಾರದ ಕಾನೂನುಗಳು ಅಂದರೆ ಇದೇರೀತಿ ನಮ್ಮ ಆರೋಗ್ಯ ಇಲಾಖೆಯಲ್ಲೂ ಇಂಥದ್ದೆ ಒಂದು ಆಯಿತು. ಕಾಂಟ್ರಾಕ್ಟ್ ಬೇಸಿಸ್‌ಮೇಲೆ ಡಾಕ್ಟರನ್ನು ತೆಗೆದುಕೊಳ್ಳಬೇಕೆಂದು ಆಯಿತು. ಆಯಾ ಊರಿನವರು, ಊರಿನ ಹತ್ತಿರದವರು ಡಾಕ್ಟರ್ ಅರ್ಜಿಗಳನ್ನು ಕೊಟ್ಟರು. ಅವರಿಗೆ ಕೆಲಸ ಕೊಡುವ ಬದಲಿಗೆ ಬೆಂಗಳೂರು ಮೈಸೂರಿನವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರದ ಕೊಲ್ಲೂರಿಗೆ ಕೊಟ್ಟಿದ್ದಾರೆ. ಮನವಂತೆಗೆ ಕೊಟ್ಟಿದ್ದಾರೆ, ಗಂಗೊಳ್ಳಿಗೆ ಕೊಟ್ಟಿದ್ದಾರೆ. ಆದರೆ ಅವರೊಬ್ಬರೂ ಬರುತ್ತಿಲ್ಲ. ಆಯಾಯ ಸ್ಥಳೀಯರಿಗೆ ಏತಕ್ಕೆ ಕೊಡಬಾರದು? ಇದು ಎಂಥ ವ್ಯವಸ್ಥೆ? ಇದು ಅರ್ಜಿಗಳನ್ನು ಕರೆದಾಗ ಹೀಗೆ

ಕೊಡಬಾರದೆನ್ನುವುದು ಇರಬೇಕು. ಹೋಗಲಿ ಅಪರಾದರೂ ಬಂದು ಸೇರಿದರೆ, ಇಲ್ಲ. ಅದೇ ರೀತಿ ಸಿಲಗಡಿ ಮೀನಿನ ಕೃಷಿ. ಇವರ್ಯಾರೂ ಮೀನಿನ ಕೃಷಿ ಪ್ರಾರಂಭ ಮಾಡಿದರೋ, ಅದು ಮಾಡಲಿಲ್ಲ. ಇದರ ಬಗ್ಗೆ ಪುನರ್ವಿಮರ್ಶೆಯಾಗಬೇಕು. ನಮ್ಮ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರರಿಗೆ ಮನೆ, ಶೌಚಾಲಯ,ರಸ್ತೆಗಳು ನಿರ್ಮಾಣ ಇತ್ಯಾದಿ ಎಲ್ಲಾ ಆಗಬೇಕು. ಇದಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆದಷ್ಟು ಬೇಗ ಈ ಪೌರಸೌಲಭ್ಯಗಳನ್ನು ಒದಗಿಸಿಕೊಡಬೇಕು. ಎಂಟನೆಯ ಯೋಜನೆಯಲ್ಲಿ ಕೆಲವು ಹೆಚ್ಚಿನ ಬಂದರುಗಳು ಆಗಬೇಕಾಗುತ್ತದೆ. ಮೀನುಗಾರಿಕೆಗೆ ಚಿಕ್ಕಬಂದರುಗಳು ಆಗಬೇಕಾಗುತ್ತದೆ. ಮಂಗಳೂರು,ಮಲ್ಪೆ, ಬಟ್ಕಳ, ತದಡಿ, ಕಾರವಾರ ಕೇವಲ ಇವೇ ಸಾಕಾಗುವುದಿಲ್ಲ. ಅವೆಲ್ಲಾ ಒಂದು ಸ್ಯಾಚ್ಯುರೇಷನ್ ಪಾಯಿಂಟ್‌ಗೆ ಬಂದು ಮುಟ್ಟಿವೆ. ಇನ್ನು ಮುಂದಿನ ದಿನಗಳಲ್ಲಿ ಹಿರೂರು,ಕಾಪು,ಮುಲ್ಕಿ ಇತ್ಯಾದಿ ಕಡೆಗಳಲ್ಲಿ ಬಂದರುಗಳು ಆಗಬೇಕಾಗಿದೆ. ಇದರ ಬಗ್ಗೆ ಆನೇ ಯೋಜನೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಆನೇ ಯೋಜನೆಯ ಕರಡು ತಯಾರಾಗುವ ಹಂತದೊಳಗಾಗಿ ಇದರ ವರದಿ ಹೋಗುವುದಿಲ್ಲವೆಂದು ಮೀನುಗಾರಿಕೆ ಸಂಬಂಧದಲ್ಲಿ ವಿಚಾರ ಮಾಡತಕ್ಕ ನಮ್ಮ ಜಿಲ್ಲೆಯ ಕೆಲವು ಜನ ಹಿರಿಯ ಮುಖಂಡರು ಹೇಳಿದ್ದಾರೆ. ಆದುದರಿಂದ ಈ ವಿಚಾರವನ್ನು ತಿರುಗಿ ಹೇಳುತ್ತಿದ್ದೇನೆ. ಇನ್ನು ಜನರು ಪಾಲ್ಗೊಳ್ಳುವ ಮೂಲಕ ಅರಣ್ಯ ನಿರ್ವಹಣೆ ಎಂಬ ಕಾರ್ಯಕ್ರಮವನ್ನು ಮಾಡಲಿಕ್ಕೆ ಹೊರಟಿದ್ದಾರೆ. ಇದು ಸ್ತುತ್ಯಾರ್ಹವಾದುದು. ಕೆಲವು ಕಡೆ ಅಭಯಾರಣ್ಯಗಳಲ್ಲಿ ಕ್ರೂರ ಮೃಗಗಳಿಂದ ಬೆಳೆಗೆ ಮತ್ತು ಜಾನುವಾರುಗಳಿಗೆ ತೊಂದರೆಯಾಗುತ್ತಿದೆ. ಅದಕ್ಕೆ ತಕ್ಷಣ ಪರಿಹಾರ ಸಿಗುವ ವ್ಯವಸ್ಥೆ ಆಗಬೇಕು. ಫಾರೆಸ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ವೈಲ್ಡ್ ಲೈಫ್ ಮತ್ತು ಜನರಲ್ ಫಾರೆಸ್ಟ್ ಡಿವಿಜನ್ ಎರಡನ್ನು ಒಟ್ಟಿಗೆ ಮಾಡಿ ಹಾಕಿದ್ದರಿಂದ ತೊಂದರೆಯಾಗಿದೆ. ಬೇಕಾದ ಸವಲತ್ತು ಜನರಿಗೆ ಸಿಕ್ಕಿದೆ ತೊಂದರೆ ಆಗಿದೆ. ಆ ಬಗ್ಗೆ ಈಗ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇದಕ್ಕೆ ಪ್ರತ್ಯೇಕ ವಿಭಾಗ ಮಾಡತಕ್ಕದ್ದು ಅತಿ ಅಗತ್ಯವಾಗಿದೆ. ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡುವ ಘೋಷಣೆ ಮಾಡಿ ಕಳೆದ ಕೆಲವು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಕೆಲಸವಾಗುತ್ತಿದೆ. ಇದು ಸಂಪೂರ್ಣವಾಗಿ ಕಾರ್ಯಗತವಾಗಬೇಕಾದರೆ ಈಗಿರುವ ವಿವಿಧ ಹಂತದ ೨೩೭೭ ಆಸ್ಪತ್ರೆಗಳ ಜೊತೆಗೆ ಇನ್ನೂ ಹೆಚ್ಚಿನ ಆರೋಗ್ಯ ಘಟಕಗಳು ಮತ್ತು ಆಸ್ಪತ್ರೆಗಳು ಆಗಬೇಕಾಗಿದೆ. ಖಾಲಿ ಇರುವ ಜಾಗದಲ್ಲಿ ವೈದ್ಯರ ನೇಮಕವಾಗಬೇಕಾಗುತ್ತದೆ. ಕನಿಷ್ಠ ಮಂಡಲದ ಮಟ್ಟದಲ್ಲಿ ಒಂದಾದರೂ ಆಸ್ಪತ್ರೆ ಇರುವಂತೆ ಅಥವಾ ಚಿಕ್ಕ ಡಿಸ್ಪೆನ್ಸರಿ ಇರುವಂತೆ ವ್ಯವಸ್ಥೆ ಆಗಬೇಕಾಗುತ್ತದೆ. ನಮ್ಮ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ಒಂದು ಸೂಚನೆ ಕೊಟ್ಟೆವು. ಕೆಲವು ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲ, ಕೆಲವು ಆಸ್ಪತ್ರೆಗಳಲ್ಲಿ ೨-೩ ಜನ ವೈದ್ಯರಿದ್ದಾರೆ. ೨-೩ ಜನರಿದ್ದಲ್ಲಿ ಅವರನ್ನು ತೆಗೆದು ಒಬ್ಬರೂ ಇಲ್ಲದ ಜಾಗಕ್ಕೆ ಒಬ್ಬೊಬ್ಬರನ್ನು ಹಾಕಿ ಎಂದು ಸೂಚನೆ ಕೊಟ್ಟಾಗ ನನ್ನ ಕ್ಷೇತ್ರದಲ್ಲಿ ಒಂದು ಘಟನೆ ಆಯಿತು. ಅದನ್ನು ಹೇಳಲಿಕ್ಕೆ ನನ್ನ ಮನಸ್ಸಿಗೆ ತುಂಬಾ ನೋವಾಗುತ್ತದೆ. ಯಾರಿಗೂ ಬೇಡದ ವ್ಯಕ್ತಿ ಯಾವುದೋ ಆಸ್ಪತ್ರೆಯಲ್ಲಿದ್ದರು. ಅವರನ್ನು ರಿಟೈರ್ ಮಾಡಿ ಮನೆಗೆ ಕಳುಹಿಸಬೇಕಾಗಿತ್ತು. ಅವರಿಗೆ ಬಹುತೇಕ ಸ್ವಾಸ್ಥ್ಯ ಸರಿ ಇರಲಿಲ್ಲ. ಅಪರಾಹ್ನದ ಹೊತ್ತು ಮದ್ಯಪಾನ ಮಾಡುವಂತ ಚಟ ಇದೆ. ಹೀಗಾದರೆ ಹೇಗಾಗಬಹುದು ಇಂಥ ವೈದ್ಯರು ಏತಕ್ಕೆ? ಹಕ್ಕಾಳಿ ಎಂಬ ಆಸ್ಪತ್ರೆಯಲ್ಲಿದ್ದಾರೆ, ಬೇಕಾದರೆ ತಾವು ಪರಿಶೀಲಿಸಬಹುದು. ಇವತ್ತು ಅಲ್ಲಿನ ಜನರು ಗೋಳಾಡುತ್ತಿದ್ದಾರೆ. ಮೂವರಲ್ಲಿ ಒಬ್ಬ ವೈದ್ಯರನ್ನು ಕೊಡಿ ಎಂದರೆ ನಮ್ಮ ಪಾಲಿಗೆ ಇಂಥ ಡಾಕ್ಟರ್ ಬಂದರೆ ಎಂದು ಜನ ಹೇಳುತ್ತಿದ್ದಾರೆ. ಇಂಥ ವ್ಯವಸ್ಥೆ ಇರಬಾರದು, ಸರಿಯಾದ ವ್ಯವಸ್ಥೆ ಆಗಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಪಟ್ಟ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕುರಿತು ಹಾಗೂ ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸ್ಸು ಮಾಡಿರುವ ಕುರಿತು ಸರ್ಕಾರ ಸದ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳುತ್ತೇವೆಂಬ ಮಾತು ಬಂದಿದೆ. ಅದು ಬೇಗ ಆಗಬೇಕು.

ಸದ್ಯದಲ್ಲಿಯೇ ಎಂಬುದು ನೆನೆಗುದಿಗೆ ಬೀಳತಕ್ಕ ಪ್ರಶ್ನೆ ಆಗಬಾರದು. ಎಸ್.ಸಿ, ಎಸ್.ಟಿ.ಯವರಿಗೆ ಕೊಡತಕ್ಕ ಸವಲತ್ತು ಯಾವುದು ಇದೆ ಇದು ಅನೇಕ ಕಡೆಗಳಲ್ಲಿ ಕೊಟ್ಟವರಿಗೆ ಕೊಡುತ್ತಿದ್ದೇವೆ. ಪಡೆದ ಕುಟುಂಬಗಳೇ ತಿರುಗಿ ತಿರುಗಿ ಅದರ ಫಲ ಪಡೆಯುತ್ತಿದ್ದಾರೆಂದು ಇದರ ಬಗ್ಗೆ ಸಮರ್ಪಕವಾದ ಸರ್ವೆ ಆಗಬೇಕು. ಲಾಗಾಯ್ತಿನಿಂ:ೆ ಯಾವುದೇ ಸವಲತ್ತು ಸಿಕ್ಕದೆ ಹಳ್ಳಿಯಲ್ಲಿರತಕ್ಕ ಬಾಯಿ ಬಾರದಂತ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದ ಬಡವರನ್ನು ಗುರುತಿಸಿ ಅವರಿಗೆ ಸವಲತ್ತು ಕೊಡುವ ವ್ಯವಸ್ಥೆ ಮಾಡಿದರೆ ಮಾತ್ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣವಾಗುತ್ತದೆಯೇ ಹೊರತು ನಾವು ಇಂಥಿಂಥ ತಿಂಗಳುಗಳಲ್ಲಿ ಇಷ್ಟಿಷ್ಟು ಪ್ರೋಗ್ರೆಸ್ ಮಾಡಬೇಕೆಂದು ಯಾರನ್ನಾದರೂ ಹಿಡಿದು ಯಾರಿಗಾದರೂ ಸವಲತ್ತು ಕೊಟ್ಟು ಫೆಬ್ರವರಿ ಮಾರ್ಚಿನಲ್ಲಿ ಕೆಲಸ ಮುಗಿಸುವ ಕಾರ್ಯಕ್ರಮ ಹಾಕಿಕೊಂಡರೆ ಯಾವ ಸರ್ಕಾರಕ್ಕೂ ಶೋಭೆ ತರತಕ್ಕ ವಿಚಾರ ಅಲ್ಲ. ಐಆರ್‌ಡಿಪಿ ಫಲಾನುಭವಿಗಳ ವಿಚಾರದಲ್ಲಿ ಕೂಡ ಹಾಗೆಯೆ. ಗ್ರಾಮಸಭೆಯಲ್ಲಿ ಇದು ಸಮರ್ಪಕವಾಗಿ ವಿಚಾರವಿನಿಮಯವಾಗಬೇಕು. ಹೆಸರಿಗೆ ಮಾತ್ರ ಗ್ರಾಮಸಭೆ ನಡೆಯುತ್ತದೆ. ಬ್ಯಾಂಕು ಮತ್ತಿತರ ಸಂಸ್ಥೆಗಳ ಪ್ರತಿನಿಧಿಗಳು ಬಂದಿರುತ್ತಾರೆ. ಎಲ್ಲಾ ಪ್ರತಿನಿಧಿಗಳು ಇರುತ್ತಾರೆ. ಅವರಿಗೆ ಮೊದಲ ಸಾಲ ಇಲ್ಲ, ಅರ್ಹತೆ ಇದೆ ಎಂದು ಹೇಳಿ ಗುರುತಿಸಿ ಮಾಡುತ್ತಾರೆ. ಅನಂತರ ಸಾಲ ಕೊಡುವಾಗ ಅವನಿಗೆ ಹಿಂದಿನ ಸಾಲ ಇದೆ, ಡೀಫಾಲ್ಟರ್ ಇದ್ದಾನೆ, ಜಾಮೀನು ಡೀಫಾಲ್ಟರ್ ಎಂದೆಲ್ಲ ಮಾತು ಬರುತ್ತದೆ. ಇದೆಲ್ಲಾ ಬರಬಾರದು. ಐಆರ್‌ಡಿಪಿ ಸಂಬಂಧವಾಗಿ ಹಾಕಿಕೊಂಡ ಕಾರ್ಯಕ್ರಮ ಬಡವರಿಗೆ ಅನುಕೂಲ ಮಾಡಿಕೊಡತಕ್ಕದ್ದು. ಆದರೆ ಅದಕ್ಕೆ ತದ್ವಿರುದ್ಧವಾಗುತ್ತಿದೆ. ಯಾರನ್ನೋ ತಪ್ಪಿಸಿ ಯಾರಿಗೋ ಬೆನಿಫಿಟ್ ಕೊಡುವ ಕಾರ್ಯಕ್ರಮವಾಗುತ್ತಿದೆ. ಇದು ಆಗಬಾರದು. ಗ್ರಾಮೀಣ ನೀರು ಪೂರೈಕೆಯ ಒಂದು ಕಾರ್ಯಕ್ರಮದಲ್ಲಿ ಆದ್ಯತೆ ನೀಡಬೇಕಾಗುತ್ತದೆ. ಈ ವಿಶ್ವಬ್ಯಾಂಕ್,ಡ್ಯಾನಿಡಾ,ನೆದರ್‌ಲ್ಯಾಂಡ್ ಇತ್ಯಾದಿ ಇತ್ಯಾದಿ ನೆರವು ಬರುತ್ತದೆ ಎಂದು ಕೇಳುತ್ತಾ ಬಹಳ ವರ್ಷಗಳಾಯಿತು. ಇದು ಬರುವುದಿಲ್ಲ,ಬರುವುದಾದರೆ ಆದಷ್ಟು ಬೇಗ ಬರುವ ಹಾಗೆ ಮಾಡಬೇಕು. ಅನೇಕ ಗ್ರಾಮಗಳಿಗೆ ತೊಂದರೆ ಆಗಿದೆ. ಮುಖ್ಯವಾಗಿ ಕೊಳವೆ ಬಾವಿಗಳ ದುರಸ್ತಿ,ಕೊಳವೆ ಬಾವಿಗಳನ್ನು ತೋಡಿಸುವುದರ ಜೊತೆಗೆ ಒಂದು ಕಾಲದಲ್ಲಿ ಕೊಳವೆ ಬಾವಿಗಳು ಬಹಳಷ್ಟು ಪ್ರಖ್ಯಾತಿಯಾದವು. ನಜೀರ್‌ಸಾಬ್ ಅವರ ಕಾಲದಲ್ಲಿ. ಈಗ ಅವೇ ಹಾಕಿದ ಕೊಳವೆ ಬಾವಿಗಳು ಕೆಟ್ಟುಹೋಗಿವೆ. ಕೊಳವೆ ಬಾವಿಗಳ ಕೆಪಾಸಿಟಿ ಎಷ್ಟು, ಬರುವ ನೀರು ಎಷ್ಟು, ಅವನ್ನು ಮುಂದೆ ಯಾವ ರೀತಿ ದುರಸ್ತಿ ಮಾಡಬೇಕೆನ್ನುವ ಕುರಿತು ವಿಶಿಷ್ಟವಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. "ವಿಕೇಂದ್ರಿಕೃತ ಪದ್ಧತಿಯ ಸರ್ಕಾರದ ಬಗ್ಗೆ ನನ್ನ ಸರ್ಕಾರಕ್ಕಿರುವ ಪೂರ್ಣ ವಿಶ್ವಾಸವನ್ನು ಪುನರುಚ್ಚರಿಸಬಯಸುತ್ತೇನೆ" ಎಂದು ಹೇಳುತ್ತಾ ಮುಂದೆ "ಸಂವಿಧಾನದ ೭೩ನೇ ತಿದ್ದುಪಡಿಯ ಅನ್ವಯ ಮೂರು ಹಂತಗಳ ನೇರ ಚುನಾಯಿತ ಪಂಚಾಯತ್ ರಾಜ್ಯ ವ್ಯವಸ್ಥೆಗೆ ಸಂಬಂಧಿಸಿದಂತೆ ಸಮಗ್ರ ಶಾಸನವೊಂದನ್ನು ಜಾರಿಗೆ ತರಲು ನನ್ನ ಸರ್ಕಾರವು ಉದ್ದೇಶಿಸಿದೆ" ಎನ್ನುವ ಮಾತನ್ನು ಹೇಳಿದ್ದಾರೆ. ಈ ಶಾಸನವನ್ನು ತರಬೇಕು ಮತ್ತು ಆದಷ್ಟು ಬೇಗ ಚುನಾಯಿತವ್ಯವಸ್ಥೆ ಆಗಬೇಕು. ಚುನಾವಣೆ ಆಗಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಈ ದೇಶದಲ್ಲಿ ಗಟ್ಟಿಯಾಗಿ ಉಳಿಯಬೇಕಾದರೆ ಅದು ಗ್ರಾಮಗಳಲ್ಲಿ ತನ್ನ ಅಂತಸ್ತತ್ವವನ್ನು ಪಡೆಯಬೇಕಾಗುತ್ತದೆ. ಗ್ರಾಮದಲ್ಲಿ, ಜಿಲ್ಲೆಯಲ್ಲಿ,ರಾಜ್ಯದಲ್ಲಿ ,ಕೇಂದ್ರದಲ್ಲಿ ,ಹೀಗೆ ನಾಲ್ಕು ಸ್ಥಂಭಗಳ ಅಧಿಕಾರದ ಆಧಾರದ ಮೇಲೆ ಸಂವಿಧಾನಬದ್ಧವಾಗಿ ಪ್ರಜಾಪ್ರಭುತ್ವದ ಪರಿಕಲ್ಪನೆಯ ಒಂದು ಪ್ರಕ್ರಿಯೆ ಪ್ರಾರಂಭವಾಗಬೇಕಾಗುತ್ತದೆ. ಆದುದರಿಂದ ತಿದ್ದುಪಡಿ ಏನಿದೆ ಹಾಗೂ ಚುನಾವಣೆಗಳನ್ನು ಆದಷ್ಟು ಬೇಗ ಮಾಡಬೇಕೆಂದು ಇಲ್ಲಿ ನಾನು ಹೇಳಬಯಸುತ್ತೇನೆ. ತೊಂದರೆ ಆಗಿರಬಹುದು,ಆದರಲ್ಲಿ ಪಕ್ಷಪ್ರಭೇಧ ಆಗಿರಬಹುದು. ಮನೆಮನೆಗಳಲ್ಲಿ ಜಗಳ ಪಕ್ಷಾಂತರ ಆಗಿರಬಹುದು. ಅಧಿಕಾರಿ ಅಧಿಕಾರೇತರರ ನಡುವೆ,ಸಬಲರು ದುರ್ಬಲರ ನಡುವೆ ಕಚ್ಚಾಟ ಆಗಿರಬಹುದು. ಇದೆಲ್ಲಾ ಯಾವಾಗಲೂ ಒಂದು ಹೊಸ ವ್ಯವಸ್ಥೆ ಮಾಡಿದಾಗ

ಪ್ರಾರಂಭಿಕ ಸಮಸ್ಯೆಗಳು ಆಗಿರುತ್ತವೆ. ಅಂದ ಮೇಲೆ ವ್ಯವಸ್ಥೆಯನ್ನೇ ತೆಗೆದು ಜನರಿಗೆ ಅಧಿಕಾರ ಕೊಡುವ ಒಂದು ಕ್ರಮವನ್ನು ವಿರೋಧಿಸುವುದು ಸರಿಯಲ್ಲ. ತಮಗೆ ಆದ ಅನುಭವದ ಆಧಾರದ ಮೇಲೆ ಈ ಸಂಸ್ಥೆಗಳನ್ನು ಮುಂದೆ ಜನರೇ ಸಮರ್ಪಕವಾಗಿ ರೂಪಿಸುತ್ತಾರೆ. ಕೆಲವು ವರ್ಷ ಬೇಕಾಗುತ್ತದೆ. ಆದುದರಿಂದ ಆದಷ್ಟು ಬೇಗ ಚುನಾವಣೆ ಮಾಡುವ ವ್ಯವಸ್ಥೆಯನ್ನು ನಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಮಾತನಾಡುತ್ತಾ, ಸ್ವಚ್ಛ ಆಡಳಿತ ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಮತ್ತು ಪ್ರಾಮಾಣಿಕತೆಯನ್ನು ಮೂಡಿಸಲಿಕ್ಕೆ ಸರ್ಕಾರ ಕೈಗೊಂಡ ಕ್ರಮದ ಕುರಿತು ಮುಂದೆ ಹೇಳುತ್ತೇನೆಂದು ಹೇಳಿದ್ದೆ. ಯಾವ ರೀತಿ ಚುನಾಯಿತ ಸದಸ್ಯರು ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕೋ ಅದೇ ರೀತಿ ಅಧಿಕಾರಿಗಳು ಚುನಾಯಿತ ಸದಸ್ಯರ ಅರ್ಥಾತ್ ಜನಸಾಮಾನ್ಯರ ಪ್ರತಿನಿಧಿಗಳ ಭಾವನೆಯನ್ನು ಕೂಡ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಬರೀ ರೂಲನ್ನು ಇಂಟರ್‌ಪ್ರಿಟ್ ಮಾಡುವುದು ಅಧಿಕಾರಿಗಳ ಕೆಲಸ ಆಗಬಾರದು. ಆಡಳಿತದಲ್ಲಿ ದಕ್ಷತೆ, ಪ್ರಾಮಾಣಿಕತೆ, ಜನರ ಮನಸ್ಸನ್ನು ಸ್ಪಂದಿಸುವ ಹೊಸ ಆಡಳಿತಾತ್ಮಕ ಸಂಸ್ಕೃತಿ-ಇದೆಲ್ಲವನ್ನು ರಾಜ್ಯಪಾಲರು ಹೇಳಿದ್ದಾರೆ. ಇದನ್ನು ಇವತ್ತು ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ನಿಧಾನಗತಿಯನ್ನು ನಿರ್ಮೂಲನ ಮಾಡುವುದು, ಭ್ರಷ್ಟಾಚಾರ, ಅನೈತಿಕತೆ,ಆಮೆನಡಿಗೆ,ಕೆಂಪುಪಟ್ಟಿ-ಇವುಗಳಿಗೆ ಕಾಯಕಲ್ಪ ಚಿಕಿತ್ಸೆ ಕೊಡತಕ್ಕದ್ದು,ಸರ್ಜರಿ ಮಾಡುವುದು. ಮುಖ್ಯಮಂತ್ರಿಗಳು ಸರ್ಜರಿ ವಿಚಾರ ಆಗಾಗ ಹೇಳುತ್ತಾರೆ. ಈ ಸರ್ಜರಿ ಅಗತ್ಯ ಇದ್ದಲ್ಲಿ ಭರ್ಜರಿಯಾಗಿ ಆಗಬೇಕಾಗುತ್ತದೆ. ಆದುದರಿಂದ ಈ ಎಲ್ಲಾ ವ್ಯವಸ್ಥೆಗಳಲ್ಲಿ ನಾವು ಕಂಡುಕೊಂಡ ಪ್ರಕಾರ ಇತ್ತೀಚಿನ ಕಾಲದಲ್ಲಿ ಎಲ್ಲಾ ಲಾಬಿಗಳು ಮಳುಗಿಹೋಗಿವೆ. ಭ್ರಷ್ಟಾಚಾರಕ್ಕೆ ಎಡೆ ಇಲ್ಲದ ಒಂದು ಭರ್ಜರಿಯಾದ ವ್ಯವಸ್ಥೆ ಬಂದಿದೆ ಎಂದು ಜನರು ಹೇಳುತ್ತಿದ್ದಾರೆ. ಜನರ ನಂಬಿಕೆಗೆ ಪಾತ್ರವಾಗುವ ಒಂದು ಆಡಳಿತ ವ್ಯವಸ್ಥೆ ಬರಬೇಕು. ಯಾವುದೇ ವಿಳಂಬ ಆಗಬಾರದು.

ಶ್ರೀ ಆರ್. ವಿ. ದೇಶಪಾಂಡೆ:- ನೀವು ಹೇಳುತ್ತಿಲ್ಲ; ಜನರು ಹೇಳುತ್ತಿದ್ದಾರೆ. ನೀವು ಹೇಳುವುದಕ್ಕೆ ತಯಾರು ಇಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಆಚಾರ್ ಅವರೇ ತಾವು ಭಾಷಣ ಮಾಡುತ್ತಾ ಹೊಸ ಆಡಳಿತ, ಸಂಸ್ಕೃತಿ ತರಬೇಕೆಂದು ಹೇಳಿದಿರಿ. ಇಲ್ಲಿ ಭಿನ್ನವಾದ ಆಡಳಿತ ಸಂಸ್ಕೃತಿ ಎನ್ನುವ ಮಾತನ್ನು ಹೇಳಿದಿರಿ. ಹಾಗಾದರೆ ಕಳೆದ ೨-೩ ವರ್ಷದಿಂದ ಸರ್ಕಾರ ಏನಿತ್ತು,ಪಕ್ಷದ ಸರ್ಕಾರದ ನೀತಿ ಏನಿತ್ತು, ಆ ಸಂಸ್ಕೃತಿಗೆ ವಿಭಿನ್ನವಾದುದು ಏನಾದರೂ ತಾವು ಬಯಸುತ್ತೀರಾ? ಅಥವಾ ಅದೇ ಸಂಸ್ಕೃತಿ ಮುಂದುವರಿಸುವುದಾದರೆ ಇದು ಬೇರೆ ಪಕ್ಷದ ಸರ್ಕಾರವೇ?

ಶ್ರೀ ಜಿ.ಎಸ್. ಆಚಾರ್:- ನಾನು ಯಾವುದೇ ವ್ಯವಸ್ಥೆಯನ್ನು ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಏನಿದೆ ಅದನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ನಿಮ್ಮ ಟೀಕೆ ಏನು? ನಿಮ್ಮ ಅಭಿಪ್ರಾಯ ಏನು? ಏಕೆಂದರೆ ತಾವು ಪ್ರಸ್ತಾವನೆಯನ್ನು ಮಂಡಿಸಿದ್ದೀರಿ.

ಶ್ರೀ ಜಿ.ಎಸ್. ಆಚಾರ್:- ನಾನು ಜನರ ಪ್ರತಿನಿಧಿ, ಆದ್ದರಿಂದ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಜನ ಏನು ಹೇಳುತ್ತಾರೆ ಅದನ್ನು ನಾನು ಹೇಳಬೇಕು. ನನ್ನ ವೈಯಕ್ತಿಕ ವಿಚಾರ ಮುಖ್ಯವಲ್ಲ. ಎರಡನೆಯದು ನಮ್ಮದು ಪರಂಪರೆಯಿಂದ ಬಂದಂತಹ ಲಾಬಿಗಳು ಕೆಲವು ವ್ಯವಸ್ಥೆಗಳು ಇವೆ. ಇದು ಇಂದು ನಿನ್ನೆಯದಲ್ಲ ಎರಡು ಮೂರು ವರ್ಷಗಳು ಎಂದು

ನಾನು ಲಿಮಿಟ್ ಮಾಡುವುದಿಲ್ಲ. ಅದು ಕಡಿಮೆಯಾಗುತ್ತಿದೆ ಎನ್ನುವಂತಹ ಒಂದು ಒಳ್ಳೆಯ ಮಾತನ್ನು ಜನ ಹೇಳುವುದನ್ನು ನಾನು ಹೇಳುತ್ತಿದ್ದೇನೆ. ತಾವು ಪತ್ಯ ಮಾಡಿಕೊಳ್ಳದಿದ್ದರೆ ತಪ್ಪು ನನ್ನದಾಗುವುದಿಲ್ಲ. ಆದರೂ ಕೂಡ ಅನೇಕ ವಿಚಾರಗಳಲ್ಲಿ ನಿಧಾನಗತಿ ಹೋಗಬೇಕು. ನಾವು ಅನೇಕ ಕಡೆಗಳಲ್ಲಿ ನೋಡಿದ್ದೇವೆ. ನಾವು ಬರೆದ ಎಷ್ಟೋ ಪತ್ರಗಳು ದುರಾದೃಷ್ಟವಶಾತ್ ಮಿಸ್ಸಿಂಗ್ ಆಗುತ್ತವೆ. ಎರಡನೆಯ ಸಾರಿ ಮೂರನೆಯ ಸಾರಿ ಪತ್ರ ಕೊಡಬೇಕಾಗುತ್ತದೆ. ಹೀಗೆ ಶಾಸಕರಿಗೆ ಆಗುವುದಾದರೆ, ಬೇರೆ ಜನರಿಗೆ ಎಷ್ಟು ತೊಂದರೆ ಆಗಬಹುದು. ಆದ್ದರಿಂದ ಜನರ ಒಂದು ಭಾವನೆಗೆ ನಾವು ಮಾಡುವಂತಹ ಒಂದು ಕ್ರಿಯೆ ಅಥವಾ ಜನರ ಅವಶ್ಯಕತೆಗಳಿಗೆ ಯಾವುದೇ ಕೊಕ್ಕೆ ಹಾಕದೆ, ಕೊಕ್ಕೆ ಹಾಕುವುದು ಅಂದರೆ ನಿಮಗೆ ಅರ್ಥವಾಗುತ್ತದೆಂದು ನಾನು ಭಾವಿಸುತ್ತೇನೆ. ಯಾವುದಾದರೂ ಒಂದು ಮಂಜೂರಾತಿ ಆಗುವುದು ಇದ್ದರೆ ಸುಲಭವಾಗಿ ಆಗಬೇಕು. ಆಗುವುದು ಇದ್ದರೂ ಅದಕ್ಕೆ ಕೆಲವು ಹಂತದಲ್ಲಿ ಕೊಕ್ಕೆ ಹಾಕುವುದು, ಅದನ್ನು ತಡೆಯುವುದು ಹೇಗೆ, ಅಂತಹ ಸಂಸ್ಕೃತಿ ಇರುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಅದಕ್ಕೆ ವಿಶೇಷವಾದ ಕಾರಣಗಳು ಇರುತ್ತವೆ.

ಶ್ರೀ ಬಿ.ಎಸ್. ಆಚಾರ್:- ಅಂತಹ ಒಂದು ಸಂಸ್ಕೃತಿ ಇರುತ್ತದೆ. ಇದು ಸಂಪೂರ್ಣವಾಗಿ ಹೋಗಬೇಕು ಎನ್ನುವಂಥಹ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ನೂರು ದಿವಸಗಳ ಕಾರ್ಯಕ್ರಮ. ಮಾನ್ಯ ರಾಜ್ಯಪಾಲರು ನನ್ನ ಸರ್ಕಾರ ನೂರು ದಿವಸಗಳ ಕಾರ್ಯಕ್ರಮ ಅಂದರೆ ಡಿಸೆಂಬರ್ ೧೫ರಿಂದ ೧೫ನೇ ಏಪ್ರಿಲ್ ಮಾರ್ಚಿವರೆಗೆ ಅದೊಂದು ಒಳ್ಳೆಯ ಕಾರ್ಯಕ್ರಮ ಪ್ರಕಟವಾಗಿದೆ. ಪ್ರಗತಿಯತ್ತ ಮುನ್ನಡೆಯುವ ಒಂದು ರಾಜ್ಯದ ಅಭಿವೃದ್ಧಿಯನ್ನು ತೀವ್ರಗೊಳಿಸುವ ಕಾರ್ಯಸೂಚಿ ಅದರಲ್ಲಿದೆ. ಅಜೆಂಡಾ ಫಾರ್ ಆಕ್ಷನ್. ತಾವು ಅದನ್ನು ಸ್ವಾಗತ ಮಾಡಬೇಕು. ಒಳ್ಳೆಯ ಕಾರ್ಯಕ್ರಮವನ್ನು ಎಲ್ಲಿಯಾದರೂ ಹಾಕಲಿಕ್ಕೆ ಪ್ರಾರಂಭ ಮಾಡುತ್ತಾರೆಂದು ಹೇಳಿದರೆ ಅದು ಒಂದು ವಿಭಿನ್ನವಾದ ಆಡಳಿತ ಶೈಲಿಯೆಂದು ನಾನು ಆಗಲೇ ಹೇಳಿದ್ದೇನೆ. ಅದಕ್ಕಾಗಿ ನಾವು ಸಂತೋಷಪಡುತ್ತಿದ್ದೇವೆ. ಅದರಲ್ಲಿ ಮೂರು ವಿಚಾರಗಳನ್ನು ಹೇಳಿದ್ದಾರೆ. ಒಂದು ಅಧಿಕಾರಿಗಳು ಗುರಿಸಾಧನೆಗೆ ಹೊಣೆಗಾರಿಕೆಯಿಂದ ಶ್ರಮಿಸುವುದು. ಅಧಿಕಾರಿ ಸಾಧನೆ ಮತ್ತು ಜವಾಬ್ದಾರಿ, ಹೊಣೆಗಾರಿಕೆಯ ಜವಾಬ್ದಾರಿಗೆ ಒತ್ತು ಕೊಡುವಂತಹ ಕಾರ್ಯಕ್ರಮವನ್ನು ಇದರಲ್ಲಿ ಹಾಕಿರತಕ್ಕದ್ದು ಫಾರ್ ದಿ ಫಸ್ಟ್ ಟೈಮ್ ಆನ್ ಅಕೌಂಟಬಿಲಿಟಿ ಪ್ರಥಮವಾಗಿ ಈ ರಾಜ್ಯದಲ್ಲಿ ನಮ್ಮ ಕೆಲಸಗಾರರು ಅಥವಾ ಸಿಬ್ಬಂದಿಯವರು ದೇ ಆರ್ ಅಕೌಂಟಬಲ್ ಎಂದು ತೋರಿಸುವಂತಹ ಪ್ರಯತ್ನ ಮಾಡಿದ್ದಾರೆ. ಈ ಅಕೌಂಟಬಲಿಟಿ ಸಿಬ್ಬಂದಿಯವರಿಗೆ ಮಾತ್ರವಲ್ಲ, ನಮ್ಮ ಮಂತ್ರಿವರ್ಯರೂ ಕೂಡ ಇದನ್ನು ಹಾಕಿಕೊಂಡು ಕೆಲಸವನ್ನು ಮಾಡುವಂತಹ ಒಂದು ಪ್ರಕ್ರಿಯೆ ಪ್ರಾರಂಭವಾದರೆ ಅಮೋಘವಾದ ಸಾಧನೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ಕರ್ತವ್ಯದಲ್ಲಿ ಯಾವುದೇ ಕಡತ ಎರಡು ವಾರಕ್ಕಿಂತ ವಿಳಂಬವಾಗಬಾರದು. ಒಬ್ಬ ಅಧಿಕಾರಿ ಕೈಯಲ್ಲಿ ಅಂತ ಇದೆ, ಒಬ್ಬ ಅಧಿಕಾರಿ ಕೈಯಲ್ಲಿ ಅಲ್ಲಾ ಯಾರ ಹತ್ತಿರವಾದರೂ ಸರಿ ಎರಡು ವಾರ ಅಥವಾ ಮೂರು ವಾರ ಕಡೆಗೆ ಒಂದು ತಿಂಗಳಿನಲ್ಲಿ ಅದು ಪಡಚವಾಗಬೇಕು. ಅದು ಎಂತಹ ಕಷ್ಟದ ಕಡತವಾದರೂ ಕೂಡ ಅಷ್ಟು ಬೇಗ ಅದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆಯಾಗಬೇಕು. ಶಿಕ್ಷಕರಿಲ್ಲದ ಶಾಲೆಗಳು, ಡಾಕ್ಟರುಗಳು ಇಲ್ಲದ ಆಸ್ಪತ್ರೆಗಳು ಇರುವುದಿಲ್ಲ. ರಸ್ತೆ, ಕುಡಿಯುವ ನೀರು, ನಿವೇಶನ ಮತ್ತು ಗೃಹನಿರ್ಮಾಣಕ್ಕೆ ಆದ್ಯತೆ ಎನ್ನುವ ಉಲ್ಲೇಖ ನೂರು ದಿವಸಗಳ ಪ್ರೋಗ್ರಾಮ್‌ನಲ್ಲಿದೆ. ಅದು ಆದರೆ ಬಹಳ ಸಂತೋಷ, ಅದು ಆಗಲೇಬೇಕು. ಮಹಿಳೆಯರ ಹರಿಜನ-ಗಿರಿಜನ ಕ್ಷೇಮಾಭಿವೃದ್ಧಿ ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ, ಸಮಗ್ರ ಗ್ರಾಮೀಣಾಭಿವೃದ್ಧಿ ಜವಹರರೋಜ್‌ಗಾರ್ ಕಾರ್ಯಕ್ರಮದ ಮೂಲಕ ಬಡತನ ನಿರ್ಮೂಲನ ಗ್ರಾಮೀಣ ಜನರಿಗೆ ಉದ್ಯೋಗ ನೀಡಿದೆ. ಅದರ ಅನುಷ್ಠಾನಕ್ಕೆ ಮಾನಿಟರಿಂಗ್,ನೀರಾವರಿ, ಇಂಧನ, ಕೃಷಿ,

ಪಶುಸಂಗೋಪನೆ, ತೋಟಗಾರಿಕೆ, ಮೀನುಗಾರಿಕೆ, ಅರಣ್ಯ, ಗೃಹನಿರ್ಮಾಣ ಸಹಕಾರ, ಸಾರ್ವಜನಿಕ ಕಾಮಗಾರಿ, ಕೈಗಾರಿಕೆ, ಜಿಲ್ಲಾಪರಿಷತ್ತು, ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾಭಿವೃದ್ಧಿ, ಕಂದಾಯ, ಗ್ರಾಮೀಣಾಭಿವೃದ್ಧಿ, ಪ್ರವಾಸೋದ್ಯಮ ಹೀಗೆ ವಿವಿಧ ಇಲಾಖೆಗಳು ತಪಾಸಣೆ ಮಾಡುವಂಥದ್ದು, ಅನುಷ್ಠಾನ ಮಾಡುವಂಥದ್ದು, ವರದಿ ಪರಿಶೀಲನೆಗೆ ವಿಮರ್ಶೆಗೆ ಕಾರ್ಯಕ್ರಮವನ್ನು ಒಳಪಡಿಸಿ ಅಧಿಕಾರಿಗಳು ಒದಗಿಸಿದ ಮಾಹಿತಿ ಮೂಲಕ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿರುವಂತಹ ಒಂದು ಸೆಲ್ ಅಂತಿಮ ಪರಾಮರ್ಶೆ ನಡೆಸುವಂತಹದ್ದು. ಇಂತಹ ಒಂದು ಕಾರ್ಯಕ್ರಮವನ್ನು ನೂರುದಿನಗಳ ಪ್ರೋಗ್ರಾಮ್‌ನಲ್ಲಿ ಹಾಕಿಕೊಂಡಿದ್ದಾರೆ. ಈ ನೂರು ದಿನಗಳ ಪ್ರೋಗ್ರಾಮಿನ ಯಶಸ್ಸಿನ ಆಧಾರದಮೇಲೆ ಬಹುಶಃ ಈ ಸರ್ಕಾರವು ಮುಂದಿನ ಕಾರ್ಯಕ್ರಮ ರೂಪಿಸುತ್ತದೆ ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಕ್ಕಾಗಿ ನಾನು ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ನೂರು ದಿನಗಳ ಕಾರ್ಯಕ್ರಮ ಎನ್ನುವಾಗ ನಾನು ಇತ್ತೀಚೆಗೆ ಅಮೇರಿಕಾದ 'ಟೈಮ್' ಮ್ಯಾಗಜಿನ್‌ನಲ್ಲಿ ಓದಿದೆ. ನವೆಂಬರ್ ೧೬ರ ಟೈಮ್ ನ್ಯೂಸ್ ಮ್ಯಾಗಜಿನ್‌ನಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಶ್ರೀ ಬಿಲ್ ಕ್ಲಿಂಟನ್ ಅವರು ಆಯ್ಕೆಯಾದರು. ಅವರ ಆಯ್ಕೆಯ ನಂತರ ಅಲ್ಲಿಯೂ ನೂರು ದಿನಗಳ ಕಾರ್ಯಕ್ರಮ ಎಂದು ಹಾಕಿಕೊಂಡಿದ್ದಾರೆ. ನನಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳ, ಮಂತ್ರಿಮಂಡಲದ ಕಾರ್ಯಕ್ರಮವನ್ನು ಪರಸ್ಪರ ಹೋಲಿಸಬೇಕು ಅಂತ ಅನ್ನಿಸುತ್ತದೆ. ಒಳ್ಳೆಯ ಕೆಲಸಗಳು ಎಲ್ಲಿಯಾದರೂ ಸಹ ಅದನ್ನು ಮೆಚ್ಚತಕ್ಕಂಥಾದ್ದು ಅಥವಾ ಅದನ್ನು ವಿಮರ್ಶೆ ಮಾಡತಕ್ಕದ್ದು ಅತಿಅಗತ್ಯ ಎಂದು ನನಗೆ ಅನ್ನಿಸುತ್ತದೆ.

" the grid, luck and determination gave the Bill clinton the whitehouse". So also I would like to say sri Veerappa Moily the Vidhana Soudha. ಕ್ಲಿಂಟನ್ ಅವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಬಲ ಶಕ್ತಿಗಳ ಹಿಡಿತಕ್ಕೆ ಸಿಕ್ಕದ ಆರ್ಥಿಕ, ಆಡಳಿತ ವ್ಯವಸ್ಥೆಯ ನಿರ್ಮಾಣ. ಸ್ಪಷ್ಟ ಹಾಗೂ ಸಮರ್ಪಕ ವಿಚಾರಗಳಂಥ ಆದ್ಯತೆ. ಸ್ವಾವಲಂಬನೆಗೆ ನೆರವು, ಪ್ರಾಮಾಣಿಕ ಧೈರ್ಯಶಾಲಿ, ಸುದೀರ್ಘ ಪ್ರಯತ್ನದ ಭರವಸೆ,ಇವುಗಳಿಗೆ ಒತ್ತು ಕೊಟ್ಟು ಅಧ್ಯಕ್ಷರಾದ ಬಳಿಕ ರಾಷ್ಟ್ರದ ಆರ್ಥಿಕ ಪುನರೋತ್ಥಾನಕ್ಕೆ ಸಾರ್ವಜನಿಕರಲ್ಲಿ ನಂಬಿಕೆ ತರಿಸಲು ಬದಲಾವಣೆಯ ಚಿತ್ರ ಮೂಡಿಸಲು, ನೂರುದಿನಗಳ ಸವ... ಪ್ರಯತ್ನ ಮಾಡುವಂಥ ಯೋಜನೆಯನ್ನು ಹಾಕಿದ್ದಾರೆ. ಆ ಯೋಜನೆಯ ಹಿಂದೆ ಅಮೇರಿಕಾದ ಹಿಂದಿನ ಅಧ್ಯಕ್ಷರಾದ ಕೆನಡಿಯವರು ಹೇಳಿದಂಥ ಒಂದು ಮಾರ್ಗದರ್ಶಿ ಸೂತ್ರ ಇದೆ. ಹಿಂದಿನ ಅಧ್ಯಕ್ಷರು ಹೇಳಿದ್ದರು.

The president has to set his priorities, determine strength of the Government and make appointment. If you appoint the people first, then start making decisins in your name without priority. The appointment should be delayed till the priorities are set and until you have the Government structure firmly in mind.

ಈ ಎಚ್ಚರದಿಂದಾಗಿಯೇ ಬಹುಶಃ ನಮ್ಮ ಸರ್ಕಾರ ಸಾಕಷ್ಟು ಸಮಯವನ್ನು ತೆಗೆದುಕೊಂಡು ತನ್ನ ಮಂತ್ರಿಮಂಡಲವನ್ನು ರಚಿಸಿದ್ದುದು. ಮಂತ್ರಿಮಂಡಲದಲ್ಲಿ ೪೧ ಜನರಿದ್ದಾರೆ ಎಂದು ಆಗಾಗ ಹೇಳುತ್ತಲೇ ಇರುತ್ತಾರೆ. **This is the blend of experience and youth.**

ಶ್ರೀ ಸಿ. ಬೈರೇಗೌಡ:- ನಾವು ಇನ್ನೂ ಹೇಳಿಯೇ ಇಲ್ಲ. ಇವರಿಗೇ ಅನುಮಾನ ಈಗ. ಈ ಮಂತ್ರಿಮಂಡಲ ೧೨ ಆನೆ ಗಾತ್ರದ ಮಂತ್ರಿಮಂಡಲ. ಇದರಲ್ಲಿ ಯಾರ್ಯಾರು ಇದ್ದಾರೆ

ಎಂದರೆ ಸಕ್ಕರೆಗೆ ಒಬ್ಬರು, ಜವಳಿಗೆ ಒಬ್ಬರು, ಉಪ್ಪಿಗೆ ಒಬ್ಬರು, ಮೆಣಸಿನಕಾಯಿಗೆ ಒಬ್ಬರು, ಈರುಳ್ಳಿಗೆ ಒಬ್ಬರು, ಬೆಳ್ಳುಳ್ಳಿಗೆ ಒಬ್ಬರು........

ಶ್ರೀ ಬಿ.ಎಸ್. ಬನ್ನಿಕೋಡ್:- ಅದನ್ನು ಇನ್ನೂ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ:- ಅದನ್ನು ಸಲಹೆ ಮಾಡುವುದಕ್ಕೆ ಶ್ರೀ ಆಚಾರ್ ಅವರು ಹೊರಟಿದ್ದಾರೆ. ಈರುಳ್ಳಿಗೆ ಒಬ್ಬರು,ಬಟ್ಟೆಗೆ ಒಬ್ಬರು, ಸಕ್ಕರೆಗೆ ಒಬ್ಬರು, ಬೆಳ್ಳುಳ್ಳಿಗೆ ಒಬ್ಬರು........

ಶ್ರೀ ಎಚ್. ಏಕಾಂತಯ್ಯ:- ಅವರಿಗೆ ಚಾಲೆಂಜ್ ಮಾಡಿರಿ. ೪೧ ಜನರ ಖಾತೆಗಳ ಹೆಸರುಗಳನ್ನು ಹೇಳುತ್ತಾರೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಬೈರೇಗೌಡರಿಗೆ ಅವಕಾಶ ಇಲ್ಲವೆಂದು ಕಾಣುತ್ತದೆ. ಈಗಲೇ ಹೇಳಿ ಮುಗಿಸುತ್ತೀರಾ? ಅವರೂ ಮಾತನಾಡುವವರಿದ್ದಾರೆ. ಮಾತನಾಡುವ ಕಾಲಕ್ಕೆ ಹೇಳಲಿ.

ಶ್ರೀ ಸಿ. ಬೈರೇಗೌಡ:- ಶ್ರೀ ಮಲ್ಲಾರಗೌಡ ಪಾಟೀಲ ಅವರಿಗೆ ಧನ್ಯವಾದಗಳು. ನನಗೆ ಸ್ವಲ್ಪ ಜ್ಞಾಪಿಸಿ ಕೊಟ್ಟರು.

ಚೇರ್ಮನ್:- ಆಚಾರ್‌ರವರೇ ಇನ್ನು ಎಷ್ಟು ಟೈಮ್ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಎಸ್. ಆಚಾರ್:- ಇನ್ನು ಅರ್ಧಗಂಟೆ ಬೇಕಾಗುತ್ತದೆ ಅನ್ನಿಸುತ್ತದೆ.

ಚೇರ್ಮನ್:- ಹಾಗಾದರೆ ಆರು ಗಂಟೆಗೆ ಮುಗಿಸೋಣ.

ಶ್ರೀ ಬಿ.ಎಚ್. ಬನ್ನಿಕೋಡ್:- ಶ್ರೀ ಆಚಾರ್ ಅವರ ಮನಸ್ಸಿಗೆ ಖಾತ್ರಿಯಾಗಿದೆ,ಇದು ಎಷ್ಟು ಹೇಳಿದರೂ ಅಷ್ಟೇ ಎಂದು. ಆದಕ್ಕೇ ಅವರು ಬೇಗ ಮುಕ್ತಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

೫.೫೫ ಪಿ.ಎಂ.

ಶ್ರೀ ವಾಟಾಳ್ ನಾಗರಾಜ್:- ಆಚಾರ್‌ರವರು ಭಾಷಣ ಮಾಡುತ್ತಾ ಇದ್ದರೆ,ಒಳ್ಳೆಯ ಜೋಗುಳ ಹಾಡಿದಹಾಗೆ ಇದೆ, ಒಂದು ರೀತಿ ನಿದ್ರೆ ಬರತಕ್ಕಂಥ, ಮತ್ ಬರತಕ್ಕಂಥ ಪರಿಸ್ಥಿತಿ ಇದೆ.

ವೈಸ್ ಚೇರ್ಮನ್:- ಸರಿ, ಚೆನ್ನಾಗಿ ಹೇಳುತ್ತಿದ್ದಾರೆ.

ಶ್ರೀ ಜಿ.ಎಸ್. ಆಚಾರ್:- ಅದು ಹೇಗೆ ನಿದ್ರೆ ಬರುತ್ತದೆಯೋ ನನಗೆ ಗೊತ್ತಾಗುವುದಿಲ್ಲ. ಈ ಸದನದಲ್ಲಿ ನಾನು ಪದೇಪದೇ ಭಾಷಣ ಮಾಡುವವನಲ್ಲ. ಎಲ್ಲಿಯಾದರೂ ಅವಕಾಶ ಸಿಕ್ಕಿದಾಗ ಮಾತ್ರ ಮಾಡುತ್ತೇನೆ. ಕೆಲವುಸಲ, ಕೆಲವರು ಪದೇಪದೇ ಭಾಷಣ ಮಾಡುತ್ತಾರೆ. ಅನೇಕ ಜನ ನಿದ್ರೆ ಮಾಡುತ್ತಾ ಇರುತ್ತಾರೆ. ಅದು ಒಂದೊಂದು ಸಂದರ್ಭ. ನನ್ನ ಮಿತ್ರರು ಮಂತ್ರಿಗಳ ಸಂಖ್ಯೆ ಬಗ್ಗೆ ಆಕ್ಷೇಪ ಮಾಡಲಿಲ್ಲ. ಖಾತೆಗಳ ಹಂಚಿಕೆ ಸರಿಯಾಗಿ ಆಗಿಲ್ಲವೆಂದು ಹೇಳುತ್ತಿದ್ದಾರೆ. ಅನುಭವದ ಆಧಾರದ ಮೇಲೆ,ನಾನು ಈಗಾಗಲೇ ಹೇಳಿದ್ದೇನೆ. ಅನುಭವಗಳು ಮತ್ತು blend of experience and youth ಅನುಭವದ ಆಧಾರದ ಮೇಲೆ ಮತ್ತು ಉಳಿದವರಿಗೆ ತಾವು ಹೇಳಿದಿರಿ. ನಾನು ಇಲ್ಲಿ ಆ ಶಬ್ದಗಳನ್ನು ಉಪಯೋಗಿಸುವುದಿಲ್ಲ. ಒಂದು ಇದ್ದರೆ,೨-೩ ಕೊಡಬೇಕಾಗುತ್ತದೆ, ಅನುಭವ ಪಡೆದುಕೊಂಡು ಮಾಡುತ್ತಾರೆ. ಹಿಂದೆಯೂ ಕೂಡ ಇದೇರೀತಿ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ:- ಕಡತವನ್ನು ಯಾರೂ ತಿರುಚುವುದಕ್ಕಾಗುವುದಿಲ್ಲ. ಹಿಂದೆಯೂ ಮಾಡಿದ್ದಾರೆಂದು ಹೇಳಿದರೆ, ಯಾವತ್ತಾದರೂ ಸಕ್ಕರೆಗೆ ಒಬ್ಬರು ಮಂತ್ರಿಗಳು ಇದ್ದರೆ? ಸಕ್ಕರೆ ಇಲಾಖೆಗೆ ಮಂತ್ರಿಗಳು ಯಾವತ್ತಾದರೂ ಇದ್ದರೇ?

ವೈಸ್ ಚೇರ್ಮನ್:- ಆಗ ಸಕ್ಕರೆ ತಿನ್ನುವವರು ಕಡಿಮೆ ಇದ್ದರು. ಈಗ ಸ್ವಲ್ಪ ಜಾಸ್ತಿಯಾಗಿದ್ದಾರೆ.

ಶ್ರೀ ಸಿ. ಬೈರೇಗೌಡ:- ತಪ್ಪುತಪ್ಪಾಗಿ ಕಡತಕ್ಕೆ ಹೋಗುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ:- ಸಕ್ಕರೆ ತಿನ್ನುವವರು ಹಿಂದೆ ಕಡಿಮೆ ಇದ್ದರು ಎಂದು ಹೇಳುತ್ತೀರಿ. ಈಗ ಬದನೆಕಾಯಿ ತಿನ್ನುವವರು ಜಾಸ್ತಿ ಇದ್ದಾರೆ,ಅದಕ್ಕೂ ಒಬ್ಬರು ಮಂತ್ರಿಗಳನ್ನು ಮಾಡಿ.

ವೈಸ್ ಚೇರ್ಮನ್:- ನೀವು ಭಾಷಣ ಮಾಡುವಾಗ ಹೇಳಿ.

ಶ್ರೀ ಜಿ.ಎಸ್. ಆಚಾರ್:- ಬಹಳ ತ್ವರೆಗತಿಯಿಂದ ಕೆಲಸ ಆಗುತ್ತಿರುವುದು, ಆಮೆ ನಡಿಗೆ, ನಿಧಾನಗತಿ ಹೋಗಿರುವುದು. ಇದು ಕೆಲವರಿಗೆ ನೋಡುವುದಕ್ಕಾಗುವುದಿಲ್ಲವೇನೋ ಎಂದು ನನಗನ್ನಿಸುತ್ತದೆ. ಒಟ್ಟಿನಲ್ಲಿ ನಾನು ಕಂಡುಕೊಂಡದ್ದು ಹೀಗೆ:- ನಿಧಾನಗತಿ ಇಲ್ಲ ವಿಧಾನಸೌಧದಲ್ಲಿ

ಎಲ್ಲೆಡೆಯು ಕಾಣುತ್ತಿದೆ ಸಾಧನೆಯ ಸೊಲ್ಲು,
ಹೊಣೆಹೊತ್ತ ಅಧಿಕಾರಿ ಗಡಣ ಈ ಹೊತ್ತು
ನವಸ್ಫೂರ್ತಿ ನೀಡಲಿದೆ ಮಂತ್ರಿ ನಲವತ್ತು,
ಬಹುಬೇಗ ಸಿಗಬೇಕು ಜನಕ್ಕೆ ಸವಲತ್ತು,
ಎಂದೆಂದೂ ಬಾರದಿರಲಿ ಕುತ್ತು, ಆಪತ್ತು.

ಶ್ರೀ ವಾಟಾಳ್ ನಾಗರಾಜ್:- ಸಚಿವ ಪದವಿ ಸಿಗದೇ ಸೊರಗಿತಿಹರು ಬಹಳ ಜನ.

ಶ್ರೀ ಸಿ. ಬೈರೇಗೌಡ:- ಅದರಲ್ಲಿ ಆಚಾರ್‌ರವರೂ ಒಂದನೆಯವರು.

ಶ್ರೀ ಜಿ.ಎಸ್. ಆಚಾರ್:- ಆದ್ದರಿಂದ, ಜೊತೆಯಾಗಿ ನಡೆಯೋಣ. ಮಾನ್ಯಮುಖ್ಯ ಮಂತ್ರಿಗಳು ಜೊತೆಯಾಗಿ ನಡೆಯೋಣ ಎಂದು ಹೇಳುತ್ತಾರೆ. ಜೊತೆಯಾಗಿ ನಡೆಯೋಣ ನಾವೆಲ್ಲರೂ ಇವತ್ತು, ಹೊಸ ಭರವಸೆಯ ಹೊತ್ತು ನಾವು, ನೀವ್ಲ್ಲ. ಇಷ್ಟು ವಿಚಾರಗಳನ್ನು ತಮ್ಮ ಮುಂದೆ ಇಟ್ಟು...

ಶ್ರೀ ಕೆ.ಎಸ್. ಈಶ್ವರಪ್ಪ:- ಈ ಸರ್ಕಾರಕ್ಕೆ ಕಾದಿದೆ ಶೀಘ್ರವೇ ಆಪತ್ತು..

ಶ್ರೀ ಜಿ.ಎಸ್. ಆಚಾರ್:- ಆಪತ್ತು ಯಾರಿಂದ ಬರುತ್ತದೆ ಎನ್ನುವುದನ್ನು ಕುರಿತು ಹೇಳಿದ್ದಾರೆ ಅದನ್ನು ಮುಂದೆ ಹೇಳುವುದಿದೆ. ಮುಂದಿನ ಆಯವ್ಯಯ ಪಟ್ಟಿ ನಮ್ಮ ಮುಂದೆ ಸದ್ಯದಲ್ಲೇ ಬರುತ್ತಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಇಷ್ಟೆಲ್ಲಾ ಹೊಗಳಿದಿರಿ ಬಹುಶಃ ನಿಮ್ಮ ಗಮನಕ್ಕೂ ಬಂದಿರಬಹುದು. ನಮ್ಮ ಜಿಲ್ಲೆಯಲ್ಲಿ, ಟ್ರಜರಿಯಲ್ಲಿ ಚೆಕ್ ಕೂಡ ಪಾಸ್ ಆಗುತ್ತಾ ಇಲ್ಲ. ಕಾಮಗಾರಿ ಕೆಲಸಗಳು ನಡೆಯುತ್ತಿವೆ, ಈ ಸಂದರ್ಭದಲ್ಲಿ ಕಂಟ್ರಾಕ್ಟರುಗಳಿಗೆ ಟ್ರಜರಿಯಲ್ಲಿ ಚೆಕ್ ಕೂಡ ಪಾಸ್ ಆಗುತ್ತಾ ಇಲ್ಲ. ಈ ರೀತಿಯಲ್ಲಿ ಸದ್ಯದ ಆರ್ಡರ್ ಇದೆ. ತಾವು ಕೂಡ ಇದೇ ಜಿಲ್ಲೆಯವರು, ಇದಕ್ಕೆ ಏನು ಹೇಳುತ್ತೀರಿ.

ಶ್ರೀ ಜಿ.ಎಸ್. ಆಚಾರ್:- ಅಂಥದ್ದು ಇದ್ದರೆ, ಅದು ಆಗಬಾರದ . ಅದು ಸರಿಯಾಗಿ ಆಗಬೇಕೆಂದು ಖಂಡಿತವಾಗಿಯೂ ಹೇಳುತ್ತೇನೆ. ಮುಂದಿನ ವರ್ಷದ ಆಯವ್ಯಯ ಪಟ್ಟಿ ಸಧ್ಯದಲ್ಲೇ ನಮ್ಮ ಮುಂದೆ ಬರುತ್ತಿದೆ. ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುತ್ತೇವೆ. ಒಂದು ದೃಷ್ಟಿಯಲ್ಲಿ constitutional obligation ಮೇಲೆ ಈಗ ೪ ದಿವಸಗಳಿಂದ ನಾನು ಕಾಯುತ್ತಾ ಇದ್ದೆ. ಇದಕ್ಕೆ ವಂದನೆಯನ್ನು ಕೊಡಬೇಕೆಂದು ನನಗೆ ಸೂಚನೆಯನ್ನು ಕೊಟ್ಟರು. ವಂದನೆಯನ್ನು ಕೊಡುವ ಅವಕಾಶ ಬಂದಿದೆ. ಜೀವಮಾನದಲ್ಲಿ ನನ್ನದೊಂದು ಭಾಗ್ಯ ಎಂದು ಹೇಳಿ, ಸಾಧ್ಯವಾದ ಮಟ್ಟಿಗೆ, ಸ್ವಲ್ಪಮಟ್ಟಿಗೆ ತಯಾರು ಮಾಡಿಕೊಂಡೇ ಬಂದು ಹೇಳಿದ್ದೇನೆ. ಯಾರು ಏನೇ ಹೇಳಲಿ.

ಶ್ರೀ ವಾಟಾಳ್ ನಾಗರಾಜ್:- ಸಚಿವ ಸಂಪುಟದಲ್ಲಿ ಅವರಿಗೆ ಸ್ಥಾನ ಸಿಗಲಿಲ್ಲವೆಂದು ನಮಗೆಲ್ಲರಿಗೂ ಕೊರಗು ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕರಿಗೆ ಕೊಟ್ಟರು, ಆಚಾರ್‌ರವರಿಗೆ ಸಿಗಲಿಲ್ಲವೆಂದು ನಮಗೆ ಕೊರಗು ಆಗಿದೆ. ಈಗ ಸಿಕ್ಕಿದರೂ ಚಿಂತೆ ಇಲ್ಲ, ಸಂಖ್ಯೆ ಜಾಸ್ತಿಯಾದರೂ ಸಹ ಮನ್ನಿಸುತ್ತೇವೆ. ಈಗ ಕೊಟ್ಟರೂ ಸಂತೋಷ.

ಶ್ರೀ ಜಿ.ಎಸ್. ಆಚಾರ್:- ಏನು ಸಾರ್? ಕೇಳಿಸಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಮಾನ್ಯ ಆಚಾರ್‌ರವರ ಬಗ್ಗೆ ನಮಗೆ ಅಪಾರವಾದಂತಹ ಗೌರವ ಇದೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಅನೇಕರು ಮಂತ್ರಿಗಳಾದರು. ಅವರಿಗೆ ಮಂತ್ರಿ ಪದವಿ ದೊಕುವುದಾದರೆ ವಿರೋಧಪಕ್ಷದ ಕಡೆಯಿಂದ ನಿಜವಾಗಲೂ ನಾವು ಸ್ವಾಗತಿಸುತ್ತೇವೆ. ಬಹಳ ಸಂತೋಷ ಪಡುತ್ತೇವೆ. ಅವರು ಕೊಡುವುದಾದರೆ ಈಗಲೂ ಸಂತೋಷಪಡುತ್ತೇವೆ.

ಶ್ರೀ ಎ. ರುಕ್ಮಯ ಪೂಜಾರಿ:- ಮಾನ್ಯ ವಾಟಾಳ್‌ರೇ ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಅಂದರೆ ಅಧಿಕಾರಿಗಳು ಕೆಲಸ ಮಾಡಲಿಕ್ಕೆ ಪುರಸೊತ್ತು ಇಲ್ಲ. ಪ್ರತಿನಿತ್ಯೆ ಮಂತ್ರಿಗಳು ಪ್ರವಾಸ ಅಲ್ಲಿ. ಪ್ರವಾಸದಿಂದಾಗಿ ಅಧಿಕಾರಗಳು ಕೆಲಸ ಮಾಡುತ್ತಿಲ್ಲ. ಬಹುಶಃ ಪುನಃ ಆಚಾರ್‌ರವರಿಗೆ ಮಂತ್ರಿ ಕೊಟ್ಟರೆ ನಮ್ಮ ಜಿಲ್ಲೆಯಲ್ಲಿ ಯಾರೂ ಕೂಡ ಆಫೀಸನಲ್ಲಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದು ದಾಯಾದಿ ಮತ್ಸರ. ಇದು ಜಿಲ್ಲಾ ಶಾಸಕರ ದಾಯಾದಿ ಮತ್ಸರ. ಇದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:- ಅಧಿಕಾರಿಗಳು ಹೆಲ್ಗೋ ನಿಬಾಯಿಸುತ್ತಾರೆ. ಪೂಜಾರಿಯವರೇ ನೀವು ಅಡ್ಡಗಾಲು ಹಾಕುವುದಕ್ಕೆ ಹೋಗಬೇಡಿ.

ಶ್ರೀ ಜಿ.ಎಸ್. ಆಚಾರ್:- ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಿರುವ ಸಂದರ್ಭದಲ್ಲಿ ಇದು ವಿಷಯ ಮೀರಿ ಹೋಗುವುದಕ್ಕೆ ನನಗೆ ಇಚ್ಛೆಇಲ್ಲ. ಮಂತ್ರಿಯಾಗುವುದೊಂದೆ ದೊಡ್ಡದಲ್ಲ. ಜೀವನದಲ್ಲಿ ಮಂತ್ರಿಯಾಗುವುದೇ ದೊಡ್ಡ ಧ್ಯೇಯ ದೊಡ್ಡ ಸಾಧನೆ ಎಂದು ನಾನು ತಿಳಿದುಕೊಂಡಿಲ್ಲ. ತಾವು ಹೇಳಿದವರಿಗೆ ಧನ್ಯವಾದಗಳು. ನಾನು ಶಾಸಕನಾಗಿ ಮಾಡುವ ಕೆಲಸಗಳು ಕೆಲವು ಬಾಕಿ ಉಳಿದಿವೆ. ರುಕ್ಮಯ ಪೂಜಾರಿಯವರು ಹೇಳಿದಂತೆ ಅಧಿಕಾರಿಗಳಿಗೆ ತೊಂದರೆ ಕೊಡುವುದಕ್ಕೆ ನಾನು ಬಯಸುವುದೇ ಇಲ್ಲ. ತಾವೇನು ಆಸೆಯನ್ನು ವ್ಯಕ್ತಪಡಿಸಿದಿರಿ, ನನ್ನ ಬಗ್ಗೆ ಏನು ಭಾವನೆಯನ್ನು ವ್ಯಕ್ತಪಡಿಸಿದಿರಿ, ನನ್ನನ್ನು ಆ ಮಟ್ಟಕ್ಕೆ ಗುರುತಿಸುವ ಮಟ್ಟಕ್ಕೆ ಹೋದನಲ್ಲ ಅಷ್ಟಕ್ಕೆ ನಾನು ಸಂತೋಷ ಪಡುತ್ತೇನೆ ಸಾರ್. ಅದಕ್ಕೆ ನನ್ನ ಧನ್ಯವಾದ. ಮುಂದಿನ ವರ್ಷದ ಆಯುವ್ಯಯ ನಮ್ಮ ಮುಂದೆ ಬರುತ್ತದೆ. ಒಂದೂವರೆ ತಿಂಗಳ ಹಿಂದೆ ರಾಜ್ಯದ ೧೯೯೨-೯೩ರ ಪರಿಷ್ಕೃತ ಬಜೆಟ್‌ನ ರೂಪುರೇಶೆಗಳ ಪರಿಶೀಲನೆ ಮಾಡಿದ್ದೇವೆ. "A picture of Karnataka Budget for the year

1992-93." ಇದರ ಪ್ರಕಾರ ಕೃಷಿ ಕೈಗಾರಿಕೆ ಸಾಮಾನ್ಯ ಆರ್ಥಿಕ ಸೇವೆಗಳು ಗ್ರಾಮೀಣ ಅಭಿವೃದ್ಧಿ, ವಿಶೇಷ ಪರಿಸರ ಅಭಿವೃದ್ಧಿ, ನೀರಾವರಿ, ಪ್ರವಾಹ ನಿಯಂತ್ರಣ, ವಿಜ್ಞಾನ ತಂತ್ರಜ್ಞಾನ ಇತ್ಯಾದಿಗಳಿಗೆ ಯೋಜನೆ ಮತ್ತು ಯೋಜನೇತರ ವೆಚ್ಚವಾಗಿ ೧೭೯೮ ಕೋಟಿ ರೂಪಾಯಿಗಳು ಹಾಗೂ ವಿಶೇಷ ಸಾಮಾಜಿಕ ಸೇವೆಗಳಿಗೆ ೧೭೬೦ ರೋಟಿ ರೂಪಾಯಿಗಳು ಒಟ್ಟಿಗೆ ೩೯೧೭ ಕೋಟಿ ರೂಪಾಯಿಗಳು. ಒಟ್ಟಿಗೆ ೫೭೬೭ ಕೋಟಿ ರೂಪಾಯಿಗಳಲ್ಲಿ ಅಭಿವೃದ್ಧಿ ಸೇವೆಗಳಿಗೆ ೭೮ ಪರ್ಸೆಂಟ್, ಸಾಮಾನ್ಯ ಸೇವೆಗಳಿಗೆ ೩೧ ಚಿಲ್ಲರೆ ಪರ್ಸೆಂಟ್ ಹೀಗೆ ಹಾಕಿಕೊಂಡು ನಮ್ಮ ಯೋಜನೆ ರೂಪಿತವಾಗಿತ್ತು. ಮುಂದಿನ ವರ್ಷದ ಆಯುವ್ಯಯ ಪಟ್ಟಿ ಹೇಗೆ ಇರುತ್ತದೆ ಎನ್ನುವ ಕುತೂಹಲ ಸಹಜವಾಗಿ ನಮಗೆ ಇರುತ್ತದೆ. ಆ ಕುತೂಹಲದ ಒಂದು ಸಂದರ್ಭದಲ್ಲಿ ಆರ್ಥಿಕ ಸ್ವಾವಲಂಬನೆಯ ಪ್ರಗತಿಶೀಲ ಮಾರ್ಗವನ್ನು ನಾವು ಅನುಸರಿಸುತ್ತೇವೆ. ಅಭಿವೃದ್ಧಿ ದ್ಯೋತಕವಾಗಿ ಕರಬಾರ ವಿಪರೀತ ಅನಿಸುವುದೇ, ಏರಿದ ಬಸ್ ದರ ಇದಕ್ಕೆ ನಾಂದಿ ಎಂಬಂತೆ ಆಗುವುದೇ? ಅನಾವಶ್ಯಕ ಆಡಳಿತ ವೆಚ್ಚ ಕಡಿಮೆ ಆಗುವುದೇ? ಅಲ್ಪಕಾಲದ ಸಾಮಾಜಿಕ ನೆರವಿನ ಕಾರ್ಯಕ್ರಮಗಳ ಬದಲು ದೀರ್ಘಾವಧಿ ಪ್ರಗತಿಯ ಯೋಜನೆ ರೂಪಿತವಾಗುವುದೇ ಎನ್ನುವಂತಹ ಕಳಕಳಿಯನ್ನು ನಾವೆಲ್ಲರೂ ಹೊತ್ತಿದ್ದೇವೆ. ನಾನು ಈಗಾಗಲೇ ಹೇಳಿದಂತೆ ನಮ್ಮ ಸರ್ಕಾರ ಒಂದು ಬದಲಾವಣೆಯನ್ನು ತರಬೇಕು. ಎನ್ನುವಂತಹ ಒಂದು ಹಂತದಲ್ಲಿ ಇದೆ. ಇದರಲ್ಲಿ ನಮ್ಮ ಸರ್ಕಾರದ ಮುಖ್ಯಸ್ಥರಾಗಿ our chief Minister is an instrument of charge ಈಗಾಗಲೇ ನಾನು ಬಿಲ್ ಕ್ಲಿಂಟನ್‌ರವರ ವಿಚಾರ ಎತ್ತಿದ್ದೇನೆ. Our Chief Minister is an instrument of change like Bill Clinton since he is a catalyst like Bill Clinton.

ಈ ಸ್ಫೂರ್ತಿ ಆಧಾರದ ಮೇಲೆ ನಮ್ಮ ರಾಜ್ಯದ ಹೊಸ ಬಜೆಟ್ ಬರುತ್ತದೆ. ಬದಲಾವಣೆಗೆ ಪೂರಕವಾಗುವ ಬದಲು ಬದಲಾವಣೆಯ ಹರಿಕಾರರಾಗಲು ನಮ್ಮ ಮುಖ್ಯಮಂತ್ರಿಗಳು ಬಯಸುತ್ತಾರೆ ಎಂಬುದನ್ನು ಕಂಡುಕೊಂಡಿದ್ದೇವೆ. ಎಲ್ಲಾ ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಇಷ್ಟೊಂದು ಒಳ್ಳೆಯ ಸಮಾಚಾರಗಳು ಇರುವಾಗ ಮುಂದಿನ ವರ್ಷದ ಬಜೆಟ್ ಯಾರಿಗೂ ತಿಳಿದಿದ್ದು ಅಲ್ಲ. ಕೇಳಿದ್ದು ಮತ್ತು ಕೇಳದೆ ಇದ್ದುದ್ದು, ಕೇಳಿದೆ ಇಷ್ಟೊಂದು ಸ್ವಾರಸ್ಯಕರವಾಗಿ ಇರಬೇಕಾದರೆ ಕೇಳದೆ ಇದ್ದುದ್ದು ಇನ್ನೂ ಸ್ವಾರಸ್ಯಕರವಾಗಿರುತ್ತದೆ. ಶೃತಗಾನ ಅಭಿರಾಮಮ್, ಅಶೃತಗಾನ ಅಭಿರಾಮತರಂ ಅನ್ನುತ್ತಾರೆ. Heard melodies are sweet; those unheard are sweeter. ಆದರಿಂದ ಮುಂದೆ ಬರುವಂಥ ಬಜೆಟ್ ಇನ್ನೂ ಸ್ವೀಟ್ ಬಜೆಟ್ ಆಗಿರಲೆಂದು ಒಂದು ಆಶಯವನ್ನು ವ್ಯಕ್ತಪಡಿಸಿ ತಿರುಗಿ ನಾನು ಆಗಲೇ ಹೇಳಿದೆನಲ್ಲಾ ವಿಭಿನ್ನ ಆಡಳಿತ ಶೈಲಿ ಅನ್ನುವಂಥಾದ್ದು, ಆ ವಿಭಿನ್ನ ಆಡಳಿತ ಶೈಲಿ ತಂದಿರುವ ವೀರಪ್ಪಮೊಯಿಲಿ, ಸಾಗಲಿದೆ ಸರಾಗ ಮೈಲಿ ಮೈಲಿ, ಅದಕ್ಕಾಗಿ ನಮ್ಮೆಲ್ಲರ ಹಾರೈಕೆ ತರಲಿ, ಜನಪದದ ಶೈಲಿ ಎನ್ನುವಂಥ ಮಾತನ್ನು ಹೇಳುತ್ತಾ ಮೊಯಿಲಿಯವರೇ, ಒಂದು ಅನೇಕ ವರ್ಷಗಳ ಹಿಂದೆ ನೋಡದಿರು ಹಿಂದೆ ಅಂಥ ಹೇಳಿದ್ದಾರೆ. ಅದರಲ್ಲಿ ಜಗ್ಗಿದವ ನೀನಲ್ಲ. ನಿನ್ನ ಹೆತ್ತವರಲ್ಲ. ಕುಗ್ಗಿದವ ನೀನಲ್ಲ. ತೆರೆಯ ಹರಿದವ ನೀನು. ಅಧಿಕಾರವು ಸಂಪದವು ಮಾಯಾಮಿ, ಸ್ವರ್ಣ ಮೃಗ ಒದೆದು ಸಾಗೆಲೆ ಧೀರ ನೋಡದಲೆ ಹಿಂದೆ, ಕಾದಿರುವಳು ಆ ಮಾತೆ, ತಂದಿರುವ ಸಂಜಾತೆ. ಬಂಧನದಿ ಬಹು ಕಾಲ ಸೊರಗಿರುವ ಸಂಪೂತೆ. ನೀನೇ ಭರವಸೆಯೆಂದು ಹಂಬಲಿಸಿ ಕರೆಯುವಳು, ತವಕದಲಿ ನಡೆ ಮುಂದೆ ನೋಡದಿರು ಹಿಂದೆ. ಹೀಗೆ ಹಿಂದೆ ನೋಡದೆ ಮುಂದೆ ಮುಂದೆ ನಡೆಯಲಿ. ನಮ್ಮ ಮುಖ್ಯ ಮಂತ್ರಿಗಳು ಹಾಗೂ ಅವರ ಸಹೋದ್ಯೋಗಿಗಳ ನೇತೃತ್ವದಲ್ಲಿ ನಮ್ಮ ರಾಜ್ಯ ಮುಂದೆ ಸಾಗಲಿ ಎನ್ನುವಂಥ ಮಾತನ್ನು ಹೇಳುತ್ತಾ ಸನ್ಮಾನ್ಯ ರಾಜ್ಯಪಾಲರಿಗೆ ಕೃತಜ್ಞತೆಯನ್ನು ಅವರ ಭಾಷಣಕ್ಕಾಗಿ ಸಮರ್ಪಿಸುತ್ತೇನೆ. ಹಾಗೆಯೇ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

*ಶ್ರೀ ಸಿ.ಎಂ. ಲಿಂಗಪ್ಪ:- (ರಾಮನಗರ): ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೧೨-೨-೧೯೯೩ರಂದು ಕರ್ನಾಟಕದ ಎರಡೂ ಸದನಗಳನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥ ನಿರ್ಣಯಕ್ಕೆ ನಾನು ಅನುಮೋದಕನಾಗಿ ಇಲ್ಲಿ ಕೆಲವಾರು ವಿಚಾರಗಳನ್ನು ಪ್ರಸ್ತಾಪಮಾಡಲಿಕ್ಕೆ ಮೊದಲನೆಯದಾಗಿ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಆ ದಿವಸ ಸಭೆಯ ಪ್ರಾರಂಭಕ್ಕೆ ಈ ಸಭೆಯ ಗೌರವಾನ್ವಿತ ಸದಸ್ಯರುಗಳು ಕರ್ನಾಟಕದಲ್ಲಿ ಹಾಗೂ ಹಿಂದಿನ ಮೈಸೂರು ರಾಜ್ಯದಲ್ಲಿ ಇದ್ದಂಥ ಪ್ರಜಾ ಪ್ರತಿನಿಧಿ ಸಭೆ ಹಾಗೂ ವಿಧಾನಸಭೆಗಳಲ್ಲಿ ನಡೆಸಿಕೊಂಡು ಬಂದಂಥ ಮತ್ತು ಉಳಿಸಿಕೊಂಡು ಬಂದಂಥ ಒಂದು ಸಚ್ಚಾರಿತ್ರ್ಯವನ್ನು ಕೆಡಿಸತಕ್ಕಂಥ ರೀತಿಯಲ್ಲಿ ರಾಜ್ಯಪಾಲರ ಭಾಷಣದ ಪ್ರತಿಗಳನ್ನು ಹರಿದು ರಾಜ್ಯಪಾಲರ ತಲೆ ಮೇಲೆ ಬೀಳುವಂಥ ರೀತಿಯಲ್ಲಿ ಎಸೆದಂಥ ವಿಚಾರ ಬಹುಶಃ ಸನ್ಮಾನ್ಯ ಸದಸ್ಯರಿಗೆ ಎಷ್ಟು ಪ್ರಿಯವಾಯಿತೋ ನನಗಂತೂ ಗೊತ್ತಿಲ್ಲ. ಇದು ತೀವ್ರ ನಾಚಿಕೆಪಡುವಂಥ ವಿಚಾರ. ಅದರಲ್ಲೂ ವಿರೋಧ ಪಕ್ಷದಲ್ಲಿರತಕ್ಕಂಥ ಸನ್ಮಾನ್ಯ ಸದಸ್ಯರುಗಳಿಗೆ ತಮ್ಮ ವಿರೋಧ ಅಭಿಪ್ರಾಯಗಳನ್ನು ಮತ್ತು ಅನಿಸಿಕೆಗಳನ್ನು ಹೇಳಲಿಕ್ಕೆ ಸಭೆಯಲ್ಲಿ ಮುಕ್ತ ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿದ್ದೀರಿ, ಬಹಳಷ್ಟು ಅವಕಾಶ ಇದ್ದರೂ ಸಹ ಅಷ್ಟೊಂದು ರೀತಿಯಲ್ಲಿ ಈ ಸಭೆಯ ಘನತೆ ಗೌರವಕ್ಕೆ ಕುಂದು ಉಂಟಾಗುವ ರೀತಿಯಲ್ಲಿ ನಡೆದುಕೊಂಡ ವರ್ತನೆಗಾಗಿ ಬಹುಶಃ ಅವರು ಕ್ಷಮೆ ಕೇಳುವುದು ಎಷ್ಟರ ಮಟ್ಟಿಗೆ ಸಾಧುವೋ ನಾನಂತೂ ಇದರ ಬಗ್ಗೆ ಕ್ಷಮೆ ಕೇಳಬೇಕಾಗುತ್ತದೆ. ಇಷ್ಟನ್ನು ಹೇಳುತ್ತಾ ಸ್ವಾತಂತ್ರ್ಯ ನಂತರ ದೇಶದಲ್ಲಿ ಆದಂಥ ಹಿಂದು, ಮುಸ್ಲೀಮ್ ಗಲಾಟೆಗಳ ಬಗ್ಗೆ ನಾವು ಆಗಾಗ್ಗೆ ಕೇಳುತ್ತಿದ್ದೇವು. ಆದರೇ, ದುರಾದೃಷ್ಟವಶಾತ್ ೧೯೯೨ರ ಡಿಸೆಂಬರ್ ಆರನೆಯ ತಾರೀಖು ಅಯೋಧ್ಯೆಯಲ್ಲಿ ಘಟನೆ ಶುರುವಾಗಿ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಏನಿತ್ತು, ಜಾತ್ಯಾತೀತ ಸ್ವರೂಪದ ಅಡಿಗಲ್ಲು ಅಲುಗಾಡುವ ರೀತಿಯಲ್ಲಿ ಬಾಬರಿ ಮಸೀದಿಯನ್ನು ನೆಲಸಮಮಾಡಿದ್ದೇ ತಮ್ಮ ವಿರೋಚಿತ ಕಾರ್ಯ ಎಂದು ತಿಳಿದುಕೊಂಡಂಥ ಜನವು ದೇಶದ ಎಲ್ಲಾ ಕಡೆಗಳಲ್ಲಿಯೂ ಕೋಮುದಳುರಿಯನ್ನು ಹಬ್ಬಿಸಿ, ಆದರ ಪರಿಣಾಮವಾಗಿ ಸುಮಾರು ೪ಸಾವಿರಕ್ಕೂ ಹೆಚ್ಚು ಜನರು, ಅಮಾಯಕರು, ಸಾವನ್ನಪ್ಪುವಂತೆ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸಚಿವರು ಕುಳಿತುಕೊಂಡು ಭಾಷಣವನ್ನು ಕೇಳುತ್ತಾ ಇಲ್ಲ, ಅವರ ಪರಿಸ್ಥಿತಿಯು ಕೂಡ ಹದಗೆಟ್ಟಿದೆ.

ಶ್ರೀ ಹೆಚ್. ಏಕಾಂತಯ್ಯ:- ನಿಮ್ಮಲ್ಲಿ ೪೦ಜನ ಮಂತ್ರಿಗಳು ಇದ್ದೀರಿ. ಆದರಲ್ಲಿ ಇಬ್ಬರು ಇಲ್ಲಿ ಇದ್ದೀರಿ. ನೀವು ಕೂಡ ಭಾಷಣವನ್ನು ಕೇಳುತ್ತಾ ಇಲ್ಲ, ಹಾಗಾದರೆ ನಾವು ಏನು ಮಾಡಬೇಕು?

ಅಧ್ಯಕ್ಷರು:- ರಾಜ್ಯಪಾಲರ ಭಾಷಣಕ್ಕೆ ಅನುಮೋದನೆ ಮಾಡುವಾಗ ಹೆಚ್ಚು ಜನ ಸಚಿವರು ಇದ್ದರೆ ಒಳ್ಳೆಯದಿತ್ತು.

ಶ್ರೀ ಸಿ.ಎಂ.ಲಿಂಗಪ್ಪ:-ಸುಮಾರು ನಾಲ್ಕು ಸಾವಿರ ಜನ ಅಮಾಯಕರ ಕಗ್ಗೊಲೆ, ಸಾವಿರಾರು ಮಂದಿಗೆ ಹಿಂಸೆ, ಸಾವಿರಾರು ಕುಟುಂಬಗಳ ನಿರ್ವಸತಿತನ, ಸುಮಾರು ೧೫-೨೦ಸಾವಿರ ಕೋಟಿ ರೂಪಾಯಿಗಳಷ್ಟು, ಆಸ್ತಿಪಾಸ್ತಿಗಳ ನಷ್ಟವಾಗಿ, ನಮ್ಮದೊಂದು ಜಾತ್ಯಾತೀತ ರಾಷ್ಟ್ರ ಎಂದು ಹಣೆಪಟ್ಟಿಯನ್ನು ಕಟ್ಟಿಕೊಂಡು ಅಂತರಾಷ್ಟ್ರೀಯ ಮಟ್ಟದಲ್ಲಿ ಹೇಳುತ್ತಾ ಇದ್ದೆವು, ಅದೆಲ್ಲ ಸುಳ್ಳು ಎಂದು ಹೇಳತಕ್ಕಂಥಾದ್ದು ಈಗ ಸಾಬೀತು ಆಯಿತು. ನಮ್ಮ ರಾಷ್ಟ್ರದ ಬಗ್ಗೆ ಗೌರವ ಇಟ್ಟುಕೊಂಡಿರುವವರು, ಹಾಗೆಯೇ ಈ ಜಾತ್ಯಾತೀತ ರಾಷ್ಟ್ರದ ಅಭಿವೃದ್ಧಿ ಕೆಲಸಕಾರ್ಯಗಳಿಗೆ ನೆರವು ನೀಡಬೇಕೆಂಬ ಭಾವನೆ ಇಟ್ಟುಕೊಂಡ ಹೊರರಾಷ್ಟ್ರಗಳು, ಭಾರತದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಭಾವಿಸಿಕೊಂಡ ಅನೇಕ ಹೊರರಾಷ್ಟ್ರಗಳು, ಹೀಗೆ

ಎಲ್ಲರೂ ಕೂಡ ಈಗ ಮತ್ತೆ ಚಿಂತನೆಯನ್ನು ಮಾಡಬೇಕಾಗಿದೆ. ಅಲ್ಲಿ ನಾವು ಹೋಗಿ ನೆಲೆಯಾಗಬಹುದೇ ಅಲ್ಲಿನ ಅಭಿವೃದ್ಧಿಗೆ ನಮ್ಮ ಕಾಣಿಕೆಗಳನ್ನು ಸಲ್ಲಿಸಬಹುದೆ ಎಂಬ ಬಗ್ಗೆ ಪುನಃ ಅವರು ಚಿಂತಿಸಬೇಕಾಗಿದೆ. ಇಷ್ಟೆಲ್ಲಾ ದೇಶದಲ್ಲಿ ನಡೆದಾಗ ಶಾಂತಿಪ್ರಿಯ ನಮ್ಮ ಕರ್ನಾಟಕ ರಾಜ್ಯವು ಕೂಡ ಇದಕ್ಕೆ ಹೊರತಾಗಿ ಇರಲಿಲ್ಲ. ಅನಿರೀಕ್ಷಿತವಾಗಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗ, ಮಂಗಳೂರು ಜಿಲ್ಲೆಗಳಲ್ಲಿಯೂ ಸಹ ಕೋಮುಗಲಭೆಗಳು ಆಗಿ ಬಹಳ ಆತಂಕಕಾರಿಯಾದಂಥ ಪರಿಸ್ಥಿತಿಯು ಈ ರಾಜ್ಯದಲ್ಲಿ ಆಯಿತು. ಒಂದು ಹೆಗ್ಗಳಿಕೆಯ ವಿಚಾರ ಅಂದರೆ ಕೋಮು ಗಲಭೆಗಳಿಗೆ ಉಗಮಸ್ಥಾನ ಎಂಬಂತಿರುವ, ನನ್ನ ಕ್ಷೇತ್ರವಾದ ರಾಮನಗರ ಪಟ್ಟಣ, ಇಷ್ಟೆಲ್ಲಾ ಗಲಭೆಗಳು ಆದಾಗ್ಯೂ ಬಹಳ ಶಾಂತಿಯಿಂದ ಹಾಗೂ ಬಹಳ ಸುರಕ್ಷಿತವಾಗಿ ಇದ್ದಿರತಕ್ಕಂಥಾದ್ದರ ಬಗ್ಗೆ ನಾನು ಯಾರಿಗೆ ಧನ್ಯವಾದಗಳನ್ನು ಹೇಳಬೇಕೋ ಎಂದು ಗೊತ್ತಾಗುತ್ತಾ ಇಲ್ಲ. ನಮ್ಮ ಜನತೆಯಿಂದ ಹಿಡಿದು ಬಹಳ ವ್ಯವಸ್ಥಿತವಾಗಿ ಕಾನೂನು ಪಾಲನೆ ಮಾಡಿದಂಥ, ಪೋಲೀಸ್ ಇಲಾಖೆಯವರನ್ನು ಕಂದಾಯ ಇಲಾಖೆಯವರನ್ನು, ರಾಜ್ಯದ ನಮ್ಮ ಮುಖ್ಯಮಂತ್ರಿಯವರನ್ನು ಹಿಡಿದು, ಎಲ್ಲಾ ಸಂಪುಟದ ಸದಸ್ಯರನ್ನು, ರಾಜ್ಯಮಟ್ಟದ, ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳನ್ನು ನಾನು ಈ ಬಗ್ಗೆ ಅಭಿನಂದಿಸುತ್ತೇನೆ. ನಾನು ಶಾಸಕನಾಗಿ ನನ್ನ ಕೆಲಸವನ್ನು ಮಾಡಿದ್ದೇನೆ. ಅದು ನನಗೆ ತೃಪ್ತಿ ತಂದಿದೆ. ಏಕೋ ಏನೋ ಹೊರಗಿನ ಜನರು ನಮ್ಮ ರಾಮನಗರದಲ್ಲಿ ಕೋಮು ದಳ್ಳುರಿಯನ್ನು ಹಬ್ಬಿಸದೆ ಬಹಳ ದೊಡ್ಡ ಪುಣ್ಯವನ್ನು ಕಟ್ಟಿಕೊಂಡಿದ್ದಾರೆ. ಅದಕ್ಕಾಗಿ ನಾನು ಸಂಬಂಧಪಟ್ಟಂಥ ಎಲ್ಲರನ್ನೂ ಅಭಿನಂದಿಸುತ್ತೇನೆ. ಹಾಗೆಯೇ ರಾಜ್ಯ ಸರಕಾರದ ಬಹಳ ವಿಚಕ್ಷಣ ಕ್ರಮದಿಂದಾಗಿ ಹಾಗೂ ಸಕಾಲಿಕವಾಗಿ ಕೈಗೊಂಡಂಥ ಕಟ್ಟುನಿಟ್ಟಿನ ಕ್ರಮದಿಂದಾಗಿ, ನಮ್ಮ ಭಾಗದಲ್ಲಿ ಹೆಚ್ಚಿನ ಸಾವುನೋವು, ಆಸ್ತಿಪಾಸ್ತಿಗಳ ನಷ್ಟವಾಗುವುದು ತಪ್ಪಿತು. ಅದಕ್ಕಾಗಿ ನಾನು ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ರೀತಿಯ ಘಟನೆಗಳಿಂದ ಈ ದೇಶಕ್ಕೇನಾದರೂ ಒಳ್ಳೆಯದಾಗುತ್ತದೆಯೇ? ಈ ದೇಶದ ಅಭಿವೃದ್ಧಿಗೇನಾದರೂ ಇದರಿಂದ ಪ್ರಯೋಜನವಾಗುತ್ತಿದ್ದರೆ, ನಾವು ಸದಾ ಕಾಲ ಕೋಮುಗಲಭೆಗಳನ್ನು ಮಾಡಿಕೊಂಡು ಹೋಗಬಹುದು. ಆಸ್ತಿಪಾಸ್ತಿ ಲೂಟಿ ಕೂಡ ಮಾಡಬಹುದು. ಒಬ್ಬ ಪರಿಣತರ ಅಭಿಪ್ರಾಯದಲ್ಲಿ ಡಿಸೆಂಬರ್ ೬ರಿಂದ ಸುಮಾರು ಒಂದು ತಿಂಗಳು ನಡೆದ ಆ ಘಟನೆಗಳಲ್ಲಿ ನಮ್ಮ ದೇಶದ ಪ್ರಗತಿ ಎಷ್ಟರಮಟ್ಟಿಗೆ ಸಾಧನೆಯಾಯಿತು ಎಂದರೆ ನಾವು ೯೨ನೇ ಇಸವಿಯಿಂದ ೮೯ನೇ ಇಸವಿಗೆ ಹಿಂದಕ್ಕೆ ಹೋಗಿದ್ದೇವೆ. ಮೂರು ವರ್ಷಗಳ ಹಿಂಜರಿತ ಆಯಿತು. ಮುನ್ನಡೆ ಸಾಧಿಸಬೇಕಾಗಿದ್ದ ಪರಿಸ್ಥಿತಿ ಬಿಟ್ಟು ೩ ವರ್ಷ ಹಿನ್ನಡೆ ಸಾಧಿಸಿದ್ದೇವೆ. ಇದಕ್ಕಾಗಿ ಎಷ್ಟು ಜನ ಮಹನೀಯರು ಸಂತೋಷಪಡುತ್ತಾರೋ ಆ ದೇವರಿಗೇ ಗೊತ್ತು. ಈ ಕೋಮುಗಲಭೆಯ ನಂತರ ಮಾನವ ಸರಪಳಿ, ಜಾತ್ಯಾತೀತ ನೀತಿ ಬಗ್ಗೆ ಪ್ರಮಾಣವಚನ ಸ್ವೀಕಾರ ಇತ್ಯಾದಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿತು. ಶ್ರೀ ಜಿ.ಎಸ್. ಆಚಾರ್‌ರವರು ನಮ್ಮಲ್ಲಿ ಮಾನವಸರಪಳಿ ಯಶಸ್ವಿಯಾಯಿತು ಎಂದು ಹೇಳಿದರು. ಏಕೋ ಏನೋ ನಮ್ಮಲ್ಲಿ ಅಷ್ಟು ಯಶಸ್ವಿಯಾಗುವುದಕ್ಕೆ ಸಾಧ್ಯವಾಗಲಿಲ್ಲ. ಶಾಲಾ ಚಿಕ್ಕವಯಸ್ಸಿನ ಮಕ್ಕಳನ್ನು ಕರೆದು ತಂದು ನಿಲ್ಲಿಸಿ ಆ ಬಿಸಿಲನ್ನು ತಡೆಯಲಾರದೆ ಮಾನವ ಸರಪಳಿ ಅಂದರೇನೆ ಅರ್ಥವಾಗದ ಮಕ್ಕಳನ್ನು ನಿಲ್ಲಿಸಿ ನಾವು ಮಾನವಸರಪಳಿ ಮಾಡುವುದರಿಂದ ಅದಕ್ಕೆ ಹೆಚ್ಚಿನ ಅರ್ಥ ಬರುವುದಿಲ್ಲ. ಸಾಮಾನ್ಯ ಜನರು ಅದರಲ್ಲಿ ಕೂಡಬೇಕು. ಹಳ್ಳಿಗಳಲ್ಲಿರುವ ಎಲ್ಲಾ ವರ್ಗದವರು ಬಂದು ನಿಂತು ನಾವೆಲ್ಲ ಒಂದೇ ಎಂಬ ಮಾನವಸರಪಳಿ ನಿರ್ಮಾಣ ಮಾಡಿದರೆ ಆಗ ಅದಕ್ಕೆ ಅರ್ಥ ಬರುತ್ತದೆ. ಇಂತಹ ಸನ್ನಿವೇಶ ಮೂಡಿಸುವುದಕ್ಕೆ ನಮ್ಮ ರಾಜ್ಯಸರ್ಕಾರ, ಅಧಿಕಾರಿಗಳು, ಸಂಘ ಸಂಸ್ಥೆಗಳು, ಬುದ್ಧಿಜೀವಿಗಳು ಹಾಗೂ ಪರಿಣಾಮಕಾರಿಯಾದ ಪ್ರಸಾರಮಾಧ್ಯಮಗಳೇನಿವೆ ಇವೆಲ್ಲವೂ ಇದರ ಬಗ್ಗೆ ಹೆಚ್ಚಿನ ಆಸೆ ವಹಿಸಬೇಕು, ಹೆಚ್ಚಿನ ಕಾರ್ಯಕ್ರಮಗಳನ್ನು ಸೂಚಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ

ಮಾಡುವುದಕ್ಕೆ ತಮ್ಮ ಅನುಮತಿ ಕೋರುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಮಹಿಳೆಯರ ಕಲ್ಯಾಣದ ಬಗ್ಗೆ, ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯ ದಬ್ಬಾಳಿಕೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಹಿಂದೆಂದಿಗಿಂತಲೂ ಇದೊಂದು ಜ್ವಲಂತ ಸಮಸ್ಯೆಯಾಯಿತು, ದಿನಬೆಳಗಾದರೆ ವರದಕ್ಷಿಣೆ ಸಾವು, ವರದಕ್ಷಿಣೆ ಕೊಡುವುದಕ್ಕೆ ಆಗದೆ ಹೆಣ್ಣುಮಕ್ಕಳು ಮೈಸುಟ್ಟುಕೊಂಡು ಸತ್ತಳು, ಅಮಾಯಕ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಯುವುದು ಇದು ದಿನೇದಿನೇಹೆಚ್ಚುತ್ತಿದೆ. ಕಾನೂನು ಬಿಗಿಯಾದಷ್ಟು ಈ ಪ್ರಕರಣಗಳು ಹೆಚ್ಚುತ್ತಿರುವುದು ನೋಡಿದರೆ ಈ ಕಾನೂನಿನ ಹಿಡಿತ ಸಾಲದೇ ಎಂಬ ಪ್ರಶ್ನೆ ಬರುತ್ತದೆ. ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮಹಿಳೆಯರ ಮಾನಪ್ರಾಣ ರಕ್ಷಣೆಗೆ ವರದಕ್ಷಿಣೆಯ ಪಿಡುಗನ್ನು ತೊಡೆದು ಹಾಕುವುದಕ್ಕೆ ಇನ್ನೂ ಬಿಗಿನೀತಿ ತಾಳಿ ಇದನ್ನು ನಿವಾರಿಸಬೇಕೆಂಬ ಮನವಿಯನ್ನು ಈ ಮೂಲಕ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸರ್ಕಾರ ಮುಂದಿನ ವರ್ಷಗಳಲ್ಲಿ ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಗಳಿಗೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ನೀಡಿದ ೧೫ ಅಂಶಗಳ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಮಕಾರಿಯಾಗಿ ನಾವು ಅನುಷ್ಠಾನಕ್ಕೆ ತರುತ್ತೇವೆಂಬ ಮಾತನ್ನು ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ಇದು ಬಹಳ ವ್ಯಾಪಕವಾಗಿ, ಬಹಳ ಪರಿಣಾಮಕಾರಿಯಾಗಿ ಆಗಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಹೆಚ್ಚಿನ ವಿಶೇಷ ಎಂದರೆ ಸರ್ಕಾರದವರು ಈಗ ನೂರು ದಿನಕ್ಕೆ ಒಂದು ಕಾರ್ಯಕ್ರಮದ ಅವಧಿಯನ್ನು ಕೊಟ್ಟು ಈ ಅವಧಿಯಲ್ಲಿ ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರವನ್ನು ನೀಡಿ, ಅವರು ಆ ಅವಧಿಯಲ್ಲಿ ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು ಸಾಧನೆಯನ್ನು ತೋರಿಸಿ, ಆ ಸಾಧನೆಯನ್ನು ಮಾಡಲಿಕ್ಕೆ ಆಗದೇ ಇದ್ದಾಗ ಹೊಣೆಗಾರಿಕೆಗೂ ಸಹಾ ತಯಾರಾಗಿರಬೇಕು ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಶ್ರೀಮಾನ್ ಆಚಾರ್‌ರವರು ಹೇಳಿದ ಹಾಗೆ ನೂರು ದಿನಗಳಲ್ಲಿ ಇದೊಂದು ಯಶಸ್ವಿ ಕಾರ್ಯಕ್ರಮವಾದರೆ ಇದನ್ನೆ ನಾವು ಮೇಲ್ಪಂಕ್ತಿಯಾಗಿ ಇಟ್ಟುಕೊಂಡು ಇನ್ನು ಉಳಿದ ನಮ್ಮ ಅವಧಿಗೆ ಇಷ್ಟೇ ಪರಿಣಾಮಕಾರಿಯಾಗಿ ಕೆಲಸಕಾರ್ಯಗಳನ್ನು ಮಾಡಿಸಬಹುದು ಎನ್ನುವ ಅಭಿಪ್ರಾಯವನ್ನು ಹೇಳುತ್ತೇನೆ. ಈ ಸರ್ಕಾರಿ ಆಡಳಿತ ಯಂತ್ರ ಸಾಕಷ್ಟು ಚಟುವಟಿಕೆಯಿಂದ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಶಾಸಕನಾದ ಮೇಲೆ ಭೇಟಿ ಕೊಟ್ಟಂಥ ಅನೇಕ ಕಛೇರಿಗಳಲ್ಲಿ ಸಾಮಾನ್ಯವಾಗಿ ಕಾಣತಕ್ಕಂಥ ದೃಶ್ಯ ಅನಧಿಕೃತವಾಗಿ ಗೈರುಹಾಜರಾಗತಕ್ಕಂಥದ್ದು. ಇದನ್ನು ಯಾರು ಕೇಳುವವರು ಇಲ್ಲ. ಕಛೇರಿಗಳಿಗೆ ಹೋದಾಗ ಸ್ಥಾನದಲ್ಲಿ ಇಲ್ಲದೇ ಇರುವುದು. ಕೇಳಿದರೆ ಕಾಫಿಗೆ ಹೋಗಿದ್ದಾರೆ ಎಂದು ಹೇಳುವ ವಿಚಾರ. ಹೀಗೆ ಏಳೆಂಟು ಸಾರಿ ಕಾಫಿಗೆ ಹೋಗುತ್ತಿರುವುದು. ಬಹುಶಃ ಆ ದೃಶ್ಯವನ್ನು ವಿಧಾನಸೌಧದಲ್ಲಿಯೂ ನೋಡಬಹುದು ಪಕ್ಕದ ಎಂ.ಎಸ್ ಬಿಲ್ಡಿಂಗ್‌ನಲ್ಲೂ ನೋಡಬಹುದು. ಇನ್ನಿತರೆ ಯಾವುದೇ ಕಛೇರಿಯಲ್ಲಾದರೂ ಇದನ್ನು ನೋಡಬಹುದು. ಒಂದು ದಿವಸಕ್ಕೆ ಏಳೆಂಟು ಸಾರಿ ಕಾಫಿಗೆ ಹೋಗುತ್ತಿರುವುದು. ಇನ್ನೊಂದು ಸ್ವಾರಸ್ಯ ಎಂದರೆ ಕಛೇರಿಯ ಅವಧಿ ಸಂಜೆ ಐದೂವರೆ ಗಂಟೆ ವರೆಗೂ ಇರಬೇಕು. ನಾಲ್ಕು ಮುಕ್ಕಾಲು ಗಂಟೆಗೆ, ಹೋದರೆ ಯಾರೂ ಕಛೇರಿಯಲ್ಲಿ ಇರುವುದಿಲ್ಲ. ಎಲ್ಲಾ ಹೊರಡುತ್ತಿರುತ್ತಾರೆ. ಅದರಲ್ಲಿ ಕ್ಷಮಿಸಬೇಕು. ಅದರಲ್ಲಿ ಹೆಣ್ಣುಮಕ್ಕಳು ಇನ್ನು ಕಾಲುಗಂಟೆ, ಅರ್ಧ ಗಂಟೆ ಮುಂಚಿತವಾಗಿಯೇ ಹೊರಟುಹೋಗುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ:- ನಾಲ್ಕುಗಂಟೆಗೇ ಸಿಗುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ:- ನಾರಾಯಣಸ್ವಾಮಿ ಹೇಳುತ್ತಿದ್ದಾರೆ, ನಾಲ್ಕು ಗಂಟೆಗೇ ಸಿಗುವುದಿಲ್ಲ ಎಂದು. ನಮಗೆ ನಾಲ್ಕೂವರೆ, ನಾಲ್ಕುಮುಕ್ಕಾಲುವರೆಗೂ ಪರವಾಗಿಲ್ಲ. ಹೆಣ್ಣುಮಕ್ಕಳು ಅರ್ಧಗಂಟೆ ಇನ್ನು ಮುಂಚಿತವಾಗಿ ಬಿಡುತ್ತಾರೆ. ನಾಲ್ಕುಮುಕ್ಕಾಲು ಗಂಟೆಗೆ

ಕಛೇರಿ ಮುಕ್ತಾಯವಾಗುತ್ತದೆ. ಇದು ತಪ್ಪಬೇಕು. ಐದೂವರೆ ಗಂಟೆ ಎಂದರೆ ಐದೂವರೆ ಗಂಟೆಯವರಿಗೆ ಕಛೇರಿಯಲ್ಲಿ ಕುಳಿತು ಕೆಲಸವನ್ನು ಮಾಡಬೇಕು.

ಛೇರ್ಮನ್:- ಇದು ಎಲ್ಲಿಯ ವಿಚಾರಗಳನ್ನು ತಾವು ಹೇಳುತ್ತಿದ್ದೀರಿ. ಇದು ವಿಧಾನಸೌಧದಲ್ಲಿಯೇ ತಾನೇ. ತಾವು ಹೇಳತಕ್ಕಂಥ ವಿಚಾರ ವಿಧಾನಸೌಧದಲ್ಲಿಯೂ ನಡೆಯುತ್ತದೆಯೇ?

ಶ್ರೀ ಸಿ.ಎಂ. ಲಿಂಗಪ್ಪ:- ಇಲ್ಲಿಂದ ಶುರುವಾಗಿ.

ಶ್ರೀ ಎಂ. ನಾರಾಯಣಸ್ವಾಮಿ:- ಮಾನ್ಯ ಅಧ್ಯಕ್ಷರೇ, ಲಿಂಗಪ್ಪನವರು ಹೇಳತಕ್ಕಂಥದ್ದು ಬಹುಶಃ ನೂರಕ್ಕೆ ನೂರರಷ್ಟು ಸತ್ಯ. ನಾನು ಎಂ.ಎಸ್. ಬಿಲ್ಡಿಂಗ್‌ಗೆ ಹೋಗಿದ್ದಾಗ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬಳು ಸೆಕ್ಷನ್ ಆಫೀಸರ್ ಲೇಡಿ. ನಾನು ಹೋದರೆ ಕಥೆ ಪುಸ್ತಕ ಇಟ್ಟುಕೊಂಡು ಮುಂದೆ ಟೇಬಲ್ ಮೇಲೆ ಕಾಲು ಹಾಕಿಕೊಂಡು ಓದುತ್ತಿದ್ದಳು. ನಾನು ಎಂ.ಎಲ್. ಎ. ದಯವಿಟ್ಟು ಏನೊ ಸ್ವಲ್ಪ ನೋಡಿ ಎಂದರೆ ಆ ಪುಸ್ತಕವನ್ನು ಹಾಗೆ ಇಟ್ಟುಕೊಂಡು ಉತ್ತರವನ್ನು ಕೊಟ್ಟಳು. ಪುಸ್ತಕವನ್ನು ಮೊದಲು ಇಡಿ ಎಂದು ಹೇಳಿ ಅವರ ಸೆಕ್ರೆಟರಿ-೨ ಅವರ ಹತ್ತಿರ ಹೋಗಿ ಕಂಪ್ಲೇಂಟ್ ಮಾಡಿದೆ. ಏನು ಸಾರ್ ಮಾಡೋಣ, ಈ ಸೆಕ್ರೆಟೇರಿಯೆಟ್ ಪರಿಸ್ಥಿತಿಯೇ ಹಾಗಿದೆ, ಏಳೆಂಟು ಕೆಲಸ ಎಂದು ನಿಗದಿ ಮಾಡಿದ್ದಾರೆ. ಆ ಕೆಲಸ ಮುಗಿದ ಅವರದು ಮುಗಿದುಹೋಯಿತು ಎಂದು ಹೇಳಿದರು. ಆ ರೀತಿಯ ಒಂದು ವ್ಯವಸ್ಥೆ ಇದೆ.

ಶ್ರೀ ಸಿ.ಎಂ. ಲಿಂಗಪ್ಪ:- ಇದಕ್ಕೆ ಮುಖ್ಯ ಕಾರಣ ಒಬ್ಬ ಸರ್ಕಾರಿ ನೌಕರರಿಗೆ ಒಂದು ದಿವಸಕ್ಕೇ ಇಂತಿಷ್ಟೇ ಕಡತಗಳನ್ನು ವಿಲೇವಾರಿ ಮಾಡಬೇಕು ಎನ್ನತಕ್ಕಂಥ ಕಟ್ಟಪ್ಪಣೆಯನ್ನು ವಿಧಿಸುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಈ ರೀತಿ ಆಗುತ್ತದೆ. ನಾನು ತಿಳಿದಮಟ್ಟಿಗೆ ಹಿಂದೆ ಒಂದು ತಾಲ್ಲೂಕು ಕಛೇರಿಯಲ್ಲಿ ಒಬ್ಬ ಸಂಬಂಧಪಟ್ಟಂಥ ಗುಮಾಸ್ತ ಒಂದು ದಿವಸಕ್ಕೆ ೧೬. ರಿಂದ ೨೦ ಕಡತಗಳನ್ನು ವಿಲೇವಾರಿ ಮಾಡುತ್ತಿದ್ದ. ಇವತ್ತು ಎಷ್ಟಕ್ಕೆ ಇಳಿದಿದೆ ಎಂದರೆ ೫,೬,೭,೮ ಅಲ್ಲಿಗೆ ದಿನ ಮುಗಿಯಿತು. ಸರ್ಕಾರ ಇದನ್ನು ಬಹಳ ತೀವ್ರವಾಗಿ ಗಣನೆಗೆ ತೆಗೆದುಕೊಂಡು ಆ ಅವಧಿಯಲ್ಲಿ ಎಷ್ಟು ಕಡತಗಳನ್ನು ವಿಲೇವಾರಿ ಮಾಡಬಹುದು ಎನ್ನತಕ್ಕಂಥದ್ದನ್ನು ಯೋಚನೆ ಮಾಡಿ ಸಾಕಷ್ಟು ಕೆಲಸವನ್ನು ಕೊಟ್ಟರೆ ಬಹುಶಃ ಈ ರೀತಿ ಮಧ್ಯೆ ಮಧ್ಯೆ ಗೈರುಹಾಜರಾಗತಕ್ಕಂಥದ್ದಾಗಲೀ, ಅವಧಿಗೆ ಮುಂಚೆ ಕಛೇರಿಯನ್ನು ಬಿಡತಕ್ಕಂಥದ್ದಾಗಲೀ ಬರಲಾರದು ಎನ್ನತಕ್ಕಂಥ ಸೂಚನೆಯನ್ನು ತಮ್ಮ ಮೂಲಕ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೬.೨೫ ಪಿ.ಎಂ.

ಇನ್ನು ರಾಜ್ಯಪಾಲರ ಭಾಷಣದ ಮೂಲಕ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸತಕ್ಕಂಥ ಮಾತನಾಡಿದ್ದಾರೆ. ನಾನು ವಸ್ತುಸ್ಥಿತಿಯನ್ನು ವ್ಯಕ್ತಮಾಡಬೇಕಾಗುತ್ತದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆ, ಮಂಡ್ಯ ಇತ್ಯಾದಿ ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತೆ ಎನ್ನತಕ್ಕ ದೊಡ್ಡದೊಡ್ಡ ಪೋಸ್ಟರ್‌ಗಳನ್ನು ಬ್ಯಾನರ್‌ಗಳನ್ನು ಹಾಕಿದ್ದಾರೆ. ಸಾಕ್ಷರತೆ ಎಷ್ಟರಮಟ್ಟಿಗೆ ಸಾಧನೆ ಆಯಿತು ಎನ್ನತಕ್ಕದ್ದರ ಬಗ್ಗೆ ಇನ್ನು ಅದರ ಅಂಕಿಅಂಶಗಳು ದೊರೆಯುತ್ತಿಲ್ಲ. ಆದರೆ ನನ್ನ ಅನುಭವದ ಪ್ರಕಾರ ನಾವು ಎಷ್ಟೇ ಸಾಕ್ಷರತೆ, ಸಾಕ್ಷರತೆ, ಸಾಕ್ಷರತೆ ಎಂದು ಹೇಳಿಕೊಂಡಾಗಲೂ ಅಕ್ಷರವನ್ನು ಕಲಿಯಬೇಕಾಗಿರತಕ್ಕಂಥ ವ್ಯಕ್ತಿಗಳು ಒಂದು ಸರಿಯಾದ ಪ್ರತಿಕ್ರಿಯೆಯನ್ನು ನೀಡಿ ಅದನ್ನು ಕಲಿಯದೇ ಹೋದಾಗ ನಮ್ಮ ಇಡೀ ಪ್ರಯತ್ನ ವ್ಯರ್ಥವಾಗುತ್ತದೆ. ಸಾಕಷ್ಟು ಹಣ ವ್ಯಯವಾಗುತ್ತದೆ. ಕಾಲ ವ್ಯಯವಾಗುತ್ತದೆ. ಆದರೂ ಇದು ಬಹಳ ಉಪಯುಕ್ತವಾದಂತಹ ಕಾರ್ಯಕ್ರಮ. ನಾವೆಲ್ಲರೂ ಅಕ್ಷರಸ್ಥರಾಗಬೇಕು. ಅಕ್ಷರ ಗೊತ್ತಿಲ್ಲದೆ ಇರತಕ್ಕಂಥವರು

ಮೊದಲು ಅಕ್ಷರವನ್ನು ಕಲಿತು ಹೆಚ್ಚಿನ ಜ್ಞಾನವನ್ನು ಸಂಪಾದನೆ ಮಾಡಬೇಕು ಎನ್ನತಕ್ಕದ್ದು ಬಹಳ ಉದಾರವಾದಂತಹ ವಿಚಾರವಾಗಿದೆ. ಇದನ್ನು ಈ ವರ್ಷ ಸಾಧಿಸುತ್ತೇವೆ ಎನ್ನತಕ್ಕ ಮಾತನ್ನು ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ಇದು ಹೆಚ್ಚು ಪರಿಣಾಮಕಾರಿಯಾದ ವ್ಯವಸ್ಥಿತವಾಗಬೇಕು ಎನ್ನತಕ್ಕ ಸಲಹೆಯನ್ನು ನಾನು ಈ ಮೂಲಕ ನೀಡುತ್ತಿದ್ದೇನೆ. ಇಲ್ಲಿ ಇನ್ನೊಂದು ವಿಪರ್ಯಾಸ ಅಂದರೆ ಹಳ್ಳಿಗಳಲ್ಲಿರತಕ್ಕಂಥ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ, ಪ್ರೌಢಶಾಲೆಗಳಲ್ಲಿ ಎಷ್ಟು ಉಪಾಧ್ಯಾಯರುಗಳು ಇರಬೇಕೋ ಅಷ್ಟು ಉಪಾಧ್ಯಾಯರು ಇಲ್ಲ. ಎಷ್ಟೋ ಹಳ್ಳಿಗಳಲ್ಲಿ ೪೦೦ ವಿದ್ಯಾರ್ಥಿಗಳಿಗೆ ಕೇವಲ ಒಬ್ಬರೂ ಅಥವಾ ಇಬ್ಬರು ಉಪಾಧ್ಯಾಯರು ಇರುವಾಗ ಅಂತಹ ಹಳ್ಳಿಗಳಲ್ಲಿ ನಾವು ಸಂಪೂರ್ಣ ಸಾಕ್ಷರತೆಯನ್ನು ಮಾಡುತ್ತೇವೆ, ನೀವು ಬಂದು ಇಲ್ಲಿ ಕಲಿಯಿರಿ ಎಂದು ಹೇಳಿದಾಗ ಬಹುಶಃ ಅವರು ಹೀಗೆ ಕೇಳಬಹುದು, ಅಲ್ಲ ಸ್ವಾಮಿ, ಎಂ.ಎಲ್.ಎ. ಸಾಹೇಬರೇ ನೀವು ನಮ್ಮ ಮಕ್ಕಳಿಗೆ ಸರಿಯಾಗಿ ಪಾಠ ಹೇಳಲು ಮೇಸ್ಟ್ರುಗಳನ್ನು ಕಳುಹಿಸಿ ವಿದ್ಯೆಯನ್ನು ಕಲಿಸದೇ ನಮಗೆ ಕಲಿಸುವುದಕ್ಕೆ ಬಂದಿದ್ದೀರಲ್ಲಾ, ಮೊದಲು ಅಲ್ಲಿಗೆ ಕಳುಹಿಸಿ ಎಂದು ಕೇಳಿದಾಗ ಏನು ಉತ್ತರ ಹೇಳಬೇಕೆಂದು ನಮಗೆ ಗೊತ್ತಾಗುತ್ತಿಲ್ಲ. ನನ್ನ ಅಭಿಪ್ರಾಯ ಇಷ್ಟೆ. ನನ್ನ ರಾಮನಗರ ತಾಲ್ಲೂಕಿನಲ್ಲಿ ೨೭೦ ಉಪಾಧ್ಯಾಯರ ಕೊರತೆ ಇರತಕ್ಕದ್ದು. ಇವತ್ತಿಗೆ ೨೭೦ ಜನ ಉಪಾಧ್ಯಾಯರು ಬೇಕು. ಪ್ರೌಢಶಾಲೆಗಳಲ್ಲಿ ಸಾಕಷ್ಟು ಉಪಾಧ್ಯಾಯರುಗಳು ಇಲ್ಲ. ಪದವಿ ಪೂರ್ವ ಕಾಲೇಜುಗಳಲ್ಲಿ ಇಲ್ಲ. ಇನ್ನು ದೊಡ್ಡದೊಡ್ಡ ಕಾಲೇಜುಗಳ ಮಾತು ಬೇರೆ ಆಯಿತು. ಪರಿಸ್ಥಿತಿ ಹೀಗಿರುವಾಗ ಸರ್ಕಾರ ಸಂಪೂರ್ಣ ಸಾಕ್ಷರತೆಯನ್ನು ಅನಕ್ಷರಸ್ಥರಿಗೆ ಕೊಡಬೇಕೆಂದು ಹೊರಟಾಗ ಕಲಿಯಬೇಕಾಗಿರತಕ್ಕಂಥ ಚಿಕ್ಕ ವಯಸ್ಸಿನ ಮಕ್ಕಳಿಗೆ ವ್ಯವಸ್ಥಿತವಾದಂತಹ ಶಿಕ್ಷಣ ಅದರಲ್ಲಿಯೂ ಗ್ರಾಮಾಂತರ ಪ್ರದೇಶದಲ್ಲಿ ಕೊಡುವುದಕ್ಕೆ ಸಾಕಷ್ಟು ಉಪಾಧ್ಯಾಯರನ್ನು ಆದಷ್ಟು ಬೇಗ ನೇಮಕಮಾಡಿ ಎಲ್ಲಾ ಶಾಲೆಗಳಿಗೆ ಕೊಡಬೇಕು ಎನ್ನತಕ್ಕ ಕಳಕಳಿಯನ್ನು ಬಹಳ ನೋವಿನಿಂದ ಪ್ರಾರ್ಥನೆಯನ್ನು ಮಾಡಿ ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. .

ಇನ್ನು ರಾಜ್ಯಪಾಲರ ಭಾಷಣದಲ್ಲಿ ವೃತ್ತಿಪರ ಶಿಕ್ಷಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೇವಲ ಕಲಾ ಕಾಲೇಜು, ವಾಣಿಜ್ಯ ಕಾಲೇಜು, ವಿಜ್ಞಾನ ಕಾಲೇಜೆಂದು ಹೇಳಿ ಪದವಿಗಳನ್ನು ಸಂಪಾದನೆ ಮಾಡುವಂತಹ ಕಾರ್ಖಾನೆಗಳಿಗೆ ಬದಲಾಗಿ ವೃತ್ತಿಪರ ಶಿಕ್ಷತಣವನ್ನು ಪ್ರಾರಂಭ ಮಾಡಿದರೆ ಒಳ್ಳೆಯದು. ಏಕೆಂದರೆ ಸಂಗತಿ ಏನಿದೆ ಅಂದರೆ ತಮಗೂ ಗೊತ್ತು ಇಲ್ಲಿರತಕ್ಕಂಥ ಎಲ್ಲಾ ನಮ್ಮ ಜನ ಪ್ರತಿನಿಧಿಗಳಿಗೂ ಗೊತ್ತು. ಅವರವರ ಕ್ಷೇತ್ರದಲ್ಲಿ ಕನಿಷ್ಟ ಒಂದೊಂದು ಊರಿನಲ್ಲಿ ೧೫-೨೦ ಯುವಕರು ನಿರುದ್ಯೋಗಿಗಳಾಗಿ ನಿಂತಿದ್ದಾರೆ. ಅವರು ಎಸ್.ಎಸ್.ಎಲ್.ಸಿವರೆಗೂ ಓದಿರಬಹುದು. ಪಿ.ಯು.ಸಿ.ಯವರೆಗೂ ಓದಿರಬೇಕು. ಬಿ.ಎ, ಬಿ.ಎಸ್.ಸಿ, ಬಿ.ಕಾಂ, ಲಾ ಗ್ರಾಜ್ಯುಯೆಟ್ಸ್ ಇಂಜಿನಿಯರಿಂಗ್ ಗ್ರಾಜ್ಯುಯೆಟ್ಸ್ ಅವರೆಲ್ಲರೂ ಅಷ್ಟೆ. ಈ ರೀತಿ ನಿರುದ್ಯೋಗಿಗಳಾಗುವುದಕ್ಕೆ ಕಾಲೇಜು ಶಿಕ್ಷಣವನ್ನು ಕೊಡುವುದಕ್ಕೆ ಬದಲಾಗಿ, ಕಲಿಕೆಯ ಹಂತದಲ್ಲಿ ಎಸ್.ಎಸ್.ಎಲ್.ಸಿ ಮುಗಿದ ಮೇಲೆ ವೃತ್ತಿಪರ ಶಿಕ್ಷಣವನ್ನು ಅವರಿಗೆ ಕೊಟ್ಟು ಅವರು ಸ್ವಂತ ಉದ್ಯೋಗಗಳನ್ನು ಮಾಡಲು ಅಥವಾ ಹೆಚ್ಚು ಲಾಭದಾಯಕವಾದಂತಹ ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕಾಗಲಿ ಇಂತಹ ಯೋಜನೆಯನ್ನು ಸರ್ಕಾರ ಕೇವಲ ಈಗ ವ್ಯವಸ್ಥೆಯಲ್ಲಿಯೇ ನಡೆಸುತ್ತೇವೆ ಎನ್ನತಕ್ಕ ಭಾವನೆಯನ್ನು ಬಿಟ್ಟು ಇನ್ನೂ ಹೆಚ್ಚು ವ್ಯಾಪಕವಾದಂಥ ಹೆಚ್ಚು ಪರಿಣಾಮಕಾರಿಯಾದಂಥ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಮಾಡಬೇಕು. ಇರತಕ್ಕ ಇನ್ನೆರಡು ವರ್ಷಗಳ ಅವಧಿಯಲ್ಲಿ ಇದನ್ನು ಪರಿಣಾಮಕಾರಿಯಾಗಿ ಸಾಧನೆ ಮಾಡಿದ್ದೆ ಆದರೆ ಈ ರಾಜ್ಯಕ್ಕೆ ಅದರಲ್ಲಿಯೂ ಯುವಜನಾಂಗಕ್ಕೆ ಬಹಳ ಹೆಚ್ಚಿನ ಅನುಕೂಲವನ್ನು ಕೊಟ್ಟು ಅವರು ಜೀವನ ಮಾಡಲಿಕ್ಕೆ ಒಳ್ಳೆಯ ಕಾಣಿಕೆಯನ್ನು ಸರ್ಕಾರ ಕೊಟ್ಟಹಾಗೆ ಆಗುತ್ತದೆ ಎನ್ನತಕ್ಕ ಮಾತನ್ನು ನಾನು ಈ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಭಾರತ ಸರ್ಕಾರದ ಇತ್ತೀಚಿನ ಉದಾರ ಕೈಗಾರಿಕೆಯ ನೀತಿಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಮಾನ್ಯ ರಾಜ್ಯಪಾಲರವರು ಕರ್ನಾಟಕದಲ್ಲಿ ಇದರ ಅಡಿಯಲ್ಲಿ ಸ್ಥಾಪನೆಮಾಡಲಿಕ್ಕೆ ಬರತಕ್ಕಂಥ ಕೈಗಾರಿಕೋದ್ಯಮಿಗಳಿಗೆ, ನೆಲ, ಜಲ, ವಿದ್ಯುತ್ ಇತ್ಯಾದಿ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿಸಿದ್ದಾರೆ. ನಮ್ಮಲ್ಲಿ ನೆಲ ಸಿಗಬಹುದು, ಜಲ ಸಿಗಬಹುದು, ಇನ್ನು ಬೇರೆ ಅನುಕೂಲಗಳನ್ನು ಸರ್ಕಾರ ಮಾಡಿಕೊಡಲುಬಹುದು. ಆದರೆ ವಿದ್ಯುತ್ತನ್ನು ಎಲ್ಲಿಂದ ಕೊಡುತ್ತಾರೆ ಎನ್ನತಕ್ಕದ್ದನ್ನು ನಾವು ಬಹಳ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದಂತಹ ವಿಚಾರ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಅಭಾವ ಪರಿಸ್ಥಿತಿ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ನಾವು ಯಾವ ಊರಿಗೆ ಹೋದರೂ ಅಲ್ಲಿನ ಜನರು ನಮ್ಮನ್ನು ಹೀಗೆ ಸಂಬೋಧಿಸುತ್ತಾರೆ. "ರೀ, ಎಂ.ಎಲ್.ಎ. ಸಾಹೇಬ್ರೆ, ನಮಗೆ ಸರಬರಾಜಾಗುತ್ತಿರುವ ವಿದ್ಯುತ್ತನ್ನು ೮ ಗಂಟೆ, ೧೦ ಗಂಟೆಗಳ ಕಾಲ ಕರೆಂಟ್ ನಿಲ್ಲಿಸಿ, ಇನ್ನು ಉಳಿದ ಸಮಯದಲ್ಲಾದರೂ ನಮಗೆ ಸರಿಯಾದ ವೋಲ್ಟೇಜ್‌ನಲ್ಲಿ ವಿದ್ಯುತ್ ಕೊಡುವ ವ್ಯವಸ್ಥೆ ಮಾಡಿದರೆ ಸಾಕು, ನಮಗೆ ಪುಕ್ಕಸಟ್ಟೆಯಾಗಿ ಕರೆಂಟ್ ಕೊಡಬೇಕೆ, ಕಡಿಮೆ ದುಡ್ಡಿಗೆ ಕರೆಂಟ್ ಕೊಡಿ ಎಂದು ನಿಮ್ಮನ್ನು ನಾವು ಕೇಳುವುದಿಲ್ಲ, ನೀವು ಕೊಟ್ಟ ಕರೆಂಟ್‌ಗೆ ಸಕಾರಣವಾಗಿ ಏನು ದರ ವಿಧಿಸಬೇಕೋ, ವಿಧಿಸಿ, ವಿದ್ಯುತ್ ತೆಗೆದ ಅವಧಿಯನ್ನು ಇನ್ನು ಎರಡು ಗಂಟೆಗಳ ಕಾಲ ಹೆಚ್ಚು ಮಾಡಿಕೊಂಡರೂ ಚಿಂತೆಯಿಲ್ಲ, ೧೦ ಗಂಟೆಗೆ ಹೆಚ್ಚುಮಾಡಿ, ಉಳಿದ ಅವಧಿಗೆ ಮಾತ್ರ ಸರಿಯಾದ ವೋಲ್ಟೇಜ್‌ನಲ್ಲಿ ಕರೆಂಟ್ ಕೊಡಿ" ಎಂದು ಹೇಳುವ ಮಾತನ್ನು ನಾನು ಒತ್ತಾಯಪೂರ್ವಕವಾಗಿ ಇಲ್ಲಿ ಹೇಳುತ್ತೇನೆ. ಬಹುಶಃ ಇದರ ಬಗ್ಗೆ ರಾಮನಗರದಲ್ಲಿ ಪ್ರತಿಭಟನೆ, ಧರಣಿ ಕೂಡ ನಡೆದಿದೆ ಎಂಬ ವಿಚಾರ ನಾನು ತಿಳಿದುಕೊಂಡಿದ್ದೇನೆ. ಇದು ರಾಮನಗರದಲ್ಲಾಗಿರಬಹುದು, ದೇವನಹಳ್ಳಿಯಲ್ಲಾಗಿರಬಹುದು, ಕೋಲಾರದಲ್ಲಾಗಿರಬಹುದು. ರೈತರು ಈ ರೀತಿ ಮಾಡಬೇಕಾದರೆ, ಅವರ ಪರಿಸ್ಥಿತಿ ಯಾವ ಹಂತವನ್ನು ತಲುಪಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಕೆಲಸ ಮಾಡಿಕೊಂಡು ಮನೆಗೆ ಬಂದ ತಕ್ಷಣ ಮನೆಯಲ್ಲಿ ವಿದ್ಯುತ್ ಹೋಗಿರುತ್ತದೆ. ನಮ್ಮ ಸರ್ಕಾರದ ಸೀಮೆಎಣ್ಣೆ ಮತ್ತು ಆಹಾರದ ನೀತಿ ಹೇಗಿದೆಯೆಂದರೆ ಗ್ರಾಮಾಂತರ ಪ್ರದೇಶದವರಿಗೆ ಮೂರು ಲೀಟರ್ ಸೀಮೆಎಣ್ಣೆ ಕೊಟ್ಟರೆ ಪಟ್ಟಣ-ಪ್ರದೇಶಗಳಲ್ಲಿರುವವರಿಗೆ ೧೩ ಲೀಟರ್ ಸೀಮೆಎಣ್ಣೆ ಕೊಡುವ ವ್ಯವಸ್ಥೆಯಿದೆ. ಕಾರಣ ಕೇಳಿದರೆ, ಗ್ರಾಮಾಂತರ ಪ್ರದೇಶದಲ್ಲಿ ಸೌದೆ ಸಿಗುತ್ತದೆಂಬ ಉತ್ತರ ಕೊಡುತ್ತಾರೆ. ಸೌದೆ ತಂದು ಯಾವ ರೀತಿ ದೀಪ ಹಚ್ಚಿ ಬೆಳಕು ಮಾಡಿಕೊಳ್ಳುತ್ತಾರೋ ನಮಗೆ ಗೊತ್ತಾಗುವುದಿಲ್ಲ. ಬಹುಶಃ ಮನೆಯೊಳಗೆ ದೀಪ ಹತ್ತಿದಾಗ ದೀಪದ ಅಷ್ಟೇ ಬೆಳಕಿನಲ್ಲಿ ರೈತ ಜೀವನ ಮಾಡಲಿ ಎನ್ನುವ ಅಭಿಪ್ರಾಯ ಸರ್ಕಾರಕ್ಕಿದ್ದರೂ ಇರಬಹುದು. ಮಕ್ಕಳು ಓದಬೇಕಾಗಿರತಕ್ಕಂಥ ಅವಧಿ ಸಂಜೆ ೭ರಿಂದ ಒಂಭತ್ತೂವರೆ ಗಂಟೆಯ ಅವಧಿಯಲ್ಲಿ ವಿದ್ಯುತ್ ಇರುವುದಿಲ್ಲ. ನಂತರ ಬರುತ್ತದೆ. ಆ ರಾತ್ರಿಯಲ್ಲಿ ರೈತ ತೋಟ, ಗದ್ದೆಗಳಿಗೆ ನೀರು ಬಿಡುವುದಕ್ಕೆ ಹೋಗುತ್ತಾನೆ. ನಮ್ಮ ತಾಲ್ಲೂಕಿನಲ್ಲಿ ಒಂದು ಅಪಾಯ ಏನೆಂದರೆ, ಕರಡಿಗಳ ಹಾವಳಿ ವಿಪರೀತ. ಅವು ರಾತ್ರಿಯಲ್ಲೇ ಸಂಚಾರ ಮಾಡುತ್ತವೆ. ಅವು ರಾತ್ರಿ ಹೊತ್ತು ತೋಟದ ಹತ್ತಿರ, ಕಬ್ಬಿನ ಗದ್ದೆ ಹತ್ತಿರ ಮತ್ತು ಹಲಸಿನ ಮರಗಳ ಕುಳಿತುಕೊಂಡಿರುತ್ತವೆ ಇಲ್ಲವೆ ಸುಳಿದಾಡುತ್ತಿರುತ್ತವೆ. ಆ ಸಮಯದಲ್ಲಿ ರೈತ ನೀರು ಬಿಡಲು ಹೋಗುವುದಕ್ಕಾಗುವುದಿಲ್ಲ. ಹೀಗಾದರೆ ರೈತ ವ್ಯವಸಾಯ ಮಾಡುವುದಾದರೂ ಹೇಗೆ? ಈಗ ಕರ್ನಾಟಕ ಸರ್ಕಾರ ಎಲ್ಲಾ ಯೋಜನೆಗಳ ಜೊತೆ ಬಹಳ ಅತ್ಯಂತ ಪ್ರಮುಖವಾಗಿರತಕ್ಕಂಥ ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡುವಂಥ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಬಹುಶಃ ಜನ ಕಲ್ಯಾಣ ಅಥವಾ ಜನಪರ ಯೋಜನೆಗಳು ಕುಂಠಿತವಾದರೂ ಪರವಾಗಿಲ್ಲ, ಈಗ ಅನುಷ್ಠಾನದಲ್ಲಿರತಕ್ಕ ಆಕ್ಷಯ, ಆಶ್ರಯ ಮುಂತಾದ ಯೋಜನೆಗಳನ್ನು ನಿಲ್ಲಿಸಿದರೂ ಪರವಾಗಿಲ್ಲ, ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಬಹಳ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬ ಮನವಿಯನ್ನು ಈ ಮೂಲಕ

ಮಾಡುತ್ತಿದ್ದೇನೆ. ಒಬ್ಬ ಒಳ್ಳೆಯ ಕೈಗಾರಿಕೋದ್ಯಮಿಯ ಅನಿಸಿಕೆ ಪ್ರಕಾರ ೧೯೯೨-೯೩ನೇ ಸಾಲಿನಲ್ಲಿ ವಿದ್ಯುತ್ ಕೊರತೆಯಿಂದಾಗಿ ಕರ್ನಾಟಕದಲ್ಲಿ ಹೂಡಬೇಕಾಗಿದ್ದಂಥ ೨೦೦೦ ಕೋಟಿ ರೂಪಾಯಿ ಬಂಡವಾಳ ಇವೊತ್ತು ಹೊರ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಮುಂತಾದ ರಾಜ್ಯಗಳಿಗೆ ಹರಿದು ಹೋಯಿತು ಎನ್ನತಕ್ಕಂಥ ಮಾತು ಅಧಿಕೃತ ದಾಖಲೆಗಳಲ್ಲಿ ಹೇಳುವುದಕ್ಕೆ ಸಾಧ್ಯವಾಗದಿದ್ದರೂ ಅವರ ಅನಿಸಿಕೆ ಸತ್ಯಕ್ಕೆ ದೂರವೇನಲ್ಲ. ಅವರು ಸುಳ್ಳು ಅಥವಾ ಅಪ್ಪಿ-ತಪ್ಪಿ ಸರ್ಕಾರದ ಬಗ್ಗೆ ಕೆಟ್ಟ ಮಾತನ್ನು ಆಡುವವರಲ್ಲ, ಅವರು ತಮ್ಮ ಅನಿಸಿಕೆಯನ್ನು ಬಹಳ ಪ್ರಾಮಾಣಿಕವಾಗಿ ಹೇಳಿದರು. ಏನೆಂದರೆ

"Mr . Lingappa, we have lost not less than Rs. 2,000 crores worth of capital to be invested in Karnataka, wich has gone out of Karnataka for want of power."

ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಧಿಕಾರ ವಹಿಸಿಕೊಂಡಾಗಿನಿಂದ ಒಂದು ವಿಚಾರದಲ್ಲಿ ಬಹಳ ಒತ್ತನ್ನು ಕೊಡುತ್ತಿದ್ದಾರೆ. ಕರ್ನಾಟಕವನ್ನು ಕೈಗಾರಿಕೆಯಲ್ಲಿ ಮುಂದೆ ತರಬೇಕು, ಹಿಂದೆ ಕೈಗಾರಿಕಾ ರಂಗದಲ್ಲಿ ಕರ್ನಾಟಕ ೩-೪ ಸ್ಥಾನಗಳಲ್ಲಿದ್ದುದು ಇಂದು ಬಹಳ ಕೆಳಮಟ್ಟಕ್ಕೆ ಹೋಗಿರುವುದರಿಂದ ಮತ್ತೆ ನಾನು ಅದೇ ಸ್ಥಾನಕ್ಕೆ ತರುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಕೈಗಾರಿಕೆ ಬಗ್ಗೆ ಬಹಳ ಪ್ರಾಮಾಣಿಕ ಕಳಕಳಿ ಇಟ್ಟುಕೊಂಡಿರುವುದರಿಂದ ನಾನು ಹೆಚ್ಚು ಒತ್ತು ಕೊಟ್ಟು ಈ ಮಾತನ್ನು ಹೇಳುತ್ತಿದ್ದೇನೆ: ಏನೆಂದರೆ, ಕರ್ನಾಟಕದಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆಯಾಗುವುದಕ್ಕೆ ತಾವು ವ್ಯಾಪಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ, ಈ ರಾಜ್ಯ ಬೆಳೆಯುವುದಕ್ಕೆ, ಮತ್ತು ರೈತರಿಗೆ ಬಹಳ ಅನುಕೂಲವಾಗುತ್ತದೆ. ಅಲ್ಲದೆ, ಇವೊತ್ತು ರೈತ ಅನೇಕ ಸಮಸ್ಯೆಗಳ ಮಧ್ಯೆ ಸಿಲುಕಿ ಕಷ್ಟ ಪಡುತ್ತಿರುವಂಥ ಕಾಲದಲ್ಲಿ ಕೊನೆಯ ಪಕ್ಷ ವಿದ್ಯುಚ್ಛಕ್ತಿ ಸರಬರಾಜಾಗುವ ವಾತಾವರಣ ನಿರ್ಮಾಣ ಮಾಡುವಂಥ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ನಾನು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷಿ ಕ್ಷೇತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ವರ್ಷದ ಕೇಂದ್ರಸರ್ಕಾರದ ಗೊಬ್ಬರದ ನೀತಿಯಿಂದಾಗಿ ಬಹುಶಃ ಇನ್ನು ಮುಂದೆ ಮುಂದೆ ಆಹಾರದ ಉತ್ಪಾದನೆಯು ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ನಾನು ಊಹೆಮಾಡುವುದಕ್ಕೆ ಆಗುತ್ತಿಲ್ಲ. ಇತ್ತೀಚೆಗೆ ಒಬ್ಬ ಪರಿಣಿತರ ಅಂಕಿಅಂಶಗಳ ಪ್ರಕಾರ ಕರ್ನಾಟಕದಲ್ಲಿ ೧೯೯೧-೯೨ನೇ ಸಾಲಿನಲ್ಲಿ ಉಪಯೋಗವಾದಂಥ ಪೊಟ್ಯಾಷ್, ಸಲ್ಫೇಟ್ ಗೊಬ್ಬರದ ಪ್ರಮಾಣ ತೆಗೆದುಕೊಂಡಾಗ ೧೯೯೨-೯೩ನೇ ಸಾಲಿನಲ್ಲಿ ಪೊಟ್ಯಾಷ್ ಶೇಕಡ ೩೦ ರಷ್ಟು ಮತ್ತು ಸಲ್ಫೇಟ್ ಶೇಕಡ ೫೦ ರಷ್ಟು ಕಡಿಮೆ ಉಪಯೋಗವಾಗಿದೆ, ಅಂದಮೇಲೆ ಅದರ ಅಂತಿಮ ಪರಿಣಾಮ ಆಹಾರ ಉತ್ಪಾದನೆಯಮೇಲೆ ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಯ ಮೇಲೆ ಬೀರಿ ಸಾಕಷ್ಟು ಉತ್ಪಾದನೆಯಲ್ಲಿ ಕುಂಠಿತವಾಗುತ್ತದೆ ಎನ್ನುವ ಬಗ್ಗೆ ನಾವು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ರೈತರಿಗೆ ಇವತ್ತು ಗೊಬ್ಬರವು ಬಹಳ ದುಬಾರಿಯಾಗಿದೆ, ನಾನು ರಾಗಿ ಬೆಳೆಯತಕ್ಕ ಪ್ರದೇಶದಿಂದ ಬಂದಿದ್ದೇನೆ, ನನ್ನ ಲೆಕ್ಕಾಚಾರದ ಪ್ರಕಾರ ಒಂದು ಖಂಡಗ ರಾಗಿಯನ್ನು, ಎರಡು ಕ್ವಿಂಟಾಲ್ ರಾಗಿಯನ್ನು ಮಾರಿದರೆ ಸುಮಾರು ೫೦ ಕೆ.ಜಿ. ಅಂದರೆ, ಒಂದು ಮೂಟೆ ಗೊಬ್ಬರವನ್ನು ನಾವು ಕೊಂಡುಕೊಳ್ಳಬಹುದು, ಮಳೆಯನ್ನೇ ಆಶ್ರಯಿಸಿರುವ ನಮ್ಮ ರೈತರು ಒಂದು ಎಕರೆಯಲ್ಲಿ ಬೆಳೆಯತಕ್ಕ ೪-೫ ಕ್ವಿಂಟಾಲ್ ರಾಗಿಗಾಗಿ ಸುಮಾರು ೫೦೦ ರಿಂದ ೭೫೦ ರೂ. ಮೊತ್ತದ ಗೊಬ್ಬರವನ್ನು ಬಳಕೆ ಮಾಡತಕ್ಕಂಥ ಪರಿಸ್ಥಿತಿ ಬಂದಾಗ ಬಹುಶಃ ಎಷ್ಟರಮಟ್ಟಿಗೆ ಆಹಾರದ ಉತ್ಪಾದನೆಯಾಗುತ್ತದೆ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ರೈತನ ಕಷ್ಟಗಳ ಬಗ್ಗೆ ನಾನು ಒಂದು ಕವನದ ಮೂಲಕ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಈ ರೈತ ದೇಶದ ಬೆನ್ನಲುಬು ಎಂದು ಹೇಳಿದ್ದೇ ಹೇಳಿದ್ದು ಮೆಚ್ಚಿಸಲೆಂದು, ದೇಶದ ಬೆನ್ನೆಲುಬು ರೈತ ಎಂದು ಹೇಳಿದ್ದೇ ಹೇಳಿದ್ದು, ನಷ್ಟವೊ, ಲಾಭವೊ ದುಡಿಯುತ್ತಲೇ ಬಂದ ರಾಜ್ಯಕ್ಕೆ ಅನ್ನ ನೀಡುವುದಕ್ಕಾಗಿ ಅನಾದಿ ಕಾಲದಿಂದ, ಸಾಲದ ಹೊರೆಯನ್ನೊತ್ತು, ನೀರಿನ ಕೊರತೆಯನ್ನುಂಡು, ಕಾಳು ಬೆಳೆಯದಿದ್ದರು ವಿದ್ಯುಚ್ಛಕ್ತಿಯವರೊಡನೆ ಇವನೆ ಕಣ್ಣಾಮುಚ್ಚಾಲೆ. ತಾಪತ್ರಯಗಳೊಡನೆ ಇವನು ನಿಜವಾದ ಜಗಮೊಂಡು ಹೋರಾಟವೇ ಅವನಿಗೆ ಒಂದು ಕಲೆ, ನಷ್ಟವಾಯಿತೆಂದು ಛಲವನ್ನು ಬಿಡದೆ ದುಡಿದು, ನಷ್ಟವಾಯಿತೆಂದು ಛಲವನ್ನು ಬಿಡದೆ ದುಡಿದು. ಸದಾ ದುಡಿಯುವುದೇ ಕರ್ತವ್ಯವೆಂದು ತಿಳಿದು, ಸಂಪಾದಿಸಿದ ಮನೆಯವರಿಗೆಲ್ಲಾ ಆಗುವಷ್ಟು ಸಾಲ.

ಇಷ್ಟೆಲ್ಲಾ ಕಷ್ಟ ಬಂದಮೇಲೂ ತಿಳಿದು ಏನಿದೆ ಎಂದರೆ ಮನೆಯವರಿಗೆಲ್ಲಾ ಆಗುವಷ್ಟು ಸಾಲ,

ಎಂದಿಗೆ ಅವನಿಗೆ ಬರುವುದೋ ಸುಖ ಜೀವನದ ಕಾಲ?

ಇಂಥ ಒಂದು ಪರಿಸ್ಥಿತಿಯಲ್ಲಿ ರೈತನು ಬದುಕುತ್ತಿದ್ದಾನೆ, ಅವನ ಹೊರೆಯನ್ನು ತಗ್ಗಿಸತಕ್ಕಂಥ ಕೆಲವಾರು ಕಾರ್ಯಕ್ರಮಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮುಂದಿನ ಬಜೆಟ್‌ನಲ್ಲಿ ನೀಡುತ್ತಾರೆ ಎನ್ನತಕ್ಕಂಥ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ, ರೈತನು ಸಹಕಾರಿ ಸಂಘಗಳಿಂದ ಮಾಡಿರತಕ್ಕ ಸಾಲವನ್ನು ೪-೫ ವರ್ಷಗಳಿಂದಲೂ ನಾವೆಲ್ಲರೂ ಹೇಳಿ ಅಂದರೆ ಕಾಂಗ್ರೆಸ್ ಪಕ್ಷದವರಲ್ಲ, ಎಲ್ಲಾ ರಾಜಕಾರಣಿಗಳು ಕಾಲಕಾಲಕ್ಕೆ ಕಟ್ಟತಕ್ಕ ಸಾಲವನ್ನು ಕಟ್ಟಬೇಡಿ ಎಂದು ಹೇಳಿದ್ದೇವೆ, ಅವನ ಸಾಲವನ್ನು ಪೂರ್ಣವಾಗಿ ಮನ್ನಾ ಸಹ ಮಾಡಲಿಲ್ಲ, ಸಾಲಕಟ್ಟುವುದಕ್ಕೂ ಅವಕಾಶ ಕೊಡಲಿಲ್ಲ. ಕಡೆಗೆ ಅವನು ಈಗ ೪-೫ ವರ್ಷಗಳಿಂದ ಅವನ ಸಾಲದ ಮೇಲೆ ಬಡ್ಡಿಯು ಏರಿಕೊಂಡು ಹೋಗಿ ಅವನು ಏನು ಮಾಡಬೇಕೆಂದು ತೋಚದೆ ಅಸಹಾಯಕನಾಗಿ ಕುಳಿತಿದ್ದಾನೆ. ದಯಮಾಡಿ ಸರ್ಕಾರ ಇದಕ್ಕೆ ಒಂದು ಅಂತಿಮ ತೆರೆಯನ್ನು ಎಳೆಯುವುದಕ್ಕಾಗಿ ಸಹಕಾರಿ ಸಂಘಗಳಿಂದ ತೆಗೆದುಕೊಂಡಿರತಕ್ಕ ರೂ. ೧೦,೦೦೦ ವರೆಗಿನ ಸಾಲದ ಪೂರ್ಣ ಬಡ್ಡಿಯನ್ನು ಮನ್ನಮಾಡಿ ಅಸಲನ್ನು ಕಂತಿನ ಮೂಲಕ ತೆಗೆದುಕೊಂಡು ಸಹಕಾರ ಸಂಘಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವ ಹಾಗೂ ರೈತನು ಸಾಲದ ಹೊರೆಯಿಂದ ವಿಮುಕ್ತಿಯಾಗುವುದಕ್ಕೂ ಪರಿಣಾಮಕಾರಿಯದ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಕಳಕಳಿಯಿಂದ ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಗ್ರಾಮಾಂತರ ಪ್ರದೇಶದ ನೈರ್ಮಲ್ಯದ ಬಗ್ಗೆ ಗ್ರಾಮ ಮತ್ತು ಅರೆನಗರ ಪ್ರದೇಶಗಳಲ್ಲಿನ ನೈರ್ಮಲ್ಯ ಸುಧಾರಣೆ, ಆರೋಗ್ಯದ ರಕ್ಷಣೆ ಮಾಡತಕ್ಕ ಕಾರ್ಯಕ್ರಮ ಜನನ ಪ್ರಮಾಣ ಕಡಿಮೆಯಾಗತಕ್ಕ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪವಾಗಿದೆ. ಈ ಜನನದ ಪ್ರಮಾಣದ ನಿಯಂತ್ರಣದ ಬಗ್ಗೆ ಇದುವರೆಗೆ ಕೆಲಸ ನಡೆದಿದೆಯಾದರೂ ಕೂಡ ಪರಿಣಾಮಕಾರಿಯಾದ ರೀತಿಯಲ್ಲಿ ಇನ್ನೂ ಕೆಲಸಗಳು ಆಗಬೇಕಾಗಿದೆ ಎಂದರೆ ಬಹುಶಃ ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ. ಕೆಲವು ಧಾರ್ಮಿಕ ನಂಬಿಕೆಯನ್ನು ಹೊಂದಿರತಕ್ಕ ನಮ್ಮ ಸಹೋದರರು ಇದರ ಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿಯನ್ನು ವಹಿಸದೆ ಇರುವಾಗ, ದೇಶದ ಒಟ್ಟಾರೆ ಹಿತದೃಷ್ಟಿಯಿಂದ ಯಾವುದೇ ಒಂದು ಧಾರ್ಮಿಕ ನಂಬಿಕೆಯನ್ನು ಹೊಂದಿರತಕ್ಕ ಜನರು ಸಹ ಇದಕ್ಕೆ ಮನಸ್ಸು ಮಾಡಬೇಕು. ಅವರ ಮನಸ್ಸನ್ನು ಪರಿವರ್ತನೆ ಮಾಡತಕ್ಕ ಕೆಲಸಗಳೂ ಕೂಡ ಸಂಘಸಂಸ್ಥೆಗಳಿಂದ, ಸರ್ಕಾರದ ವತಿಯಿಂದ ಮತ್ತು ಇತರೇ ಮಾಧ್ಯಮಗಳ ಮೂಲಕ ಮಾಡಬೇಕೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಿಂದಿನ ಸರ್ಕಾರದಿಂದ ಪ್ರಾರಂಭಗೊಂಡಂತಹ ಯೋಜನೆಗಳು ದುರ್ಬಲ ವರ್ಗದವರಿಗೆ ನಿವೇಶನ ಮನೆ ಇಲ್ಲದವರಿಗೆ ನಿವೇಶನ ಮತ್ತೆ ಮನೆ ಕೊಡತಕ್ಕಂತ ವಿಚಾರ, ಇವತ್ತು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ೩ ವರ್ಷಗಳಾದರೂ ಎಷ್ಟು ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆಂದರೆ,

ವರ್ಷಕ್ಕೆ ೧ ಸಾವಿರ ಮನೆಗಳನ್ನು ೧ ತಾಲ್ಲೂಕಿನಲ್ಲಿ ಅಥವಾ ಕ್ಷೇತ್ರದಲ್ಲಿ ಮಾಡುತ್ತೇವೆಂದು ಹಿಂದೆ ಹೇಳಿದರು. ಆದರೆ ನಾವು ಎಷ್ಟು ಮನೆಗಳನ್ನು ಮಾಡಿದ್ದೇವೆಂದು ವಿಚಾರ ಮಾಡಬೇಕಾಗುತ್ತದೆ. ರಾಮನಗರದ ಬಿ.ಡಿ.ಓ. ಕಛೇರಿ ಹತ್ತಿರ ಸ್ಯಾಂಪಲ್‌ಗೆಂದು ಮನೆಯನ್ನು ಕಟ್ಟಿದ್ದಾರೆ. ನಾವು ಮುಂದೆ ಈ ರೀತಿ ಮನೆಯನ್ನು ಕಟ್ಟುತ್ತೇವೆಂದು. ಆ ಮನೆ ಎಷ್ಟು ಅವೈಜ್ಞಾನಿಕವಾಗಿ ಇದೆ ಎಂದರೆ ಸಾಮಾನ್ಯ ನಾಗರೀಕರು ಯಾರೂ ವಾಸಮಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಇದೆ. ಅಂತಹ ಮನೆಗಳನ್ನು ಕಟ್ಟುವುದಕ್ಕೆ ಬದಲಾಗಿ, ಅಂಥ ಮನೆಗಳಿಗೆ ಸಹಾಯ ಮಾಡುವುದಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ತಾಲ್ಲೂಕಿಗೆ ೧ ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಬದಲಾಗಿ ತಾಲ್ಲೂಕಿಗೆ ೫೦೦ ರಂತೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಮಾಡೋಣವೆಂದು ಚಿಂತನೆ ಮಾಡಿ ಇದಕ್ಕೆ ಕಾರ್ಯಕ್ರಮ ಕೊಟ್ಟಿದ್ದಾರೆ. ದಯಮಾಡಿ ಇನ್ನು ಉಳಿದ ಅವಧಿಗೆ ಕನಿಷ್ಠ ಒಂದು ತಾಲ್ಲೂಕಿನಲ್ಲಿ ೨ ಸಾವಿರ ಮನೆಗಳನ್ನು ನಿರ್ಮಾಣ ಮಾಡುವಂಥ ಕಾರ್ಯಕ್ರಮ ಹಾಕಿಕೊಳ್ಳಿ. ನಿವೇಶನ ಹಂಚಿಕೆ ವಿಚಾರದಲ್ಲಿ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಕಡೆ ಈಗ ಸರ್ಕಾರದವರು ಏನು ಬೆಲೆ ನಿಗದಿ ಮಾಡಿದ್ದಾರೆ ಆ ಬೆಲೆಗೆ ಭೂಮಿಗಳು ಸಿಗುವುದಿಲ್ಲ. ಭೂಮಿಗಳು ಸಿಗದಿದ್ದರೆ ನಿವೇಶನ ಹಂಚುವುದರಲ್ಲಿ ನಾವು ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ಮರು ಚಿಂತನೆ ಮಾಡಿ ಇಡೀ ರಾಜ್ಯಕ್ಕೆ ಒಂದೇ ನೀತಿ ಅನುಸರಿಸುವುದನ್ನು ಬಿಟ್ಟು, ಎಲ್ಲಿ ಹೆಚ್ಚಿನ ಬೆಲೆ ಬಾಳತಕ್ಕಂತಹ ಭೂಮಿ ಇದೆ ಆ ಪ್ರದೇಶಕ್ಕೆ ಒಂದು ಬೆಲೆ ನಿಗದಿ ಮಾಡಿ, ಎಲ್ಲಿ ಕಡಿಮೆ ಬೆಲೆಗೆ ಭೂಮಿ ಸಿಗುತ್ತದೆ ಅಂತಹ ಪ್ರದೇಶಗಳಲ್ಲಿ ಒಂದು ಬೆಲೆ ನಿಗದಿ ಮಾಡಿ. ಹೆಚ್ಚು ಭೂಮಿಯನ್ನು ಖರೀದಿ ಮಾಡಿ ಹೆಚ್ಚು ನಿವೇಶನವನ್ನು ಬಡವರಿಗೆ, ದುರ್ಬಲವರ್ಗದವರಿಗೆ ಕೊಡುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ವಿನಂತಿಸುತ್ತೇನೆ. ಇನ್ನು ಗ್ರಾಮೀಣ ಅಭಿವೃದ್ಧಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದುವರೆಗೂ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಾಗಲೀ ಇನ್ನಾವುದೇ ಸಬ್ಸಿಡಿ ರೂಪದಲ್ಲಾಗಲೀ ಸಾಲ ಕೊಡತಕ್ಕಂತಹ ಯೋಜನೆಯಾಗಲೀ ಪರಿಣಮಕಾರಿಯಾಗಿ ಯಶಸ್ವಿಯಾಗುವುದಿಲ್ಲ ಎನ್ನುವುದನ್ನು ನಮ್ಮಲ್ಲಿ ಎಲ್ಲರೂ ಒಪ್ಪುತ್ತಾರೆ. ಇದು ಪರಿಣಾಮಕಾರಿಯಾಗಿ ಜಾರಿಯಾದಗಲೇ ಬಡತನದ ರೇಖೆಯಿಂದ ಕೆಳಗೆ ಇರತಕ್ಕಂತಹವರು ಆರ್ಥಿಕವಾಗಿ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮಾಂತರ ಕುಡಿಯುವ ನೀರಿನ ಬಗ್ಗೆ ಶ್ರೀಮಾನ್ ಆಚಾರ್‌ರವರು ಪ್ರಸ್ತಾಪ ಮಾಡಿದರು. ವಿಶ್ವಬ್ಯಾಂಕ್, ಡ್ಯಾನಿಡ ಇನ್ನಾವುದೋ ಸಂಸ್ಥೆಯಿಂದ ಬರುತ್ತದೆಂದು ಹೇಳುತ್ತಾರೆ. ವಿಶ್ವ ಬ್ಯಾಂಕ್‌ನ ಯೋಜನೆಗಳು ಬಹುಶಃ ಬಿಸಿಲುಕುದುರೆಯ ಬೆನ್ನು ಹತ್ತಿದಂತೆ ಎಂದು ನನ್ನ ಅಭಿಪ್ರಾಯ. ಕಾರಣವಾದರೂ ಇಷ್ಟೆ ೮೭-೮೮ರಲ್ಲಿ ಪ್ರಾರಂಭ ಮಾಡಿದಂತಹ ವಿಶ್ವಬ್ಯಾಂಕ್ ಕುಡಿಯುವ ನೀರಿನ ಯೋಜನೆಗಳು ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಅದಕ್ಕಾಗಿ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರದವರು ಒಂದು ಖಚಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಸಮಸ್ಯಾತ್ಮಕ ಗ್ರಾಮಗಳಲ್ಲಿ ಮತ್ತು ಹೆಚ್ಚು ಜನಸಂಖ್ಯೆಯುಳ್ಳಂತಹ ಗ್ರಾಮಗಳಲ್ಲಿ ವ್ಯವಸ್ಥಿತವಾದ ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆ ಮಾಡಬೇಕು. ಇನ್ನು ಉಳಿದ ವಿಚಾರಗಳನ್ನು ಮಾನ್ಯ ಆಚಾರ್‌ರವರು ಸಾಕಷ್ಟು ವಿಚಾರವಾಗಿ ಪ್ರಸ್ತಾಪ ಮಾಡಿರುವುದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೆ ಈ ರಾಜ್ಯಪಾಲರ ಭಾಷಣವನ್ನು ಸರಕಾರದವರು ಅವರ ಮುಖಾಂತರ ಹೇಳಿಸತಕ್ಕಂಥ ಒಂದು ನೀತಿಯ ಹೇಳಿಕೆಗಳು, ಸ್ಟೇಟ್‌ಮೆಂಟ್ ಆಫ್ ಪಾಲಿಸಿ ಇದಾಗಿದೆ. ನನಗೆ ಈಗಿನ ನಮ್ಮ ನಾಯಕರಲ್ಲಿ ಬಹಳ ವಿಶ್ವಾಸ ಇದೆ. ಕೇವಲ ಔಪಚಾರಿಕವಾಗಿ ರಾಜ್ಯಪಾಲರ ಬಾಯಲ್ಲಿ ಇವರು ಹೇಳಿಕೆಗಳನ್ನು ಹೇಳಿಸಿಲ್ಲ. ಇವರು ಹೇಳಿಸಿರತಕ್ಕಂಥ ಎಲ್ಲಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮುಂದಿನ ವರ್ಷಗಳಲ್ಲಿ ಅನುಷ್ಠಾನಕ್ಕೆ ತರಬೇಕು. ಬರೀ ಬಾಯಿಮಾತಿನಲ್ಲಿ ಹೇಳಿಕೊಂಡು ಹೋದರೆ ಇನ್ನು ಉಳಿದಿರತಕ್ಕಂತಹ ಅವಧಿಯಲ್ಲಿ ಜನರ ಮುಂದೆ ಹೋಗಿ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಖಂಡಿತ ಮಾನ್ಯ

ಮುಖ್ಯ ಮಂತ್ರಿಯವರು ಮನಗಾಣುತ್ತಾರೆಂದು ಕಳಕಳಿಯ ಪ್ರಾರ್ಥನೆಯನ್ನು ಮಂಡಿಸಿ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಹೇಳತಕ್ಕಂತಹ ನಿರ್ಣಯದ ಅನುಮೋದನೆಯನ್ನು ಬಹಳ ಸಂತೋಷವಾಗಿ ಇಲ್ಲಿ ಮಾಡುತ್ತಾ ಕಡೆಯದಾಗಿ ನನಗೆ ಈ ಕಾರ್ಯವನ್ನು ಮಾಡುವಂತಹ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಈ ಅನುಮೋದನಾ ಪ್ರಸ್ತಾಪವನ್ನು ಮುಕ್ತಾಯ ಮಾಡುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದಮೇಲೆ ತಿದ್ದುಪಡಿ

ಛೇರ್ಮನ್:- ಮಾನ್ಯ ಏಕಾಂತಯ್ಯನವರು ತಿದ್ದುಪಡಿಯನ್ನು ಮಂಡಿಸುವುದು.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತೇನೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು.

''ಆದರೆ ಕೃಷಿಗೆ ಸಂಬಂಧಿಸಿದಂತೆ ಉದ್ದೇಶಿಸಲಾದ ವ್ಯಾಪಾರ ಮತ್ತು ಸುಂಕಗಳ ಸಾಮಾನ್ಯ ಕರಡು ಒಪ್ಪಂದದ ಡಂಕಲ್ ಪ್ರಸ್ತಾವನೆಗಳ ಬಾಬ್ತು ರಾಜ್ಯಸರ್ಕಾರದ ಧೋರಣೆ ಬಗ್ಗೆ ಯಾವುದೇ ರೀತಿಯಲ್ಲಿ ಪ್ರಸ್ತಾವಿಸದಿರುವುದಕ್ಕೆ ಮತ್ತು ರಾಜ್ಯ ರೈತರಿಗೆ ರಿಯಾಯಿತಿ ಬಡ್ಡಿ ದರಗಳಲ್ಲಿ ಸಾಲ ಸೌಲಭ್ಯ, ಬೆಳೆದ ಬೆಳೆಗಳಿಗೆ ಲಾಭದಾಯಕವಾದ ಬೆಲೆ ನಿಗದಿ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಯಾವುದೇ ಪ್ರಸ್ತಾವ ಮಾಡದಿರುವುದಕ್ಕೆ ಈ ಸದನವು ವಿಷಾದಿಸುತ್ತದೆ.

ಛೇರ್ಮನ್:- ತಿದ್ದುಪಡಿಯನ್ನು ಮಂಡಿಸಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್), ಹಾಗೂ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ), ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣ ವಂದನಾರ್ಪಣಾ ಪ್ರಸ್ತಾವದ ಮೇಲೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತೇನೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು.

''ಆದರೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಪಂಚಾಯತ್‌ರಾಜ್ ಸಂಸ್ಥೆಗಳ ಚುನಾವಣೆಗಳು ೧೯೯೩ರ ಜೂನ್ ತಿಂಗಳೊಳಗಾಗಿ ನಡೆಸುವುದಾಗಿ ಪ್ರಸ್ತಾಪಿಸದಿರುವುದಕ್ಕೆ ಈ ಸದನವು ವಿಷಾದಿಸುತ್ತದೆ.

ಛೇರ್ಮನ್:- ತಿದ್ದುಪಡಿಯನ್ನು ಮಂಡಿಸಲಾಯಿತು.

(ಮಾನ್ಯ ಸದಸ್ಯರಾದ ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು ಸಭೆಯಲ್ಲಿ ಹಾಜರಿರಲಿಲ್ಲ.)

ಛೇರ್ಮನ್:- ಸಭೆಯನ್ನು ಇಲ್ಲಿಗೆ ಮುಕ್ತಾಯಮಾಡಿ ನಾಳೆ ಬೆಳಿಗ್ಗೆ ೯.೩೦ ಗಂಟೆಗೆ ಪುನಃ ಸೇರುವುದು.

(ಸದನವು ಸಂಜೆ ೬.೪೪ ಗಂಟೆಗೆ ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ ೯.೩೦ ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

* ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥಾವ ಟಿಪ್ಪಣೆಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.